# ಸ್ವಚ್ಛಂದ

● ಗಿರಿಜಾ ಅಣೆಪ್ಪನವರ

ಮ್ಲಾನವದನದ ಕಲ್ಯಾಣಿ ಯಾವುದೋ ಚಿಂತೆಯ ಸುಳಿಯಲ್ಲೇ ಸುತ್ತುವರೆದವಳಂತೆ ತನ್ನ ಸಖಿ ಅರುಣಾಳ ಮನೆ ಬಾಗಿಲಲ್ಲಿ ಬಂದು ನಿಂತಳು. ಗೆಳತಿಯ ಕೂಗೋಣವೆಂದರೆ ಏನೋ ಒಂದು ನೀರಸಭಾವ. ಇದೂವರೆಗೂ ನಡೆದುಬಂದುದರ ಆಯಾಸ.

ಏನು? ಪ್ರತಿಮೆಯ ಹಾಗೆ ನಿಂತುಬಿಟ್ಟೆ,ಯಾವಾಗಲೂ ಏಕಾಗ್ರಚಿತ್ತವುಳ್ಳವಳಲ್ಲವೆ ನೀನು! ಬಾ ಬಾ ಒಳಗೆ ಅರುಣಾ, ಕಲ್ಯಾಣಿ ಬಂದಿದಾಳೆ ನೋಡು ಎಂಬ ಅರುಣಾಳ ಅಜ್ಜನ ಕರೆಯ ಸ್ವಾಗತದ ಕೂಗು ಕೇಳಿ ನಾಚಿಕೆಬಂದಂತೆನಿಸಿದ ಕಲ್ಯಾಣಿ ಕೊಂಚ ನಗಲೆತ್ನಿಸಿದಳು.

"ಹಾ ಕಲ್ಯಾಣಿ ಎಷ್ಟೊತ್ತಾಯ್ತೆ ಬಂದು ? ಕೂಗಬಾರದೇನೆ ? ಎಂದು ಗೆಳತಿಯು ಬಂದು ಕೈ ಒತ್ತಿದಾಗ ಕಲ್ಯಾಣಿಯ ಮನ ಸ್ವಲ್ಪ ಹಗುರದಿಂದ ನಲಿದಾಡಿತು. ಗೆಳತಿಯ ನಗುಮುಖ ಕಂಡು ಕಲ್ಯಾಣಿ ತಾನೂ ಮುಗುಳ್ನಗೆಯ ಸಾಹಸಕ್ಕೆ ತೊಡಗಿದಳು. ಗೆಳತಿಯ ಹತಾಶಭಾವ, ಚಿಂತೆಯಿಂದ ಕುಂದಿದ ಮುಖ, ನಗುವಿನ ಸೋಗು ಕಂಡ ಅರುಣಾಳಿಗೆ ಯಾವುದೋ ಸಂದೇಹಕ್ಕೆ ಎಡೆಯಾಯಿತು. ಗೆಳತಿಯು ಯಾವುದೋ ಚಿಂತೆಯಲ್ಲಿದ್ದಾಳೆ ಎಂದುಕೊಂಡ ಅರುಣಾ

"ಬಾರೇ ಇಲ್ಲೇ ಕಟ್ಟೇಮ್ಯಾಲೆ ಕೂಡೋಣ" ಅಂದಳು.

"ಇಲ್ಲಿ ಬೇಡ, ಮೇಲೆ ಹೋಗೋಣ" ಎಂದು ಕಲ್ಯಾಣಿ ಮಾಳಿಗೆ ಏರುವ ಮೆಟ್ಟಿಲು ಹತ್ತಿದಳು. ಒಂದೆಡೆ ಸ್ಥಳ ಮಾಡಿಕೊಂಡು ಈರ್ವರೂ ಕುಳಿತರು. ಅವಳ ಅನ್ಯ ಮನಸ್ಕತೆಯ ಭಾವದ ಇಂಗಿತವನ್ನರಿತ ಅರುಣಾ,

"ಇದೇನು ಕಲ್ಯಾಣಿ ಈ ತರಹ ನೀನು ......"

"ಏನಿಲ್ಲ". ಯಾವುದೋ ವಿಚಾರದಲ್ಲಿ ಮಗ್ನಳಾದ ಕಲ್ಯಾಣಿ ಬಾನಂಗಳದೊಳಗೆ ವಿಹರಿಸುವ ಸ್ವಚ್ಛಂದ ಪಕ್ಷಿಯೆಡೆ ದಿಟ್ಟಿಸುತ್ತಾ ಅಂದಳು.

"ಏನೋ ಗೆಳತಿಯವರ ಮೂಡ್ ಚೆನ್ನಾಗಿಲ್ಲ. ಏನೋ ವಿಚಾರಿಸುತ್ತಿದ್ದಂತೆ ತೋರುತ್ತದೆ ಮತ್ತೇನು ವಿಶೇಷ" ಎಂದಳು ಅರುಣಾ.

"ಅಲ್ಲೇ ಅರುಣಾ, ನಾವು ಹಕ್ಕಿಯಂತೆ ಹಾರಾಡುತ್ತಿದ್ದರೆ ಎಷ್ಟೊಂದು ಚೆನ್ನಾಗಿತ್ತು ಎನ್ನಿಸುತ್ತದೆಯಲ್ಲವೆ ಈಗ! ಅವುಗಳ ಪ್ರವೃತ್ತಿ, ಅವುಗಳಿಗಿದ್ದ ಸ್ವಾತಂತ್ರ್ಯ ಈ ನರಜಿಳ್ಳೆಗೆ ಸಾಧ್ಯವಿಲ್ಲ."

ಅವಳಿಂದ ಬಂದ ಪ್ರಶ್ನೆಗುತ್ತರವಾಗಿ ಹೇಳಲು ಅರುಣಾಳಿಗೆ ಕೊಂಚ ಸಮಯ ಹಿಡಿಯಿತು. ಯಾವ ವಿಷಯವಾಗಿ ಇವಳು ಈ ರೀತಿ ವಾದಿಸುತ್ತಿದ್ದಾಳೆ ಎಂಬುದರ ಅರಿವು ಮೂಡಲು ಅರುಣಾಳಿಗೆ ಅಸಾಧ್ಯವಾಯಿತು. ಅವಳ ಈ ವಾದದಲ್ಲಿ ಅರ್ಥ ಇಲ್ಲವೆಂದು ಹೇಳಲು ಬರುವದೇ ಇಲ್ಲ ಎಂದು ವಿಚಾರದಲ್ಲಿದ್ದ ಅರುಣಾ

"ಕಲ್ಯಾಣಿ, ಪಕ್ಷಿಗಳಿಗಿದ್ದ ಸ್ವಾತಂತ್ರ್ಯ ನಮಗಿಲ್ಲ ನಿಜ. ಇಂಥ ಕ್ರೂರಸಮಾಜದಲ್ಲಿ ಹಕ್ಕಿಯಂತೆ ಸ್ವೇಚ್ಛೆಯಾಗಿ ವಿಹರಿಸಲು ಮುಕ್ತತೆ ಅಷ್ಟಿಷ್ಟು ಸಿಕ್ಕರೂ ನಮಗೆ ಗೋಡೆಗಳ ಬಂಧುರವಿದೆ. ಅದಿರಲಿ, ಸ್ವಚ್ಛಂದವಾಗಿ ವಿಹರಿಸುವ ಆ ಹಕ್ಕಿ ಯಾವುದೋ ಉಲ್ಲಾಸದಲ್ಲಿ ನಲಿದಾಡುತ್ತಿರುತ್ತದೆ. ಅದೇವೇಳೆ ಅದಕೊಂದು ಬರಸಿಡಿಲು ಎರಗಿದಾಗ ಕಟುಕ ಹೃದಯಿ ಬೇಡನ ಬೇಟೆಗೆ ವ್ಯುತ್ಯುಪೀಡಾದಾಗ ಆ ನಲಿದಾಡುವ ಪಕ್ಷಿಯ ಗತಿಯೇನು? ಎಂದು ಅವಳಿಗೇ ಮರುಸವಾಲು ಹಾಕಿದಳು.

"ಹಾ ಅಂಥ ನಿರ್ದಯಿಗಳು ಈಗ ಕಾಣಸಿಗಲು ಅಪರೂಪವೇನಿಲ್ಲ. ಒಂದು ಪಕ್ಷಿಯ ಗತಿಯಂತೆ ಈ ಬಾಳಪ್ರಪಂಚದ ಹಕ್ಕಿಗಳಿಗೂ ಸಾಕಷ್ಟು ಹೀನಜನ ಗುಂಡಿಕ್ಕುತ್ತಾರೆ, ಕೊಲ್ಲುತ್ತಾರೆ. ಅವುಗಳಿಗೂ ಅದೇ ಅವಸ್ಥೆ.

"ಆದ್ದರಿಂದಲೇ ಅಲ್ಲವೇ? ಪಂಜರದಲ್ಲಿದ್ದು ಹಣ್ಣುಹಂಪಲ ತಿಂದು ಸುಖದಿಂದಿರಬಹುದಲ್ಲಾ" ಎಂದು ಧರ್ಮಸಂಪ್ರದಾಯದಲ್ಲಿ ಸಿಲುಕಿದ ಅರುಣಾ ಗೆಳತಿಗೆ ಅಂದಳು.

"ಅಷ್ಟೂ ತಿಳಿದಿಲ್ಲಾ ನಿನಗೆ; ಒಬ್ಬರ ಕೈಯಲ್ಲಿ ಸಿಕ್ಕು ಒದ್ದಾಡುತ್ತಾ ಪಂಜರದಲ್ಲಿ ಸಿಲುಕಿ ಬಾಳುವ ಆ ಪಕ್ಷಿಗೆ ತಾನು ಬದುಕಬಲ್ಲೆನೆ, ನನ್ನ ಜೀವ ಉಳಿಯುವುದೇ ಎಂದು ಮರುಗುತ್ತದೆ ಹೊರತು ಯಾವ ಸುಖದಿಂದಲೂ ಇರುವುದಿಲ್ಲ" ಎಂದಳು ಕಲ್ಯಾಣಿ.

ಅಲ್ಲಾ ಕಲ್ಯಾಣಿ ನಿನ್ನದೆಷ್ಟು ಹಟ. ನಾವು ಬಯಸಿದಂತೆಲ್ಲ ದೊರೆಯುತ್ತದೆಯೇ? ನಾವೇನೋ ಹಾಗಾಗಬೇಕು, ಹೀಗಾಗಬೇಕು ಎಂದು ಏನೇನೋ ಬೃಹದಾಕಾರದ ಕನಸುಗಳ ಸರಮಾಲೆಯನ್ನು ಕಟ್ಟುತ್ತೇವೆ. ಅದು ಒಂದು ಮೂರ್ತರೂಪ ಪಡೆಯುವ ಸ್ಥಿತಿಯಲ್ಲಿದ್ದಾಗಲೇ ಚಿವುಟಿ ಹಾಕುತ್ತಾರೆ, ಈ ಸಮಾಜದ ಜನತೆ ಹಾಗೂ ಮನೆಯಲ್ಲಿಯ ಹಿರಿಯರು. ನಾವು ಹಕ್ಕಿಯಂತೆ ವಿಹರಿಸಬೇಕು ಎನ್ನುತ್ತೇವೆ. ಜಾತಿ ಸಮಸ್ಯೆಯನ್ನು ತೊಡೆದುಹಾಕಬೇಕೆನ್ನುತ್ತೇವೆ. ಅಂತರ್ಜಾತೀಯ ವಿವಾಹವಾಗಬೇಕೆನ್ನುತ್ತೇವೆ. ಕೊನೆಗೆ ಸಂಪ್ರದಾಯದ ಕಪಿಮುಷ್ಠಿಯಲ್ಲಿ ಸಿಕ್ಕು ಅಪ್ಪಚ್ಚಿಯಾಗುತ್ತೇವೆ. ಅವೂ ಎಷ್ಟರಮಟ್ಟಿಗೆ

ಯಶಸ್ಸು. ಕೇವಲ ಕಥೆ, ಕಾದಂಬರಿ, ಚಲನಚಿತ್ರಗಳಲ್ಲಿಯೇ. ನಿಜಜೀವನದಲ್ಲಿ ಪ್ರೀತಿಸಿ ವಂಚಿತರಾಗುವ ಜನತೆಯೇ ಸಾಕಷ್ಟು. ಪ್ರೀತಿಸಿ, ಸಮಾಜವೆದುರಿಸಿ ಎಷ್ಟು ಜನ ತಾನೆ ಮದುವೆಯಾಗಿ ಸುಖದಿಂದ ಇದ್ದಾರೆ ಹೇಳು. ಅವರಲ್ಲಿ ವೈಮನಸ್ಸುಗಳೂ ಸಾಕಷ್ಟು. ನಿಜವಾಗಿಯೂ ಹೇಳಬೇಕೆಂದರೆ ಕಲ್ಯಾಣಿ, ಜೀವನದಲ್ಲಿ ಒಬ್ಬರೊಡನೆ ಪ್ರೀತಿಸಿ ಅವರಿಂದ ವಂಚಿತರಾಗಬೇಕು. ಕೇವಲ ಪ್ರೀತಿಸಿದ್ದು ಜೀವನದಲ್ಲಿ ನೆನಪಾಗಿ ಉಳಿಯಬೇಕಷ್ಟೆ ? ಆ ಪ್ರೀತಿ ಪ್ರೇಮವೇ ಕಥೆ, ಕವನ ಬರೆಯಲು ಸ್ಫೂರ್ತಿಯನ್ನು ತಂದುಕೊಡುತ್ತದೆ. ಅನುಭವಪೂರಿತವಾದ ಹೃದಯಕ್ಕೆ ತಟ್ಟುವ ಕವನಗಳಾಗುತ್ತವೆ. ನಾನು ನಿಜ ಹೇಳಬೇಕೆಂದರೆ, ನಾನು ಯಾರನ್ನಾದರೂ ಪ್ರೀತಿಸಿದರೆ, ಆತ ಯಾವುದೇ ರೀತಿಯ ವಂಚನೆ ಮಾಡಿದರೆ ಆತನ ಹಿತೈಷಿಯಾಗಿ ಅವನಿಗೆ ಶುಭ ಹಾರೈಸುವೆ. ನನ್ನ ಪ್ರೀತಿಯ ಆಳದಲ್ಲಿಯೇ, ನೆನಪಿನಲ್ಲಿಯೇ ಲೀನವಾಗುವೆ. ಅವನ ನೆನಪು ಅಂದರೆ ಇದುವರೆಗೂ ಕಂಡ ಪ್ರೀತಿ ಒಂದೇ. ಅವನು ಪ್ರಾಮಾಣಿಕನಿದ್ದು ತನ್ನ ನನ್ನ ಮದುವೆಯನ್ನು ಮನೆಯಲ್ಲಿ ತಿಳಿಸಲು ಹಿಂಜರಿದು ನಿಂತರೆ, ಮನೆಯವರ ಮಾತಿಗೆ ಜೋತುಬಿದ್ದು ಬೇರೆ ಮದುವೆಯಾದರೆ ನಾನು ದ್ವೇಷಿಸಲಾರೆ, ಹಾಗೆ ಸಾಧಿಸಲಾರೆ ಎಂದು ಅಂಜಲುಪುಕ್ಕಿ ಅರುಣಾ ಬಿಗಿಯುತ್ತಿದ್ದ ಭಾವೋದ್ವೇಗದ ಭಾಷಣದ ಧಾಟಿಯನ್ನು ಮಧ್ಯಕ್ಕೆ ತಡೆದು ಕಲ್ಯಾಣಿ

"ಸಾಕು ನಿಲ್ಲಿಸು ನಿನ್ನ ಹುರುಳಿಲ್ಲದ ವಾದವನ್ನು. ಇದೆಲ್ಲ ಮಾತು. ಪ್ರೀತಿಸಿದ ಮೇಲೆ ಅಸಾಧ್ಯ. ನಿನ್ನ ಈ ನುಡಿಗಳನ್ನೂ ಪ್ರೀತಿಸಿದ ಮೇಲೆ ಜ್ಞಾಪಿಸಿಕೊ. ಪ್ರೇಮ ಸಾಗರದಲ್ಲಿ ಬಿದ್ದರೆ ಈಜಿ ದಂಡೆ ಸೇರುವದು ಊಹುಂ, ನಿನ್ನ ತಲೆ. ಪ್ರೀತಿಸಿ ವಂಚಿತಳಾದ ಮೇಲೆ ಅನುಭವದಿಂದ ಕಥೆ, ಕವನ ಬರೆಯಲು ಸ್ಫೂರ್ತಿ ಸಿಗುತ್ತದೆಯಂತೆ. ಯಾವ ಚೇತನದಿಂದ ಆ ಸ್ಫೂರ್ತಿಸೆಲೆಯಾಗಿ ಚಿಮ್ಮುತ್ತದೆ ಅರುಣಾ ? ಅದೆಲ್ಲೋ ಭ್ರಮೆ ನಿನಗೆ" ಎಂದು ಕಹಿಮುಖ ಮಾಡಿದ ಕಲ್ಯಾಣಿ ಶೋಕತಪ್ತಳಾಗಿ ಗೆಳತಿಯನ್ನು ಜರೆದು ಅಸಹಾಯಕತೆಯಿಂದ ಬಿಕ್ಕಹತ್ತಿದಳು.

ಅರುಣಾಳಿಗೆ ಏನೂ ತೋಚಲಿಲ್ಲ. ನಾವು ಎಲ್ಲಿಂದ ಯಾವ ವಿಷಯದೆಡೆಗೆ ಸಾಗಿದೆವು ಎಂದು ವಿಚಾರಿಸುತ್ತಿದ್ದಂತೆ, ಅದಿರಲಿ ಇವಳೇಕೆ ದುಃಖಿತಳಾಗಿದ್ದಾಳೆ ಎಂದು ಅರುಣಾಳಿಗೆ ಏನೊಂದೂ ಅರ್ಥವಾಗಲಿಲ್ಲ. ಒಂದು ಕ್ಷಣ ಬೆರಗುಗೊಂಡು ಗೆಳತಿಯನ್ನೇ ದಿಟ್ಟಿಸಿದಳು. ಕಣ್ಣೀರು ಸುರಿಸುತ್ತಿದ್ದ ಗೆಳತಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ಹೀಗೇಕೆ ಕಲ್ಯಾಣಿ ನೀನೊಂದು ಒಗಟಿನಂತೆ ಕಾಣಿಸುತ್ತಿರುವೆ ನನಗೆ. ಏನೆಂದು ಹೇಳಬಾರದೆ. ಇದೂವರೆಗೂ ಏನೇನೋ ಮಾತಾಡಿದೆ, ನನ್ನಲ್ಲೇಕೆ ಮುಚ್ಚುಮರೆ. ದಯವಿಟ್ಟು ಕ್ಷಮಿಸು ನನ್ನನ್ನು ಎಂದು ದೈನ್ಯದಿಂದ ಬೇಡಿಕೊಂಡಳು.

ಕೆಳಗಿಳಿದು ಬಂದ ಕಲ್ಯಾಣಿಯ ಕಂಡ ಅರುಣಾಳ ತಾಯಿ ಯಾವಾಗಲೂ ನಕ್ಕು, ನಗಿಸಿ ನಲಿಯುತ್ತಿದ್ದ ಕಲ್ಯಾಣಿಯ ಮುಖ ದಿಟ್ಟಿಸಿ, ನೊಂದುಕೊಂಡು 'ಕಾಫಿ ಕುಡಿ ಬಾ'

ಎಂದಳು. ಅವಳ ಕಕ್ಕುಲತೆಗೆ ಇಲ್ಲವೆನ್ನದೆ ಕುಡಿದು, ಅರುಣಾಳಿಗೆ ನಾಳೆ ಬರುವೆನೆಂದು ಹೇಳಿ ಹೊರಟಳು.

ದಾರಿಯಲ್ಲಿ ಹೊರಟ ಕಲ್ಯಾಣಿಗೆ ಜೀವನ ನೀರಸವೆನ್ನಿಸಿತು. ಗೆಳತಿಯ ವಿಚಾರಕ್ಕೆ ನಾನೇಕೆ ಅಳಬೇಕು. ಅವಳು ಅಂದ ಹಾಗೆ ನಾನು ನನ್ನ ಪ್ರೀತಿಬೆಳಕ ತೋರಿದ ಪ್ರಕಾಶ ನನ್ನು ಬಿಟ್ಟು ಬೇರೆ ಇರಲೆ? ಛೀ ಸಾಧ್ಯವಿಲ್ಲ. ಅವನ ಜೀವನದಲ್ಲಿ ಬೇರೆಯವಳ ಪ್ರವೇಶಕ್ಕೆ ಎಡೆಗೊಡಲಾರೆ ಎಂದು ಚೀರಿತು ಅವಳ ಅಂತರಾತ್ಮ.

ಕಲ್ಯಾಣಿಯ ಇಂದಿನ ವರ್ತನೆಗೆ ಅರುಣಾ ಸಾಕಷ್ಟು ಯೋಚಿಸಿದಳು. ಅವಳು ಯಾರನ್ನಾದರೂ ಪ್ರೀತಿಸಿರಬಹುದೆ? ಅವನಿಂದ ಇವಳು ವಂಚನೆಗೊಂಡಿರಬಹುದೆ? ನನ್ನ ಮಾತಿಗೆ ಅವಳೇಕೆ ದುಃಖಿಪಟ್ಟಳು !! ಯಾರ ಗುಲಾಮಳಾಗಬಯಸದೆ, ಹಾಯಾಗಿ ನೌಕರಿ ಹಿಡಿದು ಬದುಕಬಲ್ಲೆ, ಯಾರನ್ನೂ ಪ್ರೀತಿಸುವದಿಲ್ಲ, ಮದುವೆಯಾಸೆಯಿಲ್ಲ ಎಂದು ಅಭಿಮಾನದಿಂದ ನುಡಿದಿದ್ದಳು. ಅವಳ ಈ ವಿಚಾರಕ್ಕೆ ನನಗೆ ಹೆಮ್ಮೆಯೆನಿಸಿ ಅವಳ ಧೈರ್ಯಕ್ಕೆ ಮೆಚ್ಚಿ ಶ್ಲ್ಯಾಘಿಸಿದ್ದೆ. ಆದರೆ ಇಂದು, ಇಂದು....ಅವಳು ತನ್ನ ಕಾಲೇಜಿನಲ್ಲಿ ಯಾರನ್ನಾದರೂ ಪ್ರೀತಿಸಿರಬಹುದು. ಗುಟ್ಟಾದ ಪ್ರೀತಿಯೆ? ಏನಿದು ನನ್ನ ಗೆಳತಿಯ ಬಾಳು ಎಂಬ ವಿಚಾರದ ಸುಳಿಯಲ್ಲಿ ನಿದ್ರೆ ಬಾರದೆ ಅತ್ತಇತ್ತ ಹೊರಳಿ ರಾತ್ರಿ ಕಳೆದಳು.

ನನ್ನ ಕಥನ ಕಾವ್ಯದ ಸ್ಫೂರ್ತಿಯಾಗಿದ್ದ ವ್ಯಕ್ತಿಯನ್ನೇ ಬಿಟ್ಟುಕೊಡಲೇ? ನನ್ನ ಜೀವದ ಉಸಿರಾದ ಚೇತನ ಮೂರುತಿಯನ್ನು ತ್ಯಜಿಸಲೇ? ಸೃಜನಾತ್ಮಕ ವೃತ್ತಿಯನ್ನು ಬೆಳೆಸಿಕೊಟ್ಟ ನನ್ನ ಪ್ರೇಮಮೂರುತಿಯನ್ನು ನನ್ನಿಂದ ಅಗಲಿಸಲೇ! ಹೇಗೆ ಬಿಟ್ಟು ಇರಲಿ. ನಾನು ಪ್ರೀತಿಸುತ್ತಿರುವೆ ನಿಜ. ಆದರೆ ಪ್ರಕಾಶ ನನ್ನನ್ನು ಪ್ರೀತಿಸುತ್ತಿದ್ದಾರೆಂದು ಹೇಗೆ ತಿಳಿಯಲಿ. ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆ ಎಂದು ನಾನು ಬಾಯಿಬಿಟ್ಟು ಹೇಳಲೆ? ನನ್ನಂತೆ ಅವರೂ ಹೇಗೆ ಹೇಳಲೆಂದು ತೊಳಲಾಡುತ್ತಿರಬಹುದೆ? ಛೀ—ಅಂಥ ಸಂಕುಚಿತ ಭಾವ ಅವರಿಗಿಲ್ಲ. ಯಾವತ್ತೂ ಸ್ಪಷ್ಟ ಮಾತು. ನನ್ನ ಜಾತಿ ಅಂತಸ್ತಿಗೆ ನಾನು ಹೆದರುವದಿಲ್ಲ, ನನ್ನ ಹುಟ್ಟಿದ ಮನೆ ತ್ಯಜಿಸಿ ಅವರೊಡನೆ ಬೆರೆಯುವೆ. ಆದರೆ ನನ್ನಿಂದ ಅವರ ಬಾಳು ಹಾಳಾಗಬಾರದಲ್ಲ. ಅವರಿಗಿದ್ದ ಈಗಿನ ಘನತೆ ಗೌರವಗಳಿಗೆ ಮುಳ್ಳಾಗುವದು ಬೇಡ. ಅವರ ಈ ಗೌರವಯುತ ಬಾಳಿಗೆ, ಈಗಿನ ಕೀರ್ತಿಯುತ ಹೆಸರಿಗೆ ಕೆಸರು ಬಳಿಯುವದು ಬೇಡ. ಅವರಿಂದ ದೂರ ಇರುವೆ. ನನ್ನ ಸ್ವಾರ್ಥಕ್ಕಾಗಿ ಅವರನ್ನು ಪ್ರೀತಿಸಲಾರೆ. ನಾನು ಮದುವೆಯಾಗುವೆ ಎಂದರೆ ಅದು ಸ್ವಾರ್ಥ. ನನ್ನ ಉಸಿರಿಗೆ, ನನ್ನ ವ್ಯಕ್ತಿತ್ವಕ್ಕೆ ಕಾರಣರಾದ ಅವರಿಂದ ದೂರ ಇದ್ದು ಶುಭ ಹಾರೈಸುವೆ ಎಂದು ರಾತ್ರಿಯಿಡೀ ಚಿಂತೆಯ ತೊಳಲಾಟದಲ್ಲಿದ್ದ ಕಲ್ಯಾಣಿಯ ಮುಖ ಮರುದಿವಸ ನೋವನ್ನು ನುಂಗಿ ಶಾಂತವಾಗಿತ್ತು.

ಗೆಳತಿಯ ಆಗಮನಕ್ಕೆ ಸಿದ್ಧವಾಗಿಯೇ ಕುಳಿತಿದ್ದ ಅರುಣಾ, ಮೇಲೆಯೇ ಕರೆದುಕೊಂಡು ಹೋದಳು. ಇಂದಿನ ಅವಳ ಶಾಂತಮುಖ, ಗಂಭೀರ ಭಾವ ಕಂಡು, ಅರುಣಾ

ಳಿಗೆ ಕೊಂಚ ಸಮಾಧಾನವಾಯ್ತಾದರೂ ಗೆಳತಿಯಲ್ಲಿ ಹುದುಗಿದ್ದ ಅವಳ ಬಾಳರ್ಥವನ್ನು ಹೇಗೆ ಬಿಡಿಸಲಿ, ಯಾವ ರೀತಿ ಕೇಳಲಿ ಎಂದು ಚಡಪಡಿಸುತ್ತಿದ್ದಳು. ಇಂದೂ ಶುಭ್ರ ಆಗಸದಲ್ಲಿ ಚಿಲಿಪಿಲಿಗುಟ್ಟಿದ ಪಕ್ಷಿಗಳ ಗುಂಪೊಂದು ಹಾರಿಹೋಯಿತು. ಅದನ್ನೇ ದಿಟ್ಟಿ ಸುತ್ತಿದ್ದ ಕಲ್ಯಾಣಿ

"ಅರುಣಾ, ಮರುಜನ್ಮವೆಂಬುದು ಇರುವುದಾದರೆ ನಾನು ಪಕ್ಷಿಯಾಗಿ ಹುಟ್ಟಿ ಬರುತ್ತೇನೆ. ಅದು ಎಂಥ ಹಕ್ಕಿ ಗೊತ್ತೆ ? ಒಂಟಿಹಕ್ಕಿ. ಒಂಟಿಯಾಗಿ ಬಾನಂಗಣ ತುಂಬೆಲ್ಲ ಹಾಯಾಗಿ ವಿಹರಿಸಬಯಸುತ್ತೇನೆ.

ಏಕೆ, ಒಬ್ಬಂಟಿಗಳಾಗಿ ಏಕೆ, ಸಂಗಾತಿಯಾಗಿ ಬೇಡವೆ ? "ಸಾಕು ಆ ಸಂಗಾತಿತನ. ಇದೇ ಜೀವನದಲ್ಲಿ ಒಂಟಿಯಾಗಿದ್ದು, ಬಾಳಿನ ಅರ್ಥಮಾಡಿಕೊಳ್ಳುವೆ. ಮುಂದೆ ಒಂಟಿ ಯಾಗಿಯೇ ಹಾರಾಡುವೆ."

ಕಲ್ಯಾಣಿ ಒಂದು ಮಾತು–ನೀನು ಯಾರನ್ನಾದರೂ ಪ್ರೀತಿಸುತ್ತಿ……

'ಹುಂ' ಎಂದು ತಲೆಕೆಳಗಾಗಿ ಕುಳಿತು ಕಲ್ಯಾಣಿ ಒಂದು ಕ್ಷಣ ಗೆಳತಿಯ ಮುಖ ದಿಟ್ಟಿಸಿ "ಅರುಣಾ ನನ್ನ ಈ ಒಂದು ವಿಷಯವನ್ನು ನಿನ್ನ ಮುಂದೆ ಹೇಳುತ್ತೇನೆ. ನಿಜ ವಾಗಿಯೂ ಸಖಿಯರ ಮುಂದೆ ನಮ್ಮ ಮನಬಿಚ್ಚಿ ದುಃಖವನ್ನು ತೋಡಿಕೊಂಡರೆ ಮನಸ್ಸು ಹಗುರಾಗುತ್ತದೆ. ನಿನ್ನ ನಿನ್ನಿನ ವಿಚಾರಸರಣಿಯನ್ನೇ ಮೆಲುಕುಹಾಕಿದೆ, ಅದೇನೋ ಸರಿಯೆನಿಸಿತು. ಪ್ರೀತಿ ಕೇವಲ ಸ್ವಾರ್ಥವಾಗಬಾರದು, ತ್ಯಾಗವಾಗಿರಬೇಕು. ನನ್ನ ಪ್ರೀತಿಯು ಒಡವೆಯು ಬಹಳ ಅಮೂಲ್ಯವಾದದ್ದು. ಅದನ್ನು ತೊಟ್ಟು, ಆಸೆಪಟ್ಟು ನನ್ನದಾಗಿಸಿಕೊಳ್ಳುವದಕ್ಕಿಂತ ಭದ್ರಸ್ಥಾನದಲ್ಲಿಯೇ ಇಟ್ಟು ಕಣ್ತುಂಬಾ ನೋಡಿ ಮನ ತುಂಬ ತುಂಬಿಕೊಳ್ಳುತ್ತೇನೆ. ಕೊನೆಗೆ ಆ ವಸ್ತು ನನ್ನಿಂದ ಪೂರ್ತಿ ಕಳಚಿಹೋದರೆ…

'ಛೇ ಅದೇನು ಮಾತಾಡ್ತಾ ಇದ್ದಿಯೇ, ಕಲ್ಯಾಣಿ ಬರೀ ಒಗಟೆ !'

"ಇಲ್ಲ, ಆ ವಸ್ತು ಯಾರನ್ನೂ ಸೇರಬಯಸುವದಿಲ್ಲ. ಅಷ್ಟು ಧೃಡತೆ ನನ್ನಲ್ಲಿದೆ. ಆ ವಸ್ತು ಸದಾ, ನಗುನಗುತ್ತಾ ಬಾಳ ನೂಕಬೇಕು. ನಾನು ನಿನಗೆ ಹೇಳುವದೂ ಇಷ್ಟೆ. ಪೂರ್ತಿಯಾಗಿ ಬಿಚ್ಚಿ ತೋರಿಸುವದೂ ಇಲ್ಲ. ಆ ವಸ್ತು ನನ್ನ ಸ್ಫೂರ್ತಿಯ ಸೆಲೆಯಾ ಗಿತ್ತು. ಇಷ್ಟು ದಿನಗಳವರೆಗೆ ಅದರಿಂದಲೇ ನನ್ನ ಬಾಳಿಗೆ ಚೈತನ್ಯ, ನೆಮ್ಮದಿ ಒದಗಿದ್ದು. ಆ ವಸ್ತು ಇನ್ನು ಮೇಲಕ್ಕೇರಬೇಕು. ಘನವಾಗಿ ಬಾಳಬೇಕು. ಆದರೆ ನಾನವರ ವಿಶ್ವಾ ಸಕ್ಕೆ ದ್ರೋಹ ಬಗೆಯಲಾರೆ. ನೆನಪಿರಲಿ: ನನ್ನ ವಂಚಿತ ಪ್ರೀತಿಗೆ ಯಾವ ಕಥೆ–ಕವನಗಳ ಉದಯ ಸಾಧ್ಯವಿಲ್ಲ. ನನ್ನ ಜೀವನ ತುಂಬಾ ತುಂಬಿದ್ದ ಅವರು ನನ್ನನ್ನು ಪ್ರೀತಿಸು ತ್ತಾರೋ ಇಲ್ಲವೋ, ಅವರಿಂದ ಒಂದು ಮಾತೂ ತಿಳಿಯದು. ನನ್ನದೋ ಮನಸ್ಸಿನ ದುರ್ಬಲತೆ. ಅದಕ್ಕಾಗಿ ನಾನು ಬಾಯಿಬಿಟ್ಟು ಕೇಳಲಾರೆ. ಅವರಿಂದ ದೂರ ಬಹುದೂರ ವಿದ್ದು ಶುಭ ಹಾರೈಸುವೆ. ನನ್ನ ಜೀವನ ಇನ್ನು ಮುಂದೆ ಶೂನ್ಯ, ಬರೀ ಶೂನ್ಯ, ಆ

ಪ್ರೀತಿಯ ನೆನಪಿನಿಂದ ಸ್ವಲ್ಪಸ್ವಲ್ಪ ಚೇತರಿಸಿಕೊಳ್ಳುತ್ತೇನೆ. ಆದರೆ ನನ್ನ ಒಡಲಾಳದ ಕಿಚ್ಚು ನನ್ನ ದಹಿಸುವದನ್ನು ನೀನೇ ಯೋಚಿಸು ಅರುಣಾ, ನೀನೇ ಯೋಚಿಸು...... ಒಂಟಿಯಾಗಿಯೇ ಒಂಟಿ ಗಿಳಿಯ ಹಾಗೆಯೆ, ಸ್ವಚ್ಛಂದವಾಗಿ ಇರಬಯುಸುವೆ. ಬಾಳ ನೂಕಂವೆ......"

ಸೂರ್ಯ ಪಶ್ಚಿಮದಲ್ಲಿ ಅಸ್ತನಾಗಿದ್ದ. ಕೆಂಪು ಕಿರಣಗಳೂ ಇಲ್ಲವಾಗಿದ್ದವು. ಮಿನುಗುವ ಚುಕ್ಕೆಗಳು ಅಲ್ಲೊಂದು ಇಲ್ಲೊಂದು ಮಿಣುಕಾಗಿ ಕಾಣುತ್ತಿದ್ದವು. ಕತ್ತಲೆ ಕಾಲಿರಿಸಿತ್ತು. "ನನ್ನ ಬಾಳು ಶೂನ್ಯ, ಬರಿಯ ಶೂನ್ಯ, ಈ ಕತ್ತಲೆಯಂತೆಯೇ ಅಲ್ಲವೇ" ಎಂದು ನಿರಾಶೆಯ ನಗು ನಗುತ್ತಾ ಕಲ್ಯಾಣಿ ಗೆಳತಿಯನ್ನು ನೋಡಿದಳು. ಅದರಲ್ಲಿ ಹುದುಗಿದ್ದ ಅರ್ಥ ಹುಡುಕಲು ಅರುಣಾಳಿಗೆ ಕತ್ತಲು ಕವಿದಂತಾಗಿತ್ತು.

ಇದುವರೆಗೂ ಹೇಳಿದ ಮನದಳಲಾದರೂ ಒತ್ತಿ ಒತ್ತಿ ಅವಳ ಹೃದಯದಿಂದ ಹೊರಬಂದು ಕಥೆಯಾಗಬಾರದೆ! ಅವಳ ಬೆರಳುಗಳಾದರೂ ಅವಳ ಸಂಗಾತಿಯಾಗಿರಲಿ ಎಂದಿತು ಅರುಣಾಳ ಶೋಕತಪ್ತವಾದ ಹೃದಯ.

□ □

# ಕಟ್ಟಿರುವಿ

● ಈರಪ್ಪ ಯಲಬುರ್ಗಿ

ಕಟ್ಟಿರುವಿಯೊಂದು ಕಡಿದಾಗ ನಾನು
ಚಡಪಡಿಸಿ ಎದ್ದೆ ವ್ಯಾಲ:
ರವಿಯೊಂದಿಗಿದ್ದ ಸವಿಗನಸು ಒಡಿದು
ಆಗಿತ್ತು ನುಚ್ಚುನೂರs.
ಹಗಲೆಲ್ಲ ನೆನೆಸಿ ರಾತ್ರ್ಯಾಗ ಕನಲಿ
ಕಾಣೂವೆ ಕನಸಿನ್ಯಾಗ
ತಂಗಾಳಿ ಹಾಂಗ 'ರವಿ' ಬಂದು ನನ್ನ
ಅಪ್ಪಿದ್ದ ಬಿಡದ ಹಾಂಗ.
ಥೂ ಇವನ ಹಾಳು ಕಟ್ಟಿರುವಿಯೊಂದು
ಎಲ್ಲಿಂದ ಬಂತ ಏನs
ಸವಿಗನಸ ಹರಿದು ಹೊಲಗೇರಿ ಮಾಡಿ
ಹೋಗಿತ್ತು ಸಿಗದ ಹಾಂಗ.
ಕೆಂಪಾದ ಗಲ್ಲ ಕಂಡಾಗ ಅವ್ವ–
"ಏನಾತು ಹೇಳ ಗೌರಿ?"
"ಕಟ್ಟಿರುವಿಯೊಂದು ಕಚ್ಚೇತಿ" ಎಂದು
ಒಗಿಯೂವೆ ಒಂದ ಗುಳಗಿ.
ಆಗಾಗ ನಾನು ಕನಸಲ್ಲಿ ಹೀಂಗ
ಮೈಮರೆತು ಮಲಗಿದಾಗ
ನಮ್ಮವ್ವ ಅನ್ನೋ 'ಕಟ್ಟಿರುವಿ' ಕೂಗಿ
ಎಚ್ಚರಿಸತ್ತೈತಿ ಬೇಗ.
ನಮ್ಮವ್ವ ನೀನು ಹಿಂಗ್ಯಾಕ ನನ್ನ
ಕಟ್ಟಿರುವಿ ಹೇಳ ಮೊದಲು
ಆ ಕಷ್ಟ ಹರಿದು 'ರವಿ'ಯೊಂದಿಗೇನ
ಸುತ್ತಾಡುವಾಶೆ ನನಗ !

□□

# ನವ್ಯ ನಿರಾಶೆಯ ಪ್ರತೀಕ ಏಕಾಯಿತು ?

● ಸಿದ್ಧನಗೌಡ ಪಾಟೀಲ

ಕನ್ನಡಸಾಹಿತ್ಯದಲ್ಲಿ ನವ್ಯಸಾಹಿತ್ಯ ನಿರಾಶೆ, ಭ್ರಮನಿರಸನಗಳ ಕೂಸು ಎಂದು ಹೇಳುತ್ತಾರೆ. ಆದರೆ ಈ ಸಾಹಿತ್ಯ ಅಸಂಗತ ಮಟ್ಟಕ್ಕೆ ಮುಟ್ಟಲು ಕಾರಣವೇನು ಎಂಬುದರ ಹಿನ್ನೆಲೆ ನೋಡಿದಾಗ ನಮಗೆ ಕಾಣುವ ಅಂಶಗಳು ಬಹಳ ಸ್ಪಷ್ಟವಾಗಿವೆ. ನವೋದಯ ಕಾವ್ಯದ ವೈಫಲ್ಯದ ಕೂಸು ಈ ನವ್ಯ ಎಂದೂ ಹೇಳಬಹುದು. ನವೋದಯುದ ವೈಫಲ್ಯ ನವ್ಯದ ಸ್ಥಾವರತನಗಳಿಗೆ ಇಂದು ನಾವು ಸ್ಪಷ್ಟ ಕಾರಣ ಹುಡುಕಿಕೊಂಡರೆ ಇಂದು ಬರುತ್ತಿರುವ ಸಾಹಿತ್ಯಕ್ಕೆ ಸಮಾಜದಲ್ಲಿ ಒಂದು ರೂಪಕೊಟ್ಟು ಗುರುತಿಸಬಹುದು.

ನವೋದಯ, ನವ್ಯ ಎಲ್ಲ ಸಾಹಿತ್ಯಗಳೂ ಪಾಶ್ಚಾತ್ಯರ ಅನುಕರಣೆ ಎಂದು ಹೇಳುವರು. ಮಾದರಿ ಮಾತ್ರ ಅನುಕರಣೆ ಆಗಿರಬಹುದು. ಆದರೆ ವಿಷಯ ಮಾತ್ರ ನಮ್ಮ ಭೂಮಿಯದೇ. ವಿಚಿತ್ರನೆಂದರೆ ನವೋದಯ ಕಾಲದಲ್ಲಿಯೂ ಕೆಲ ಬರಹಗಾರರು ಯಾವ ರೀತಿಯ ಸಾಹಿತ್ಯವನ್ನು ರಚಿಸುತ್ತಿದ್ದರೋ ಅವರು ಇವತ್ತಿಗೂ ಅದೇರೀತಿಯ ಸಾಹಿತ್ಯ ರಚನೆಯಲ್ಲಿರುವರು. ಅವರಿಗೆ ಯಾಕೆ ನಿರಾಶೆ, ಭ್ರಮನಿರಸನಗಳ ಅನುಭವ ಆಗಲಿಲ್ಲ ಎಂಬ ವಿಷಯ ಗೌಪ್ಯವಾಗಿದೆ. ಉದಾಹರಣೆಗೆ ನಿರಂಜನರಂಥ ಸಾಹಿತಿಗಳು ತಮ್ಮ ಆರಂಭ ಕಾಲದಲ್ಲಿ ಯಾವ ಮನೋದೃಷ್ಟಿ, ಉದ್ದೇಶಗಳನ್ನು ಸಾಹಿತ್ಯದಲ್ಲಿ ತುಂಬುತ್ತಿದ್ದರೋ ಇವತ್ತಿಗೂ ಅದೇರೀತಿಯ ಸಾಹಿತ್ಯ ಇದೆ. ಇದಕ್ಕೆ ಕಾರಣಗಳನ್ನು ಹುಡುಕಿ ತೆಗೆದಾಗ ಇವತ್ತಿನ ಸಾಹಿತ್ಯ ಅಭ್ಯಾಸಿಗಳಿಗೆ ಹೆಚ್ಚು ಅನುಕೂಲ.

ಕಲೆಗಾಗಿ ಕಲೆ ಎಂಬ ವಾದ ನಮ್ಮ ನವೋದಯ ಸಾಹಿತ್ಯದ ಹೆಚ್ಚಿನ ಬರಹಗಾರರ ಮೇಲೆ ಬಿದ್ದು ಮೊದಮೊದಲು ಅವರು ನಿಸರ್ಗ, ದೇವರು, ಸೌಂದರ್ಯ ಮುಂತಾದ ಬದುಕಿನ ತೀರ ಮೇಲ್ಪದರುಗಳ ಬಗ್ಗೆ ಬರೆದರು. ಅದು ಮಧುರ ಆಗಿತ್ತು, ಹೆಚ್ಚು ಪ್ರಚಾರಕ್ಕೂ ಬಂದಿತು. ಆದರೆ ಬದುಕಿನ ಮೇಲ್ಪದರುಗಳಾದ ಸೌಂದರ್ಯ, ಭಕ್ತಿ–ಇವು ಮೌಲ್ಯವನ್ನು ಕಳೆದುಕೊಳ್ಳುತ್ತಾ ನಡೆದು ಜನತೆ ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿದಾಗ ಸಾಹಿತ್ಯ ಸಮಾಜದ ಕೈಗನ್ನಡಿ ಎನ್ನುವ ತತ್ವದಂತೆ ನಮ್ಮ ಸಾಹಿತಿಗಳು ತಕ್ಷಣ

ಸ್ವಾತಂತ್ರ್ಯದ ಸಾಹಿತ್ಯವನ್ನೂ ರಚಿಸಿದರು. ಬೇಂದ್ರೆಯವರು "ಮಕ್ಕಳಿವರೇ ನಮ್ಮ ಮೂವತ್ಮೂರು ಕೋಟಿ" ಎಂದು ಚುಚ್ಚಿ ಜನತೆಯನ್ನು ಎಬ್ಬಿಸಲು ಹೋದರೆ, ಎದ್ದ ಜನರನ್ನು ಕಟ್ಟಿಕೊಂಡು 'ಕಟ್ಟುವೆವು ನಾವು ಹೊಸ ನಾಡೊಂದನು' ಎಂದು ಇನ್ನೊಬ್ಬರು ಈ ರೀತಿ ರೋಮಾಂಚನ ರೀತಿಯಲ್ಲಿ ಹಾಡಿದರು. ಆದರೆ ಇಲ್ಲಿಯೂ ಈ ಸಾಹಿತಿಗಳು ಭಕ್ತಿ, ಸೌಂದರ್ಯಗಳಂತೆ ಬದುಕಿನ ಮೇಲ್ಪದರಿನ ಮೇಲೆಯೇ ತಮ್ಮ ಶಕ್ತಿಯನ್ನು ವ್ಯಯಮಾಡಿದರು. ಈ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಮತ್ತು ಅದರ ಪರಿಣಾಮಗಳ ದೀರ್ಘಾಲೋಚನೆಗೆ ಹೋಗಿ ಸಾಹಿತ್ಯ ಬರೆಯಲಿಲ್ಲ. ಆದರೂ ಕೆಲವರಿಗೆ ವಾಸ್ತವತೆಯನ್ನು ಬಿಟ್ಟು ಹೋಗುವದಾಗಲಿಲ್ಲ. ಅದರ ಪರಿಣಾಮವೇ "ಕುರುಡು ಕಾಂಚಾಣ ಕುಣಿಯುತಲಿತ್ತು" ಎಂದು ವರಕವಿ ಹೇಳಿದರೆ, "ಕಲ್ಕಿ"ಯಿಂದ ಹೊಸ ಅನುಭವ ಕೊಟ್ಟರು ರಾಷ್ಟ್ರಕವಿ. ಆದರೆ ಅವರು ಅದೇ ಮಾದರಿಯ ಸಾಹಿತ್ಯಕ್ಕೆ ಒಂದು ಮಾರ್ಗ ಹಾಕದೇ ಮತ್ತೆ ತಮ್ಮ ಮೊದಲಿನ ಮಾರ್ಗ ತುಳಿದರು.

ಸ್ವಾತಂತ್ರ್ಯ ಸಿಕ್ಕಿತ್ತು. ಸ್ವಾತಂತ್ರ್ಯಕ್ಕಾಗಿ ರಾಜಕೀಯ ನಾಯಕರು ಚಳುವಳಿ ಮಾಡಿ ದಣಿದಿದ್ದರು. ಅದೇರೀತಿ ಸಾಹಿತಿಗಳೂ ದಣಿದಿದ್ದರು. ಆದರೆ ಸ್ವಾತಂತ್ರ್ಯ ಹೋರಾಟವನ್ನು "ವರ್ಗಸಮರದ" ಪ್ರಾರಂಭ ಎಂದು ಯಾರೂ ಅರಿತುಕೊಳ್ಳದೆ ಅದು ಇಡೀ ಜನತೆಯ ಹೋರಾಟದ ಮುಕ್ತಾಯ ಎಂದು ಅರ್ಥೈಸಿಕೊಂಡರು. ಅದೇ ಕಾಲದಲ್ಲಿ ವಾಸ್ತವತೆ ಮತ್ತು "ಬದುಕಿನ ಕೊನೇ ಸಾಲಿನಲ್ಲಿದ್ದ ಜನತೆ"ಯತ್ತ ಈ ನಮ್ಮ ನವೋದಯ ಜನ ನೋಡಲಿಲ್ಲ. ಸಾಹಿತ್ಯಕ್ಕೆ ವೈಜ್ಞಾನಿಕತೆ, ಹಿನ್ನೆಲೆ ಇರದೆ ಬರೀ ಆವೇಶ ತುಂಬಿದರು. ಅಷ್ಟೇ ಅಲ್ಲದೆ ಈ ಸಾಹಿತಿಗಳಿಗೆ ಹೋರಾಟದ ಜೊತೆ ಭಾಗ ಇರಲಿಲ್ಲ (Involvement). ಸೌಂದರ್ಯ, ಭಕ್ತಿ ಗೀತೆಗಳನ್ನು ಹಾಡಿದಂತೆ ಇವರು ಹೋರಾಟ, ಕ್ರಾಂತಿಗಳನ್ನೂ ರಾಗಬದ್ಧವಾಗಿ ಹಾಡಿದರು. ಆದರೆ ಬದುಕಿನ ಒಳಹೊಕ್ಕು ಅಲ್ಲಿಯೂ ಅಡಗಿ ಕುಳಿತಿರುವ ಮತ್ತು ಇವತ್ತಿಗೂ ಇನ್ನೂ ಹಾಗೆ ಉಳಿದಿರುವ "ವರ್ಗ ತಿಕ್ಕಾಟ"ವನ್ನು ಇವರು ನೋಡಲಿಲ್ಲ.

ಇದೇ ಸ್ವಾತಂತ್ರ್ಯದಿಂದ ನಮ್ಮ ಜನತೆ ಸುಖ ಶಾಂತಿ ನೆಮ್ಮದಿ ಹೊಂದುವದೆಂದು ನಮ್ಮ ಸಾಹಿತಿಗಳ ಅಪಾರ ನಂಬಿಕೆ. ಆದರೆ ಸಮಾಜದಲ್ಲಿ ಎರಡು ವರ್ಗಗಳಿವೆ: ಅವೇ ಮೇಲ್ವರ್ಗ ಮತ್ತು ಕೆಳವರ್ಗ. ಈ ಮೇಲ್ವರ್ಗದ ಕೈಯಲ್ಲಿ ಇಂದು ಸರಕಾರ, ಸ್ವಾತಂತ್ರ್ಯ ಎಲ್ಲಾ ಸಿಕ್ಕಿವೆ. ಆದರೆ ಆ ಮೇಲ್ವರ್ಗದ "ವರ್ಗಗುಣ" ಏನು ಎಂದು ಆಳವಾಗಿ ಅಭ್ಯಾಸ ಮಾಡಿದ್ದರೆ ಮತ್ತು ಅದೇ ರೀತಿಯ ಸಾಹಿತ್ಯ ಮುಂದುವರೆಸಿದ್ದರೆ ಈ ನವ್ಯಸಾಹಿತ್ಯ ಭ್ರಮನಿರಸನ, ನಿರಾಶೆಯನ್ನು ಹೊತ್ತು ಸಾಹಿತ್ಯದಲ್ಲಿ ತನ್ನ ಸ್ಥಾನಬಿಡಲು ಅವಕಾಶವೇ ಇರುತ್ತಿರಲಿಲ್ಲ. ಅಷ್ಟೇ ಅಲ್ಲದೆ ನಮ್ಮ ಸಾಹಿತ್ಯಕ್ಕೆ ಕ್ರಾಂತಿಕಾರಿ ಪರಂಪರೆಯನ್ನು ರೂಪಿಸಬಹುದಿತ್ತು. ಅವರು ಆ ಕ್ರಾಂತಿಕಾರಿ ಪರಂಪರೆಯನ್ನು ರೂಪಿಸಿದ್ದರೆ ಇವತ್ತಿನ ಹೊಸಪೀಳಿಗೆ ಇನ್ನೂ ಮುಂದುವರಿಯುತ್ತಿತ್ತು.

ನವ್ಯಸಾಹಿತ್ಯದಲ್ಲಿ ವರ್ಗದೃಷ್ಟಿಕೋನದ ಸಾಹಿತ್ಯ ಬಂದಿಲ್ಲವೆಂದರೆ ನಾವು ಸಾಹಿತ್ಯದ ಮೈಲುಗಲ್ಲುಗಳ ಬಗ್ಗೆ ಕುರುಡರಾಗುತ್ತೇವೆ. ನವೋದಯದವರ ಜೊತೆಜೊತೆಗೇ

ಇದ್ದರೂ ವರ್ಗದೃಷ್ಟಿಕೋನದ ಹಿನ್ನೆಲೆಯಲ್ಲಿ ಸಾಹಿತ್ಯ ರಚಿಸಿದ ನಿರಂಜನರಂಥವರನ್ನು ಇವತ್ತು ನಾವು ಮರೆಯಕೂಡದು. ಅವರ 'ಮೃತ್ಯುಂಜಯ' ಕಾದಂಬರಿ ವರ್ಗದೃಷ್ಟಿಕೋನದ ಹಿನ್ನೆಲೆಯಲ್ಲಿದೆ. ಕೆಳವರ್ಗದ ಜನ, ಧನವಂತರು, ಜಮೀನುದಾರರು ಮತ್ತು ಮಠಾಧಿಪತಿ ಧರ್ಮಗುರುಗಳು–ಈ ಎಲ್ಲ ಶೋಷಣೆ ಪ್ರತೀಕವಾದ ಜನರ ವಿರುದ್ಧ ಬಂಡೆದ್ದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಥೆ ಗ್ರೀಸ್ ದೇಶದ್ದಾದರೂ ಎಲ್ಲ ದೇಶಗಳ ಕೆಳವರ್ಗದ ಜನರ ಹೋರಾಟಕ್ಕೆ ಕೈಗನ್ನಡಿ ಆಗಿದೆ. ಸ್ವಾತಂತ್ರ್ಯ ಸಿಕ್ಕರೂ ನಮ್ಮ ದೇಶದ ಪರಿಸ್ಥಿತಿ, ಬದುಕಬೇಕೆಂದರೂ ಒಬ್ಬ ಮನುಷ್ಯ ಯಾವ ರೀತಿ ಹೊಟ್ಟೆಪಾಡಿಗಾಗಿ ಭ್ರಷ್ಟನಾಗುತ್ತಾನೆ ಎಂದು ಸಾರುವ "ವಿಮೋಚನೆ". ಇದೆಲ್ಲಕ್ಕೂ ಮಿಗಿಲಾಗಿ ಸ್ವಾತಂತ್ರ್ಯ ಹೋರಾಟದ ಮೂಲತಳಕ್ಕೆ ಮುಟ್ಟಿ ಸಾಮ್ರಾಜ್ಯಶಾಹಿ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಸಂಘಟಿತ 'ರೈತ ಹೋರಾಟ', ಅದಕ್ಕೆ ಯುವಕರ ಬಲಿ, ಕಯ್ಯೂರಿನ ನೈಜ ಘಟನೆಯನ್ನೇ ಸಾಹಿತ್ಯಮಾಡಿ ಇವತ್ತಿಗೂ ಅಂಥ ಹೋರಾಟದ ಅವಶ್ಯಕತೆಯನ್ನು ಅವತ್ತೇ ತೋರಿಸಿದ ಈ ವಾಸ್ತವವಾದಿ ಸಾಹಿತಿಗೆ ಭ್ರಮನಿರಶನ ಏಕಾಗಲಿಲ್ಲ? ಇವರ ಜೊತೆ ಇನ್ನೂ ಕೆಲವರಲ್ಲಿ ಬಸವರಾಜ ಕಟ್ಟೀಮನಿಯವರ "ಜ್ವಾಲಾಮುಖಿ ಮೇಲೆ" ಮತ್ತು ಬೀಚಿಯವರ "ದೇವರಿಲ್ಲದ ಗುಡಿ" ಇಂಥ ಹಲವಾರು ಜನರು ಸಾಹಿತ್ಯ ಸಮಾಜದ 'ವರ್ಗಸಮರದ ಸೂಕ್ಷ್ಮ'ವನ್ನು ಹೇಳುವಂಥ ಸಾಹಿತ್ಯ ರಚಿಸಿದ್ದಾರೆ. ಆದರೆ ಇಂದು ಬರೀ ಮೇಲ್ವರ್ಗದ ಜನರ ಕೈಯಲ್ಲಿರುವ ಈ ಸಮಾಜ ಆ ವರ್ಗಸಮರದ ಸಾಹಿತ್ಯ ಕೆಳವರ್ಗದ, ತುಳಿತಕ್ಕೊಳಪಟ್ಟ ಜನರ ಪರವಾಗಿರುವ ಸಾಹಿತ್ಯವನ್ನು ಮುಚ್ಚಿಟ್ಟು ಇವತ್ತಿಗೂ ಪುರಾಣ, ಭಕ್ತಿಯಂತಹ ಅವೈಜ್ಞಾನಿಕ ಸಾಹಿತ್ಯವನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿದೆ.

ಆದರೆ ಇವತ್ತಿನ ಹೊಸಪೀಳಿಗೆಯವರು ಭ್ರಮನಿರಸನರಾಗದೇ ಆಶಾವಾದಿಗಳಾಗಿದ್ದಾರೆ. ಇಲ್ಲಿರುವ ಗಂಡಾಂತರವೆಂದರೆ ಈ ಯುವಪೀಳಿಗೆ ಅನುಕರಣೀಯ ಸಾಹಿತ್ಯ ರಚನೆಯಲ್ಲಿ ತೊಡಗಿದೆಯೇ ಹೊರತು ಅಭ್ಯಾಸಮಯ ಸಾಹಿತ್ಯವನ್ನಲ್ಲ. ಈ ಹೊಸ ಸಾಹಿತ್ಯ ವರ್ಗದೃಷ್ಟಿಕೋನ ಮತ್ತು ಅಲ್ಲಿರುವ ವಾಸ್ತವ ಹೋರಾಟವನ್ನು ಅರ್ಥೈಸಿಕೊಳ್ಳದೆ, ಮತ್ತು ಅಭ್ಯಾಸ ಮಾಡವ ಇದ್ದರೆ ಕನ್ನಡಸಾಹಿತ್ಯದಲ್ಲಿ ಮತ್ತೊಮ್ಮೆ ನವ್ಯದಂಥ ಸಾಹಿತ್ಯ ಬಂದುಹೋದರೆ ಆಶ್ಚರ್ಯವಿಲ್ಲ.

□ □

# ಭಾವನೆ

● ಸುಭಾಸ ಪೋರೆ

ಅದು ಏನ ಹೇಳಲಿ
ನನ್ನಾಣೆ ಗೆಳತಿ
ನಾನೊಲ್ಲೆ ಆ 'ಪ್ರೀತಿ–ಭೀತಿ',
ಕಣ್ತುಂಬ ಕುಣಿದಾಡಿ:
ಕಲ್ಪನೆಯು ವಕಾಡಿ
ವೋಡಿ ವಾಡಿ
ಹೋಗದಿರು ಓಡಿ.
ಅದು ಬಲ್ಲೆ, ಇದು ಬಲ್ಲೆ
ಆದರೂ ನಾನೊಲ್ಲೆ.
ಬೇಡುವೆನು ಒಂದೇ–
ನೀ, ಗೆಳತಿಯಂದದಿ
ಮಾತ್ರವೇ ಮಿಂಚು
ಈ ಮನದಿ ಎಂದೆ.

□ □

# ಹಾರುವ ತಟ್ಟೆ

● ಚ. ಹಾ. ಉಪ್ಪಿನ

ಭಾರತವು ತಾನು "ಹಾರುವ ತಟ್ಟೆ"ಗಳ ಬಗ್ಗೆ ಸಂಶೋಧನೆ ನಡೆಸಲು ಸಿದ್ಧವಾಯಿತು. ಅದರ ಫಲವಾಗಿ ಭಾರತ ವಿಶೇಷ ಉಪಗ್ರಹವಾದ "ಶಿವ್‌ಸ್ನ್ಯಾಟ್ಸ್" 'ಅ'ವನ್ನು ತನ್ನ ಉಡ್ಡಾಣ ಕೇಂದ್ರವಾದ "ಶಿವಕೋಟಾ"ದಿಂದ ಮಧ್ಯಾಹ್ನ ೧೨ಗಂಟೆ ೨೭ ನಿಮಿಷದಲ್ಲಿ ಹಾರಿಸಿತು. ಈ ಉಪಗ್ರಹದಲ್ಲಿ ಇಬ್ಬರು ವಿಜ್ಞಾನಿಗಳಿದ್ದರು. CH-೪ ಮತ್ತು M-೭ (ಇವು ವಿಜ್ಞಾನಿಗಳ ಕೋಡ್ ನಂಬರು). ಈ ಉಪಗ್ರಹವನ್ನು "ಯಂತ್ರ ಮಾನವರು" ನಡೆಸುತ್ತಿದ್ದರು. ಇವರನ್ನೊಳಗೊಂಡ ಉಪಗ್ರಹವು ಕೆಲವು ನಿಮಿಷಗಳಲ್ಲಿ ಭೂಮಿಯ ಕಕ್ಷಪಾತಳಿಯನ್ನು ಸುರಕ್ಷಿತವಾಗಿ ತಲುಪಿತು. ಉಪಗ್ರಹದಿಂದ "ಸುರಕ್ಷಿತವಾಗಿರುವೆವು" ಎಂಬ ಸಂದೇಶ ಹಾಸನದ ಸಂಪರ್ಕ ಕೇಂದ್ರಕ್ಕೆ ಮುಟ್ಟಿತು.

ಉಪಗ್ರಹವು ಕಕ್ಷಪಾತಳಿಯಲ್ಲಿ ಸುಗಮವಾಗಿ ಚಲಿಸುತ್ತಿತ್ತು. ಇದ್ದಕ್ಕಿದ್ದಂತೆ ಉಪಗ್ರಹಕ್ಕೆ ಅಪರಿಚಿತ ವಸ್ತು ತಾಕಿತು. ಕೂಡಲೇ "CH-೪"ನು ಟಿ.ವಿ.ಯಲ್ಲಿ ನೋಡಿದಾಗ ಅದು ಹಾರುವ ತಟ್ಟೆಯೆಂದು ತಿಳಿಯಿತು. ಅವನ ಬಾಯಿಂದ ಹರ್ಷದ ಉದ್ಗಾರವಾಯಿತು. ಕೂಡಲೇ "M-೭"ನು ಬಂದು ಆ ವಸ್ತುವನ್ನು ವೀಕ್ಷಿಸಿದನು. ತಾವು ಯಾವುದಕ್ಕಾಗಿ ಬಂದಿರುವೆವೋ ಅದುವೇ ಕಾಣಿಸಿಕೊಂಡಾಗ ಅವರಿಗೆ "ರೋಗಿ ಬಯಸಿದ್ದೂ ಹಾಲು-ಅನ್ನ, ವೈದ್ಯ ಹೇಳಿದ್ದೂ ಹಾಲು-ಅನ್ನ" ಎಂದಂತಾಯಿತು. ಕೂಡಲೇ ಅವರು ಕಾರ್ಯತತ್ಪರರಾದರು. ಚಾಲಕರಿಗೆ ತಾವು ಆ ವಸ್ತುವನ್ನು ಹಿಂಬಾಲಿಸುತ್ತೇವೆ ಎಂದು ಹೇಳಿದರು. CH-೪, M-೭ರು "ಸ್ಪೇಸ್‌ಡ್ರಾಮಾ" (ಆಕಾಶದಲ್ಲಿ ಹೋಗುವ ಯಂತ್ರ) ವನ್ನು ತೆಗೆದುಕೊಂಡು, ಹಾರುವ ತಟ್ಟೆಯನ್ನು ಹಿಂಬಾಲಿಸಿದರು.

ಹಾರುವ ತಟ್ಟೆ ಕ್ರಮೇಣ ಆಕಾಶವ್ಯೂಹದಲ್ಲಿ ತನ್ನ ಮಾರ್ಗವನ್ನು ಬದಲಾಯಿಸಿತು. ಅದರ ಹಿಂದೆಯೇ "ಸ್ಪೇಸ್‌ಡ್ರಾಮಾ" ಹೊರಟಿತು. ಬಹುದೂರ ಹೋದನಂತರ (೨ ಪ್ರಭಾವರ್ಷ)=(೨ ಗಂಟೆ) ಹಾರುವ ತಟ್ಟೆಯು ತನ್ನ ಗ್ರಹದ ಕಕ್ಷಪಾತಳಿಗೆ ಹೊಂದಿಕೊಂಡು ನಿಧಾನವಾಗಿ ಇಳಿಯತೊಡಗಿತು. ಅದರ ಹಿಂದೆಯೇ ಬಂದ "ಸ್ಪೇಸ್

ಡ್ರಾಮಾ"ವು ಆ ಕಕ್ಷೆಯಲ್ಲಿಯೇ ಇಳಿಯತೊಡಗಿತು. ಅಲ್ಲಿ "ಸ್ಪೇಸ್‌ಡ್ರಾಮಾ"ಕ್ಕೆ ಸ್ವಲ್ಪ ತೊಂದರೆಯಾಯಿತು. ಅದನ್ನು ಸರಿಪಡಿಸಿಕೊಂಡಿತು. ಹಾರುವ ತಟ್ಟೆಯು ನಿಧಾನವಾಗಿ ತನ್ನ ಗ್ರಹದ ಮೇಲೆ ಇಳಿಯಿತು. "ಸ್ಪೇಸ್‌ಡ್ರಾಮಾ"ವು ಅದರ ಹಿಂದೆಯೇ ಇಳಿಯಿತು.

CH-೪ ಮತ್ತು M-೭ರು "ಸ್ಪೇಸ್‌ಡ್ರಾಮಾ"ವನ್ನು ಆ ಗ್ರಹದ ಮೇಲೆ ಇಳಿಸಿದರು. ಆದರೆ ಅಲ್ಲಿ ಭೂಮಿಯ ಹಾಗೆ ನೆಲವಿರಲಿಲ್ಲ. ಅದು ಗಾಳಿಯಲ್ಲಿ ಹಾಗೆಯೇ ತೇಲಿತು. ಸ್ವಲ್ಪ ಹೊತ್ತಿನ ನಂತರ "ಹಾರುವ ತಟ್ಟೆ"ಯೊಳಗಿದ್ದವರು ಕೆಳಗೆ ಇಳಿದು ಬಂದು "ಸ್ಪೇಸ್‌ಡ್ರಾಮಾ"ಕ್ಕೆ ಗಾಳಿಯಲ್ಲೇ ನಿಲ್ಲಲು ಅವಕಾಶ ಮಾಡಿಕೊಟ್ಟರು. ನಂತರ ನಂತರ CH-೪, M-೭ರು ಕೆಳಗಿಳಿದರು. ಇಳಿದೊಡನೆಯೇ ಅವರು ತೇಲಹತ್ತಿದರು. 'ಸಮತೋಲನ'ವನ್ನು ಕಾಪಾಡಲಾಗಲಿಲ್ಲ. ಅಷ್ಟರಲ್ಲಿಯೇ ಆ 'ಹಾರುವ ತಟ್ಟೆ'ಯಲ್ಲಿದ್ದವರು ಅವರನ್ನು ತಡೆದು ಕೈ ಹಿಡಿದುಕೊಂಡರು.

CH-೪ ಮತ್ತು M-೭ರಿಗೆ ಆಶ್ಚರ್ಯವಾಯಿತು. "ಅರೇ ನಾವು ಭೂಮಿಗೆ ಬಂದಿದ್ದೇವೆ. ನಮ್ಮ ಕೈ ಹಿಡಿದವರು ನಮ್ಮಂತೆ ಇರುವರಲ್ಲ." ಆಗ "ಹಾರುವ ತಟ್ಟೆ"ಯಲ್ಲಿದ್ದವರು ಹೇಳಿದರು, ಇದು ನಿಮ್ಮ ಭೂಮಿಯಲ್ಲ. ಇದು ಗುರುಗ್ರಹ. ನಿಮಗೆ ನಮ್ಮನ್ನು ನೋಡಿ ಆಶ್ಚರ್ಯವಾಗಿರಬಹುದಲ್ಲವೇ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಮ್ಮ "ಹಿರಿಯರು" ಹೇಳುವರು. ಈಗ ನಮ್ಮ ಮನೆಗಳಿಗೆ ಹೋಗುವಾ ನಡೆಯಿರಿ ಎಂದು ಅವರನ್ನು ಕರೆದುಕೊಂಡು ಹೊರಟರು.

ಆಗ CH-೪ ಮತ್ತು M-೭ರಿಗೆ ಮತ್ತಷ್ಟು ಆಶ್ಚರ್ಯವಾಯಿತು. "ಏನು! ಇವರು ಮಾನವರಂತಿರುವರಲ್ಲದೇ ನಮ್ಮ ಭಾಷೆಯನ್ನು ಮಾತನಾಡುವರು." ಸ್ವಲ್ಪ ಹೊತ್ತಿನ ನಂತರ ಆ ಗ್ರಹದ ನಿವಾಸಿಗಳು ಅವರನ್ನು ತಮ್ಮ ಮನೆಗಳಿಗೆ ಕರೆದೊಯ್ದರು. ಆ ಗ್ರಹದ ಮನೆಗಳು ಎಂದರೆ "ಹಾರುವ ತಟ್ಟೆಗಳು". ಅವು ಗಾಳಿಯಲ್ಲಿ ತೇಲಾಡುತ್ತಿದ್ದವು. ಆದರೆ ಅವು ಸ್ಥಿರವಾಗಿ ನಿಂತಿದ್ದವು.

ಮನೆಗೆ ಹೋದಾಗ ಅಲ್ಲಿದ್ದವರಿಗೆ ಈ ಇಬ್ಬರು ಅಪರಿಚಿತರು ಯಾರು? ಎಂದು ಅನುಮಾನವಾಯಿತು. ಆಗ CH-೪ ಮತ್ತು M-೭ ರನ್ನು ಕರೆದುಕೊಂಡು ಬಂದ ಆ ಇಬ್ಬರು ಹೇಳಿದರು. "ತಂದೆಯೇ ನಾವು ನಮ್ಮ ವಾಹನದಲ್ಲಿ ತಿರುಗಾಡುತ್ತಿರಲು ಇವರ ಒಂದು ವಾಹನ ನೋಡಿದೆವು. ಅದರಲ್ಲಿ ಯಾರಿದ್ದಾರೆಂದು ಕುತೂಹಲ ಉಂಟಾಗಿ ನಾವು ಇವರ ವಾಹನಕ್ಕೆ ಡಿಕ್ಕಿ ಹೊಡೆದೆವು. ಸ್ವಲ್ಪ ಹೊತ್ತಿನ ನಂತರ ಇವರು ನಮ್ಮನ್ನು ಹಿಂಬಾಲಿಸಿ ಬಂದರು. ನಾವು ಹಾಗೆಯೇ ನಮ್ಮ ಗ್ರಹಕ್ಕೆ ಕರೆದುಕೊಂಡು ಬಂದೆವು. ಇವರು ಭೂಮಿಯ ನಿವಾಸಿಗಳು" ಎಂದರು.

ಈ ಮಾತನ್ನು ಕೇಳಿ ಆ ಯಜಮಾನನಿಗೆ ಅವ್ಯಕ್ತವಾದ ಸಂತೋಷ ಮೂಡಿತು. "ಇವರು ಭೂಮಿಯವರೇ". ಹಾಗಾದರೆ ನಮ್ಮ ಇಲ್ಲಿಯತನಕದ ಪ್ರಯತ್ನ ಕೈಗೂಡಿತು.

"ಅದೃಷ್ಟವೇ ನಮ್ಮನ್ನು ಹುಡುಕಿಕೊಂಡು ಬಂದ ಹಾಗಾಯಿತು" ಎಂದು ಆ ಯಜಮಾನನು CH-೪ ಮತ್ತು M-೭ರನ್ನು ಉದ್ದೇಶಿಸಿ ಹೇಳಿದನು. "ಭೂ ನಿವಾಸಿಗಳೇ,ನಾವೂ ಸಹ ಭೂ ನಿವಾಸಿಗಳೇ ಎಂದರೆ ನಿಮಗೆ ಆಶ್ಚರ್ಯವಾಗಬಹುದು ಅಲ್ಲವೆ?

ಅದಕ್ಕೇ CH-೪ "ಹಾಗಾದರೆ ನೀವು ಇಲ್ಲಿಗೆ ಹೇಗೆ ಬಂದಿರಿ"? ಎಂದು ಕೇಳಿದನು. ಅದಕ್ಕೆ ಆ ಯಜಮಾನನು ಹೇಳಿದನು. "ನಮ್ಮ ಪೂರ್ವಜರು ೩ ದಶಸಾವಿರ ವರ್ಷಗಳ ಹಿಂದೆ ಈ ಗುರುಗ್ರಹಕ್ಕೆ ಬಂದರೆನ್ನುವದನ್ನು ನಮ್ಮ ಇತಿಹಾಸ ಹೇಳುತ್ತದೆ. ಹಾಗೆ ಅವರು ಇಲ್ಲಿಗೆ ಬರಬೇಕಾದರೆ ನಮ್ಮಂತೆ ಯಾವುದೋ ವಸ್ತುವನ್ನು ಬಳಸಿ ಬಂದಿರಬಹುದು. ಅದರ ಬಗ್ಗೆ ಅಷ್ಟು ಮಾಹಿತಿಯಿಲ್ಲ. ಆದರೆ ಅವರು ಭೂಮಿಯಿಂದ ಬಂದರೆನ್ನುವದಕ್ಕೆ ಸಂಶಯವೇ ಇಲ್ಲ. ಅಲ್ಲಿಂದ ನಮ್ಮ ಪೂರ್ವಜರು ಇಲ್ಲಿಯ ವಾತಾವರಣಕ್ಕೆ ಹೊಂದಿಕೊಂಡರು. ಇದು ನಿಮ್ಮ ಭೂಮಿಯ ಹಾಗೆ ನಮಗೆ ಅನುಕೂಲವಾಗಿದೆ. ಆದರೆ ನಾವು ಯಾವುದೇ ತರಹದ ಬೆಳೆಯನ್ನು ಬೆಳೆಯುವದಿಲ್ಲ. ನಮಗೆ ನೆಲವೇ ಇಲ್ಲವೆಂದ ಮೇಲೆ ನಾವೇನು ಬೆಳೆಯುತ್ತೇವೆ. ನಮಗೆ ಇಲ್ಲಿ ಆಹಾರವೆಂದರೆ ಆಮ್ಲಜನಕವೊಂದೇ. ನಮಗೆ ಯಾವುದೇ ತರದ ಉದ್ಯೋಗವಿಲ್ಲ. ಆದರೆ ನಮ್ಮ ಪೂರ್ವಜರ ಸಹೋದರರು ಬೇರೆ ಗ್ರಹಕ್ಕೆ ಹೋಗಿ ಅಲ್ಲಿಯೇ ಒಂದು ಸಂತತಿ ಆರಂಭಿಸಿದ್ದಾರೆ. ಅಲ್ಲಿ ಇಲ್ಲಿಯ ಹಾಗೇ ಇಲ್ಲ. ಅಲ್ಲಿಯ ಭೂಮಿಯಲ್ಲಿರುವ ಎಲ್ಲ ಅನುಕೂಲತೆಗಳೂ ಇವೆ. ಆದ್ದರಿಂದ ಬಹಳ ಮಂದಿ ನಮ್ಮ ಸಹೋದರರು ಅಲ್ಲಿಯೇ ಉಳಿದಿದ್ದಾರೆ. ನಮಗೆ ನೋಡಬೇಕೆನಿಸಿದಾಗ ಅವರೇ ಬರುತ್ತಾರೆ. ಇಲ್ಲವೆ ನಾವು ಹೋಗುತ್ತೇವೆ. ಹೀಗೆ ನಮ್ಮ ಅವರ ಸಂಬಂಧ ನಡೆದಿದೆ.

ಇನ್ನು ನಮ್ಮ ಇತಿಹಾಸವು ನಮ್ಮ ಪೂರ್ವಜರು ಭೂಮಿಯಿಂದ ಬಂದರೆನ್ನುವುದೆಂದು ಹೇಳಿತು. ನಮಗೆ ಭೂಮಿಯನ್ನು ನೋಡಬೇಕು, ಅಲ್ಲಿ ನಮ್ಮ ಸಹೋದರರು ಇರಬಹುದು ಎಂದು ಕುತೂಹಲವುಂಟಾಯಿತು. ನಮ್ಮ ಪೂರ್ವಜರು ಭೂಮಿಗೆ ಬರಲು ಪ್ರಯತ್ನ ಮಾಡಿದರು. ಆದರೆ ಅವರಿಗೆ ಹಲವಾರು ಗೋಳಾಕೃತಿಗಳು ಕಂಡವು. ಆದರಲ್ಲಿ ಯಾವುದೇ ಒಂದರಲ್ಲಿ ಪ್ರವೇಶ ಮಾಡಿದರು. ಅದು ಭೂಮಿಯಾಗಿರದೆ ಬೇರೆ ಗ್ರಹವಾಗಿತ್ತು. ಅದು ಗುರುಗ್ರಹಕ್ಕಿಂತ ಉತ್ತಮವಾಗಿತ್ತು. ಅಲ್ಲಿಯೂ ಸ್ವಲ್ಪ ಜನ ಉಳಿದರು. ಹೀಗೆ ಅಲ್ಲಿಯೂ ನಮ್ಮ ಸಂಸ್ಕೃತಿ ಬೆಳೆಯಿತು.

ಆದರೆ ಮುಂದೆ ನಮ್ಮ ಕಾಲಕ್ಕೆ ನೀವು ಕರೆಯುವ 'ಹಾರುವ ತಟ್ಟೆ' ನಿರ್ಮಿಸಿದೆವು. ನಾವೂ ಇದನ್ನು ಸಂತೋಷಕ್ಕಾಗಿ ಕ್ರೀಡೆಗಾಗಿ ಬಳಸುತ್ತೇವೆ.

ಹಾಗೆ ನಮ್ಮ ವಾಹನಗಳು ಅಂತರಿಕ್ಷದಲ್ಲಿ ಹಾರಾಡುತ್ತಿರುವಾಗ ಒಂದು ಗ್ರಹದ ಸುತ್ತ ಅನೇಕ ದುಂಡಗಿನ ವಸ್ತುಗಳು ಅದನ್ನು ಸುತ್ತುತ್ತಿರುವಂತೆ ಕಂಡವು. ನಮಗೆ ಕುತೂಹಲವುಂಟಾಯಿತು. ಆ ಗ್ರಹವೇನಾದರೂ ಭೂಮಿಯಾಗಿರಬಹುದು ಎಂದು

ನಮಗೆ ಸಂಶಯವುಂಟಾಯಿತು. ನಮ್ಮಲ್ಲಿ (ಈ ಗುರುಗ್ರಹಕ್ಕೆ) ಗುರುತ್ವಾಕರ್ಷಣ ಶಕ್ತಿಯಿಲ್ಲ. ಆದ್ದರಿಂದ ಇಲ್ಲಿರುವ ವಸ್ತುಗಳೆಲ್ಲವೂ ತೇಲುತ್ತವೆ.

ನಾವು ಭೂಮಿಯನ್ನು ಪತ್ತೆಹಚ್ಚಿದೆವು. ಆದರೆ ಅಲ್ಲಿಳಿಯಲಾಗಲಿಲ್ಲ. ಏಕೆಂದರೆ ನಿಮ್ಮಲ್ಲಿ ಗುರುತ್ವ ಬಲವಿದೆ. ಒಮ್ಮೆ ನಮ್ಮ ವಾಹನವು ಭೂಮಿಯ ಹತ್ತಿರಕ್ಕೆ ಬಂದಿತು. ಕೂಡಲೇ ಅದು ಭೂಮಿಯ ಸೆಳೆತಕ್ಕೆ ಒಳಗಾಗಿ ಭೂಮಿಯ ಮೇಲೆ ಬಿದ್ದು ನಾಶವಾಯಿತು. ಅಲ್ಲಿಯ ವಾತಾವರಣ ಸಹಿಸಲಾರದೆ ನಮ್ಮ ಸಹೋದರರು ಅವಶೇಷ ರಹಿತವಾಗಿ ನಾಶವಾದರು. ಇದು ನಿಮಗೆ ಗೊತ್ತಿರಬಹುದು. ನಮ್ಮ ಈ ವಾಹನದಲ್ಲಿ ಏನೂ ವಿಶೇಷವಿಲ್ಲ. ಇದೂ ಗಾಳಿಗೆ ತೇಲುವದರಿಂದ ಎಲ್ಲಿ ಬೇಕಾದರೂ ಹಾರಬಹುದು. ತಟ್ಟೆಯಾಕಾರದ ಪುಟ್ಟ ಸ್ಥಳ, ಮುಂದೆ ಗಾಜಿನ ಕವಚವಷ್ಟೇ. ಮತ್ಯಾವ ವಿಶೇಷವಿಲ್ಲವಷ್ಟೇ. ಆದರೆ ನಮ್ಮ ಗ್ರಹದ ಮೇಲೆ ಇಳಿಯುವ ಹಾಗೆ ಇದಕ್ಕೆ ವ್ಯವಸ್ಥೆಯಿದೆ. ಹೀಗಾಗಿ ನಮ್ಮ ಪ್ರಯತ್ನಕ್ಕೆ ಮಣ್ಣು ಹಾಕಿದಂತಾಯಿತು. ಅಕಸ್ಮಾತ್ತಾಗಿ ನೀವು ಇಂದು ನಮಗೆ ಸಿಕ್ಕಿದಿರಿ. ನಮಗೆ ಬಹಳ ಆನಂದವಾಗಿದೆ. ನಾವು ನಿಮ್ಮ ಕೂಡ ಬರುವ ಹಾಗಿಲ್ಲ. ನಮಗೆ ನಿಮ್ಮ ಗ್ರಹದ ವಾತಾವರಣ ಹೊಂದುವದಿಲ್ಲ. ಆದರೆ ನೀವೂ ಉಭಯವಾಸಿಗಳು ಇದ್ದಹಾಗೆ. ನಿಮ್ಮ ಆ ದುಂಡಗಿನ ವಸ್ತುಗಳು ಏನು ಎಂದು ತಿಳಿಸಿ ?

ಅದಕ್ಕೆ M–೭ನು "ಸಹೋದರನೇ ಅವಕ್ಕೆ ನಾವು ಉಪಗ್ರಹ ಎಂದು ಕರೆಯುತ್ತೇವೆ, ಅವನ್ನು ವಿವಿಧೋದ್ದೇಶಗಳಿಗಾಗಿ ಬಳಸುತ್ತೇವೆ. ಈಗ ನಾವು ಅದೇ ವಾಹನದಿಂದ ಬಂದಿದ್ದೇವೆ. ನಮ್ಮ ಉದ್ದೇಶ ನಿಮ್ಮ ಹಾರುವ ತಟ್ಟೆಗಳ ಬಗ್ಗೆ ಸಂಶೋಧಿಸಲು. ಅದೃಷ್ಟವಶಾತ್ ನೀವೇ ಸಿಕ್ಕಿರಿ. ಇಂದು ನಮ್ಮ ಇತಿಹಾಸದ ಇಷ್ಟು ದಿನದ ಕುತೂಹಲ ಕೊನೆಗೊಂಡಿತು. ನಾವು ನಿಮ್ಮನ್ನು–ಬೇರೆ ಯಾವುದೇ–ನಮಗಿಂತ ಮುಂದುವರೆದ ಜನರೆಂದು ತಿಳಿದಿದ್ದೆವು. ನೀವು ನಮ್ಮವರೇ ಎಂದಮೇಲೆ ಬಹಳ ಆನಂದದ ವಿಷಯ. ಈ ನಮ್ಮ ಭೆಟ್ಟಿಯು ಒಂದು ದಾಖಲೆಯೆನಿಸಿತು. ಇಷ್ಟು ಹೊತ್ತಿನತನಕ ನೀವು ನಿಮ್ಮ ಪರಿಚಯ ಮಾಡಿಸಿದಿರಿ ಒಳ್ಳೆಯದಾಯಿತು. ನಮ್ಮ ಕುತೂಹಲಕ್ಕೆ ತೆರೆ ಎಳೆದಂತಾಯಿತು. ನಮಗಾಗಿ ನಮ್ಮ ಸಹೋದರರು ಕಾಯುತ್ತಿರುತ್ತಾರೆ. ಅವರಿಗೆ ಈ ಸಂತೋಷದ ವಿಷಯ ತಿಳಿಸುತ್ತೇವೆ. ನಮಗೆ ಹೋಗಲು ಅನುಮತಿ ನೀಡಿರಿ.

ಆಗ ಆ ಯಜಮಾನನು "ಇನ್ನೂ ಸ್ವಲ್ಪಕಾಲ ಇಲ್ಲೇ ಇದ್ದು, ನಮ್ಮ ಗ್ರಹವನ್ನು ವೀಕ್ಷಿಸಬಹುದಲ್ಲ" ಎಂದನು.

ಅದಕ್ಕೆ CH–೩ ಹೇಳಿದನು. "ಇನ್ನೇನು ನಮಗೆ ಇಲ್ಲಿ ಬರಲು ಯಾವುದೇ ಅಡೆತಡೆಗಳಿಲ್ಲ ಮತ್ತೆ ಬರುತ್ತೇವೆ. ಈಗ ನಮ್ಮ ಸಹೋದರರು ನಮಗಾಗಿ ಕಾಯುತ್ತಿರುತ್ತಾರೆ. ಮತ್ತೆ ಬರುತ್ತೇವೆ ಹೋಗಲು ಅನುಮತಿ ನೀಡಿರಿ".

ಹಾಗಾದರೆ "ಹೋಗಿಬನ್ನಿರಿ ಒಳ್ಳೆಯದಾಗಲಿ. ನಮ್ಮ ನಿಮ್ಮ ಬಾಂಧವ್ಯವು ಬೆಳೆಯುತ್ತ ಹೋಗಲಿ. ಮತ್ತೆ ಬನ್ನಿರಿ" ಎಂದು CH–೩ ಮತ್ತು M–೭ರನ್ನು ಬೀಳ್ಕೊ

ಟ್ಟಿನು. ಆ ಯಜಮಾನನು. CH-೪ ಮತ್ತು M-೭ರ ಹೃದಯ ಸಂತೋಷದಿಂದ ಉಕ್ಕಿತು. ತಾವು "ಹಾರುವ ತಟ್ಟೆ"ಯ ಬಗ್ಗೆ ತಿಳಿದುಕೊಂಡವರಲ್ಲಿ ಮೊದಲಿಗರಾದೆವು ಎಂಬ ಹೆಮ್ಮೆ ಬೇರೆ. ಅವರು ತಮ್ಮ "ಸ್ಪೇಸ್‌ಡ್ರಾಮಾ"ದ ಕಡೆಗೆ ಹೆಮ್ಮೆಯ ನಗೆ ಬೀರಿದರು. ಅದೂ ಸಹಿತ ನಾನೂ ನಿಮ್ಮಂತೆ ಮೊದಲಿಗ ಎನ್ನುವಂತೆ ತೋರಿತು. ನಂತರ CH-೪, M-೭ "ಸ್ಪೇಸ್‌ಡ್ರಾಮಾ"ವನ್ನು ಏರಿ ಹೊರಟರು. ಸ್ಪೇಸ್‌ಡ್ರಾಮಾ ಶಬ್ದ ಮಾಡುತ್ತಾ ಗುರುಗ್ರಹದಿಂದ ದೂರವಾಗುತ್ತಾ ಹೋಯಿತು. "ಸ್ಪೇಸ್‌ಡ್ರಾಮಾ" ತನ್ನ ಮಾತೃನೌಕೆಯಾದ ಶಿವಸ್ವಾಟ್‌ನ ಕಡೆ ಕಕ್ಷಪಾತಳಿಯನ್ನು ಅನುಸರಿಸಿ ಸಾಗಿತು.

□ □

# ಆರ್ತನಾದ

● ಡಿ. ಅಜೇಂದ್ರಸ್ವಾಮಿ

ಬೆಟ್ಟ-ಗುಡ್ಡದ ನಡುವೆ
ಬಿದ್ದೆನ್ನ-ಕರೆತಂದು ಮೈದಡವಿ
ಸಂತೈಸಿ;
ಮೂರ್ತಿ ಮಾಡಿದೆ ನೀನು.

ಹಾಗಿದ್ದ ನಾನು ಹೀಗಾದೆನೇ ?
"ಧನ್ಯೋsಸ್ಮಿ ಧನ್ಯೋsಸ್ಮಿ"
ಎಂದೆ ನಾನು.

ವೇದ ಮಂತ್ರಗಳರ್ಥ
ತಿಳಿಯದೇ ಬಾಯಿಗಳು
ಕಿವಿಪಟಲ ತುರಿವಂತೆ
ಹಾಲು ಹಣ್ಣಿನ ರಾಡಿ ಹರಿಸಿ
ಗರ್ಭಗುಡಿ ಕಟ್ಟಿದಾಗ
ನೀನೆಲ್ಲಿದ್ದೆ
ನನ್ನ ಪ್ರಾಣಶಿಲ್ಪಿ ?

ನನ್ನಲ್ಲಿ ದೈವತ್ವ
ಆರೋಪಿಸಿದರಿವರು.
ನಾಲ್ಕು ಗೋಡೆಯ ಮಧ್ಯ
ಬಂಧಿಸಿದರು.
ಅಕ್ಕಪಕ್ಕದಲೆರಡು
ದೀಪಗಳ ಹಚ್ಚಿಟ್ಟು
ನನ್ನೆದೆಯ ಜ್ಯೋತಿಯನು
ನಂದಿಸಿದರು.

ತಮ್ಮೆಲ್ಲ ಭ್ರಷ್ಟತೆಗೆ
ಮತ್ತೆಲ್ಲ ನೀಚತೆಗೆ
ಭಕ್ತಿಪರದೆಯನೆಳೆದು
ವಂಚಿಸಿದರು.
ಕಾಯಿ ಕರ್ಪೂರ ಸಲಿಸಿ
ಧೂಪ ದೀಪವ ಉರಿಸಿ
ನೂರಾರು ಬೇಕುಗಳ
ಮಂಡಿಸಿದರು.

ಈ ಗುಡಿಯು, ಈ ಗೋಡೆ
ಈ ಹಣ್ಣು, ಈ ಹೂವು
ಈ ಕಾಯಿ ಕರ್ಪೂರವು
ನನಗೆ ಬೇಡ.

ಈ ಅಸಹಾಯಕಸ್ಥಿತಿಯ
ದೈವತ್ವವನು ಬಿಡಿಸಿ
ನನ್ನನ್ನು
ಆ ಬಿಟ್ಟ ಬಯಲಿನಲಿ
ದೂಡು.

□ □

# ಎರಡು ಅಪೂರ್ವ ಸ್ನಾತಕೋಪದೇಶಗಳು

● ಬಿ. ಸಿ. ಸಾದರ

ಘಟಿಕೋತ್ಸವ, ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ತೀರ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಒಂದು ಅರ್ಥಪೂರ್ಣ ಸಮಾರಂಭ. ವೇದೋಪನಿಷತ್ತುಗಳ ಕಾಲದಷ್ಟು ಹಿಂದೆಯೇ ಈ ಆಚರಣೆಯ ಮೂಲಬೇರುಗಳನ್ನು ಗುರುತಿಸಬಹುದು. ನಮ್ಮ ಶಾಸನ ಸಾಹಿತ್ಯದಲ್ಲಿ ಉಕ್ತವಾಗಿರುವ 'ಸಮಾವರ್ತನ' ಸಮಾರಂಭ, ಘಟಿಕೋತ್ಸವ ಸಮಾರಂಭವೇ ಆಗಿದೆ. ಇಂದಿನ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳು ವರ್ಷವರ್ಷವೂ ಏರ್ಪಡಿಸುತ್ತಿರುವ 'ಪದವೀದಾನ' ಸಮಾರಂಭಗಳು,ಪ್ರಾಚೀನ ಘಟಿಕೋತ್ಸವಗಳ ಪರಂಪರೆಯನ್ನು ಮುಂದುವರೆಸಿಕೊಂಡು ಸಾಗುತ್ತಿರುವ ಮಾದರಿಯವಾಗಿವೆ.

'ವಿದ್ಯೆ' ಯಾರಿಂದಲೂ ಕದಿಯಲಾಗದ ಒಂದು ಪ್ರಚ್ಛನ್ನಗುಪ್ತಧನ. ಮಾನವನಿಗೂ ಪಶುಗಳಿಗೂ ಅಂತರ ಕಲ್ಪಿಸಿರುವ ಮುಖ್ಯ ಸಂಸ್ಕಾರ. ಕಾಲಾತೀತವಾಗಿ ಮಾನವನನ್ನು ಸಂಸ್ಕರಿಸುತ್ತಲೇ ಸಾಗುವ ವಿದ್ಯೆಗೆ ಕೊನೆಯೆಂಬುದೇ ಇಲ್ಲ. ಆದರೆ ವ್ಯಾವಹಾರಿಕ ಅನುಕೂಲಕ್ಕಾಗಿ ನಿರಂತರವಾಗಿ ಸಾಗುವ ಈ ವಿದ್ಯೆಗೆ ಒಂದು ನಿರ್ದಿಷ್ಟ ಹಂತವನ್ನು ಕಲ್ಪಿಸಿ, ಬಿ.ಎ, ಎಂ.ಎ; ಎಂ.ಎ.ಪಿಎಚ್.ಡಿ. ಎಂ.ಬಿ.ಬಿ.ಎಸ್., ಬಿ.ಇ., ಎಂ.ಇ., ಮೊದಲಾದ ಪದವಿ ಪರೀಕ್ಷೆಗಳನ್ನು ಪೂರೈಸಿದ ನಂತರ "ಇಲ್ಲಿಗೆ ಕಲಿಯುವುದು ಮುಗಿಯಿತು" ಎಂದು ಹೇಳುವುದು ಒಂದು ಸಾಮಾನ್ಯ ವಾಡಿಕೆ. ಇಂಥ ಪದವಿ ಪರೀಕ್ಷೆಗಳನ್ನು ಮುಗಿಸಿದ ಅಭ್ಯರ್ಥಿಗಳಿಗೆ ಅಧಿಕೃತವಾಗಿ 'ಪದವಿ'ಗಳನ್ನು ದಯಪಾಲಿಸಿ, ಅವರನ್ನು ವ್ಯಾವಹಾರಿಕ ಜೀವನ ರಂಗಕ್ಕೆ ಬೀಳ್ಕೊಡುವ ಹಿನ್ನೆಲೆಯಲ್ಲಿ ನಡೆಯುವ 'ಪದವಿದಾನ' ಸಮಾರಂಭಗಳು ಸಾಂದರ್ಭಿಕವಾಗಿ ಅರ್ಥಪೂರ್ಣವಾಗಿರುತ್ತವೆ.

ಬಿ.ಎ., ಎಂ.ಎ. ಹಾಗೂ ಇತರ ಪದವಿ ಪರೀಕ್ಷೆಗಳನ್ನು ಮುಗಿಸಿದಾಕ್ಷಣ ಆ ವ್ಯಕ್ತಿ ಸರ್ವಜ್ಞನಾಗುವುದು ಸಾಧ್ಯವಿಲ್ಲ. ಪರಿಮಿತ ಕ್ಷೇತ್ರದಲ್ಲಿ ಮಾತ್ರ ಪರಿಣತಿಗೊಳಿಸುವ ಇತ್ತೀಚಿನ ಶಿಕ್ಷಣ ವ್ಯವಸ್ಥೆಯಂತೂ ಸ್ನಾತಕನ ಸರ್ವಾಂಗೀಣ ವಿಕಾಸಕ್ಕೆ ಒಂದು ದೊಡ್ಡ ಆತಂಕವೇ ಸರಿ. ನಾಲ್ಕು ಗೋಡೆಗಳ ನಡುವೆ ಕಲಿತ ವಿದ್ಯೆ ವ್ಯಕ್ತಿಯ ಅರಿವನ್ನು ಜಾಗೃತಗೊಳಿಸಿ, ಜ್ಞಾನದಾಹಿಯನ್ನಾಗಿ ಮಾಡಬಹುದೇ ಹೊರತು, ಆತ ಸಾಮಾಜಿಕವಾಗಿ

ವ್ಯಾವಹಾರಿಕವಾಗಿ, ವೈಚಾರಿಕವಾಗಿ ಮುಕ್ತವಾಗಿ ವ್ಯವಹರಿಸಬಲ್ಲ ಸಾಮಾನ್ಯಜ್ಞಾನ ಕೊಡುವಲ್ಲಿ ಅಷ್ಟೇನೂ ಮಹತ್ವದ ಕಾರ್ಯ ಮಾಡಲಾರದು. ಇಂಥ ಜಾಗೃತಗೊಂಡ ಸ್ನಾತಕನ ಅರಿವಿಗೆ ಹಿರಿಯರ ಸಮರ್ಥ ಮಾರ್ಗದರ್ಶನ ದೊರೆತರೆ ಆತ ತನ್ನ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳುವಲ್ಲಿ ಹೆಚ್ಚು ಸಹಾಯಕವಾಗುತ್ತದೆ. 'ಪದವಿದಾನ' ಸಮಾರಂಭಗಳಲ್ಲಿ ಇಂಥ ಅಮೂಲ್ಯ ಮಾರ್ಗದರ್ಶನ ಮಾಡಬೇಕಾದುದು ಅವಶ್ಯವಿದೆ. ಇಲ್ಲವಾದರೆ ಅವು ಕೇವಲ ಪದವಿಗಳನ್ನು ದಾನಮಾಡಿ ಕಳಿಸುವ ದಾನಸಮಾರಂಭಗಳಾಗಬಹುದು. ವೇದ ಉಪನಿಷತ್ತುಗಳ ಕಾಲದಲ್ಲಿ ವಿದ್ಯೆಯನ್ನು ಪೂರೈಸಿ ಜೀವನರಂಗಕ್ಕೆ ಪದಾರ್ಪಣ ಮಾಡುವ ಸ್ನಾತಕರಿಗೆ ಅಂದಿನ ಆಚಾರ್ಯರು ಇಂಥ ಸಮಾರಂಭಗಳನ್ನೇರ್ಪಡಿಸಿ ಅವರು ತಮ್ಮ ಮುಂದಿನ ಜೀವನವನ್ನು ಸುವ್ಯವಸ್ಥಿತವಾಗಿ ಆದರ್ಶಮಯವಾಗಿ ರೂಪಿಸಿಕೊಳ್ಳಬಲ್ಲ ಯೋಗ್ಯ ಉಪದೇಶಗಳನ್ನು ಮಾಡುತ್ತಿದ್ದರು. ಈ ಉಪದೇಶಗಳು ಕೇವಲ ಅಂದಿನ ಸ್ನಾತಕರಿಗಷ್ಟೇ ಅಲ್ಲ. ಇಂದಿನ ಸ್ನಾತಕರಿಗೂ ಮೌಲ್ಯಯುತ ಮಾರ್ಗದರ್ಶಕಗಳಾಗಿವೆ. ಈ ಉದ್ದೇಶದ ಹಿನ್ನೆಲೆಯಲ್ಲಿಯೇ ಪ್ರಾಚೀನ ಕಾಲದಲ್ಲಿ ಪ್ರಚಾರವಾಗಿದ್ದ ವಿರಳ ಸ್ನಾತಕೋಪದೇಶಗಳು ಅಪೂರ್ವವೂ ಗಮನೀಯವೂ ಆಗಿವೆ.

ತೈತ್ತಿರೀಯ ಉಪನಿಷತ್ತಿನ 'ಶಿಕ್ಷಾವಲ್ಲಿ' ಭಾಗದಲ್ಲಿ ಬರುವ 'ಸ್ನಾತಕೋಪದೇಶ' ಎಂದೇ ಹೇಳಲಾಗಿರುವ ಒಂದು ಉಪದೇಶ ಇಂತಿದೆ:

"ವೇದಾಧ್ಯಯನ ಮಾಡಿಸಿ ಕೊನೆಯಲ್ಲಿ ಗುರು ತನ್ನ ಶಿಷ್ಯನಿಗೆ ಅನುಶಾಸನ ಮಾಡುತ್ತ ಸತ್ಯವನ್ನೇ ಹೇಳು. ಧರ್ಮದಂತೇ ನಡೆ. ಸದಾ ಅಧ್ಯಯನ ನಿರತನಾಗಿರು; ಆಚಾರ್ಯರಿಗೆ ಗುರುದಕ್ಷಿಣೆಯನ್ನು ಅರ್ಪಿಸುತ್ತಿರುವ ಪರತಿಯನ್ನು ಮುಂದುವರೆಸು. ಸತ್ಯದಿಂದ ತಪ್ಪಬೇಡ. ಧರ್ಮದಿಂದ ತಪ್ಪಬೇಡ. ಕ್ಷೇಮವಾಗಿರು. ಐಶ್ವರ್ಯವಂತನಾಗಿರು. ಸದಾ ಅಧ್ಯಯನ, ಅಧ್ಯಾಪನ ನಿರತನಾಗಿರು.

ದೇವ-ಪಿತೃಕರ್ಮಗಳಿಂದ ತಪ್ಪಬೇಡ. ತಾಯಿ ದೇವರೆಂದು ತಿಳಿ, ತಂದೆ ದೇವರೆಂದು ತಿಳಿ. ಗುರು ದೇವರೆಂದು ತಿಳಿ. ಅತಿಥಿ ದೇವರೆಂದು ತಿಳಿ. ಯಾವ ಕಾರ್ಯಗಳು ನಿಂದಾಸ್ಪದವಾಗಿಲ್ಲವೋ ಅವನ್ನಷ್ಟೇ ಮಾಡು. ಉಳಿದವುಗಳನ್ನು ಮಾಡಬೇಡ. ಯಾವವು ಸುಚರಿತೆಗಳೋ ಅವನಷ್ಟೇ ಅನುಸರಿಸು. ಉಳಿದವುಗಳನ್ನಲ್ಲ.

ನಿನಗಿಂತಲೂ ಹೆಚ್ಚಿನ ಬ್ರಹ್ಮವಿದರಿಗೆ ನಿನ್ನ ಆಸನವನ್ನಿತ್ತು ಗೌರವಿಸು. ಶ್ರದ್ಧೆಯಿಂದ ದಾನಮಾಡು. ಶ್ರದ್ಧೆಯಿಲ್ಲದೆ ದಾನಮಾಡಬಾರದು. ಅಂದವಾಗಿ ದಾನ ಮಾಡು, ವಿನಯದಿಂದ ದಾನ ಮಾಡು, ಭಯದಿಂದ ದಾನ ಮಾಡು, ಅರಿವಿನಿಂದ ದಾನ ಮಾಡು.

ಒಂದುವೇಳೆ ನೀನು ಮಾಡುತ್ತಿರುವ ಕಾರ್ಯಗಳಲ್ಲಿ ಅಥವಾ ನಿನ್ನ ನಡವಳಿಕೆಯಲ್ಲಿ ಸಂಶಯ ಮೂಡಿದರೆ ಆಗ ವಿವೇಕಿಗಳೂ, ಯೋಗ್ಯರೂ, ಸಚ್ಚರಿತ್ರರೂ, ಮೃದುಸ್ವಭಾವದವರೂ ಆದ ಬ್ರಹ್ಮವಿದರು ಹೇಗೆ ನಡೆಯುತ್ತಾರೋ ಹಾಗೆಯೇ ನೀನೂ ನಡೆ. ಅದೇ ರೀತಿ ಅಪವಾದಿತರ ಬಗೆಗೆ ವಿವೇಕಿಗಳೂ, ಯೋಗ್ಯರೂ ಸಚ್ಚರಿತರೂ ಮೃದುಸ್ವಭಾವದವರೂ ಆದ ಬ್ರಹ್ಮವಿದರು ಹೇಗೆ ನಡೆಯುತ್ತಾರೋ ಹಾಗೆ ನೀನೂ ನಡೆ. ಇದು

ಅಪ್ಪಣೆ. ಇದು ಉಪದೇಶ. ಇದೇ ವೇದರಹಸ್ಯ. ಇದು ಅನುಶಾಸನ. ಹೀಗೆಯೇ ನಡೆಯತಕ್ಕದ್ದು. ಇದನ್ನು ಹೀಗೆಯೇ ಪಾಲಿಸತಕ್ಕದ್ದು." 'ಪ್ರಭುಸಮ್ಮಿತ'ದಂತೆ ಆದೇಶಿತವಾಗಿರುವ ಈ ಉಪದೇಶ, ಸ್ನಾತಕನ ದೃಷ್ಟಿಯಿಂದ ತುಂಬ ಬೆಲೆಯುಳ್ಳದ್ದು. ಧಾರ್ಮಿಕ ಅಧ್ಯಯನವೇ ಮುಖ್ಯವಾಗಿರುತ್ತಿದ್ದ ಮಿತಸಂಖ್ಯೆಯ ವಿದ್ಯಾರ್ಥಿಗಳಿಗೆ ಆಚಾರ್ಯರು ವೈಯಕ್ತಿಕವಾಗಿ ಈ ರೀತಿಯ ಉಪದೇಶ ಮಾಡುವ ಪರಿಪಾಠ ಅಂದು ಸಾಮಾನ್ಯವಾಗಿತ್ತು. ಆದರೆ ಪರಿಸ್ಥಿತಿ ವಿಪರ್ಯಾಸಗೊಂಡಿರುವುದರಿಂದ ಇಂಥ ವೈಯಕ್ತಿಕ ಉಪದೇಶಗಳಿಗಿಂದು ಅವಕಾಶವಿಲ್ಲ. ಅಂತೇ ಪದವಿದಾನ ಸಮಾರಂಭಗಳಲ್ಲಿ ಸಾಮೂಹಿಕವಾಗಿ ಉಪದೇಶಿಸುವ ಉಪಕ್ರಮವನ್ನು ಅನುಸರಿಸಲಾಗುತ್ತಿದೆ. ಈ ಸಮಯದಲ್ಲಿ 'ಸ್ನಾತಕೋಪದೇಶ'ದ ಕೆಲ ಭಾಗಗಳನ್ನು ಓದಿ ಹೇಳಲ್ಪಡುತ್ತಿರುವುದು ಔಚಿತ್ಯಪೂರ್ಣ.

'ಚರಕ ಸಂಹಿತೆಯ' 'ವಿಮಾನ ಸ್ಥಾನ'ದಲ್ಲಿ ವೈದ್ಯಕೀಯ ಸ್ನಾತಕರಿಗೆ ಮಾತ್ರ ಉಪದೇಶಿಸುತ್ತಿದ್ದ ಒಂದು ವಿಶಿಷ್ಟ 'ಸ್ನಾತಕೋಪದೇಶ'ವಿದೆ. ಅದರಲ್ಲಿ ಬರುವ ಉಪದೇಶ ಎಲ್ಲಿಂದದಲ್ಲೂ ಗಮನಾರ್ಹವಾಗಿದೆ. ವೈದ್ಯಕೀಯ ಅಧ್ಯಯನವನ್ನು ಪೂರೈಸಿ ಹೊರಬರುವ ಸ್ನಾತಕರಿಗೆ "ಗುರುವಿನ ಅಪ್ಪಣೆ ಪಡೆದು ವೈದ್ಯಕೀಯ ವೃತ್ತಿಯನ್ನು ಪ್ರಾರಂಭಿಸುವಾಗ ಗುರುವಿನ ಗೌರವ ಧನವನ್ನು ನೀಡಬೇಕು. ಇಹಲೋಕದಲ್ಲಿ ಧರ್ಮ ಮತ್ತು ಅರ್ಥ ಸಿದ್ಧಿಗಾಗಿ, ಪರಲೋಕದಲ್ಲಿ ಸ್ವರ್ಗಪ್ರಾಪ್ತಿಗಾಗಿ, ಗೋಬ್ರಾಹ್ಮಣರಾದಿ ಎಲ್ಲರ ಸುಖಕ್ಕಾಗಿ ನೀನು ದುಡಿಯಬೇಕು. ಪ್ರತಿದಿನವೂ ಎದ್ದಾಗ, ಕುಳಿತಾಗ, ಸರ್ವಾತ್ಮದಿಂದ ರೋಗಿಗಳ ಆರೋಗ್ಯಭಾಗ್ಯಕ್ಕಾಗಿ ಪ್ರಯತ್ನಮಾಡಬೇಕು. ನಿನ್ನ ಪ್ರಾಣ ಹೋಗುವಂತಿದ್ದರೂ ರೋಗಿಗಳಿಗೆ ಎಂದೂ ದ್ರೋಹ ಬಗೆಯಬೇಡ. ಮನಸ್ಸಿನಲ್ಲಿ ಕೂಡಾ ಪರಸ್ತ್ರೀ ಪರಧನಕ್ಕಾಗಿ ಆಸೆಪಡಬೇಡ. ನಿನ್ನ ವೇಷ-ಭೂಷಣ ನಿರಾಡಂಬರವಾಗಿರಲಿ. ಹೆಂಡ ಕುಡಿಯಬಾರದು, ಪಾಪ ಮಾಡಬಾರದು. ಪಾಪ ಮಾಡುವವರಿಗೆ ಸಹಾಯ ಮಾಡಬಾರದು. ನಿನ್ನ ಮಾತು ಸರಳ, ಸಂಕ್ಷಿಪ್ತ, ಸತ್ಯವಾಗಿರಲಿ. ಯಾವುದೇ ದೇಶ, ಕಾಲ, ಪರಿಸರಗಳಲ್ಲೂ ನೀನು ಸಂಪಾದಿಸಿದ ಜ್ಞಾನದಂತೆ ನಡೆ. ಸದಾ ಪ್ರಯತ್ನಶೀಲನಾಗಿರು. ನಿನ್ನ ಶಸ್ತ್ರಗಳ ಬಗೆಗೆ ಕಾಳಜಿಯಿರಲಿ. ಯಾರ ರೋಗ ಗುಣವಾಗಲು ಸಾಧ್ಯವಿಲ್ಲವೋ ಅವರಿಗೆ ಸಾಯುವ ಸ್ಥಿತಿಯಲ್ಲಿರುವವರಿಗೆ ಮತ್ತು ಗಂಡ ಅಥವಾ ಪಾಲಕರ ಅನುಮತಿಯಿಲ್ಲದೇ ಹೆಣ್ಣುಮಕ್ಕಳಿಗೆ ಔಷಧಿಯನ್ನು ಕೊಡಬೇಕು. ಅದೇ ರೀತಿ ಗಂಡ ಅಥವಾ ಪಾಲಕರ ಅನುಮತಿಯಿಲ್ಲದೇ ಹೆಣ್ಣುಮಗಳು ಕೊಡುವ ಹಣವನ್ನು ಸ್ವೀಕರಿಸಬೇಡ.

ರೋಗಿಯಿರುವ ಕೋಣೆಯನ್ನು ಪ್ರವೇಶಿಸಿದಾಗ ಅವನ ಮಾತು, ಚಲನವಲನ, ಅವನಿಗೆ ಕೊಡಬೇಕಾದ ಔಷಧಿಗಳ ಕಡೆಗೇ ನಿನ್ನ ಗಮನವಿರಲಿ. ಆಗ ಬುದ್ಧಿ ಮತ್ತು ಇಂದ್ರಿಯಗಳನ್ನು ಬೇರೆ ವಿಷಯಗಳಲ್ಲಿ ತೊಡಗಿಸಬಾರದು. ರೋಗಿಯ ಮತ್ತು

ಅವನ ಕುಟುಂಬದ ವಿಷಯಗಳನ್ನು ಅತ್ಯಂತ ಗೌಪ್ಯವಾಗಿಡಬೇಕು. ಅಪಾಯ ಸಂಭವಿಸಬಹುದಾದ ಪ್ರಸಂಗಗಳಲ್ಲಿ ರೋಗಿಗಾಗಲಿ ಅಥವಾ ಅವನ ಸಂಬಂಧಿಕರಿಗಾಗಲಿ ನಿನಗೆ ಖಾತ್ರಿಯಾಗುವವರೆಗೆ ರೋಗಿಯ ಮರಣ ಸೂಚನೆಯನ್ನು ಕೊಡಬಾರದು.

ವಿದ್ಯೆಯಲ್ಲಿ ನೀನು ಎಷ್ಟೇ ಪಾರಂಗತನಾಗಿದ್ದರೂ ನಿನ್ನ ಜ್ಞಾನದ ಬಗೆಗೆ ಹೆಮ್ಮೆ ಪಡಬೇಡ. ನಿಜವಾಗಿ ಹೇಳಬೇಕೆಂದರೆ ಆಯುರ್ವೇದದಲ್ಲಿ ಯಾರೂ ಪೂರ್ಣ ಪಾರಂಗತರಾಗುವುದಿಲ್ಲ. ಆದ್ದರಿಂದ ನೀನು ಪ್ರಮಾತ್ತನಾಗದೇ ಹೆಚ್ಚಿನ ಜ್ಞಾನ ಸಂಪಾದನೆಗಾಗಿ ಪ್ರಯತ್ನ ಮಾಡುತ್ತಲೇ ಇರು. ಬುದ್ಧಿವಂತನಾದವನು ಎಲ್ಲಾ ಕಡೆಗಳಿಂದಲೂ ಜ್ಞಾನ ಸಂಪಾದನೆ ಮಾಡುತ್ತಾನೆ. ಅವನು ತನ್ನ ಶತ್ರುವಿನಿಂದಲೂ ಕಲಿಯಬೇಕಾದುದಿದೆ. ಹಾಗೆ ಮಾಡುವುದರಿಂದ ಅದು ಬುದ್ಧಿವಂತನ ಕೀರ್ತಿಯನ್ನೂ ಜ್ಞಾನವನ್ನೂ ಹೆಚ್ಚಿಸುತ್ತದೆ" ಎಂದು ವೈದ್ಯವೃತ್ತಿ ಕೈಕೊಳ್ಳಲಿರುವ ಸ್ನಾತಕರಿಗೆ ಉಪದೇಶಿಸಿ, ಆದರ್ಶವೈದ್ಯರಾಗುವ ಮಾರ್ಗವನ್ನು ಈ ಮೂಲಕ ಸೂಚಿಸುವ ಒಂದು ಮಹತ್ವದ ಪರಂಪರೆ ನಮ್ಮಲ್ಲಿದ್ದುದು ಕಂಡುಬರುತ್ತಿದೆ.

ಈ ಎರಡೂ ಉಪದೇಶಗಳನ್ನು ಗಮನಿಸಿದರೆ ಸ್ನಾತಕ ಆದರ್ಶಯುತ ಜೀವನವನ್ನು ರೂಪಿಸಿಕೊಳ್ಳಬೇಕೆಂಬುದೇ ಇವುಗಳ ಮುಖ್ಯ ಉದ್ದೇಶವಾಗಿರುವುದು ಸ್ಪಷ್ಟವಾಗುತ್ತದೆ. ವೈಯಕ್ತಿಕ ಚಾರಿತ್ರ್ಯಶುದ್ಧತೆ, ಹಿರಿಯರ ಬಗೆಗೆ ಗೌರವಾದರ, ಶ್ರದ್ಧೆ, ನಯ-ವಿನಯ, ಧರ್ಮವಂತಿಕೆಗಳನ್ನು ತನ್ನ ಭವಿಷ್ಯದ ಬದುಕಿನಲ್ಲಿ ರೂಢಿಸಿಕೊಳ್ಳಲು ಸ್ನಾತಕನಿಗೆ ಮಾರ್ಗದರ್ಶನ ಮಾಡುವ ಮೊದಲನೆಯ ಉಪದೇಶವಂತೂ ಯಾವುದೇ ಪದವೀಧರನಿಗಾದರೂ ಅನ್ವಯಿಸುವಂಥದ್ದಾಗಿದೆ. ಅಲ್ಲಿ ಕೊನೆಗೆ ಹೇಳಿದ ಮಾತುಗಳಂತೂ ಖಚಿತ ಮತ್ತು ನಿರ್ದಿಷ್ಟವಾಗಿದ್ದು, ಪ್ರಾಚೀನ ಕಾಲದಲ್ಲಿ ಆಚಾರ್ಯರು ತಮ್ಮ ಶಿಷ್ಯರಿಗೆ 'ಅನುಶಾಸನ'ಗಳನ್ನು ಹಾಕಿ ಅದರಂತೆಯೇ ನಡೆಯಲು ಕಟ್ಟಾ ಆದೇಶಗಳನ್ನು ಮಾಡುತ್ತಿದ್ದರೆಂಬುದನ್ನು ಸ್ಪಷ್ಟಗೊಳಿಸುತ್ತದೆ. ನೈತಿಕ ಶಿಕ್ಷಣಕ್ಕೆ ಪ್ರತ್ಯೇಕ ಏರ್ಪಾಡಿಲ್ಲದ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಇಂಥ ಆದರ್ಶ ಉಪದೇಶಗಳನ್ನು ಕೊನೆಯ ಪಕ್ಷ 'ಪದವಿದಾನ' ಸಮಾರಂಭಗಳಲ್ಲಿ ಸಂಪೂರ್ಣವಾಗಿ ಬೋಧಿಸಿ ಸ್ನಾತಕರನ್ನು ಆ ದಿಸೆಯತ್ತ ಕಾರ್ಯಪ್ರವೃತ್ತರನ್ನಾಗಿ ಮಾಡಿದರೆ ಒಳಿತಿದೆ.

ಎರಡನೆಯ ಸ್ನಾತಕೋಪದೇಶ, ಅಂದು ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಾತ್ರ ಪ್ರತ್ಯೇಕ ಘಟಿಕೋತ್ಸವ ಸಮಾರಂಭಗಳನ್ನು ಏರ್ಪಡಿಸುತ್ತಿದ್ದರೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಇಂದು ಇಂಥ ಪ್ರತ್ಯೇಕ ಸಮಾರಂಭಗಳಿಲ್ಲ. ವೈದ್ಯಕೀಯ ವೃತ್ತಿಯಲ್ಲಿ ರೂಢಿಸಿಕೊಳ್ಳಬೇಕಾದ ಪಾವಿತ್ರ್ಯತೆಯನ್ನು, ತೋರಬೇಕಾದ ಪ್ರಾಮಾಣಿಕತೆಯನ್ನು, ಅನುಸರಿಸಬೇಕಾದ ಗೌಪ್ಯತೆಯನ್ನು ಕೇವಲ ವೈದ್ಯಪದವೀಧರರಿಗೆ ಮಾತ್ರ ಬೋಧಿಸಬೇಕಾಗಿರುವುದರಿಂದ ಅವರಿಗಾಗಿ ಪ್ರತ್ಯೇಕ ಪದವಿದಾನ ಸಮಾರಂಭಗಳನ್ನೇರ್ಪಡಿಸಿ

ಇಂಥ ಉಪದೇಶಗಳನ್ನು ಕೊಡುವುದು ತುಂಬ ಅವಶ್ಯವೆನಿಸುತ್ತದೆ. ನಮ್ಮ ವಿಶ್ವವಿದ್ಯಾಲಯಗಳು ಇತ್ತ ಗಮನ ಹರಿಸುವುದು ಅವಶ್ಯವಿದೆ.

ವೈಯಕ್ತಿಕ ಆದರ್ಶ ಪಾಲನೆಯಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವದನ್ನೇ ಈ ಎರಡೂ ಸ್ನಾತಕೋಪದೇಶಗಳು ಎತ್ತಿ ಹಿಡಿಯುತ್ತವೆ. ವ್ಯಕ್ತಿ ತಾನು ಬದುಕುತ್ತಿರುವ ಸಮಾಜದ ಒಳಿತಿಗಾಗಿ, ತನ್ನ ಏಳ್ಗೆಗಾಗಿ ಅನುಸರಿಸಬೇಕಾದ ಹಲವು ಹತ್ತಾರು ಆದರ್ಶತತ್ವಗಳನ್ನು ಸಾರುವ ಈ ಎರಡೂ ಸ್ನಾತಕೋಪದೇಶಗಳು ವಿಶಿಷ್ಟವಾಗಿರುತ್ತವೆ.

□ □

# ಮೂರು ಹಂತಗಳು

---

● ಮಂಜುಳಾ ಜೀರಗ್ಯಾಳ

ಹುಸಿ ಉಸುಕಿನಲಿ ಹುಸಿ ಮನೆಯ ಕಟ್ಟಿ
ಜೊತೆ ಗೊಂಬೆ ತಂದು ಹೊಸಮನೆಯಲ್ಲಿ
ಮದುವೆ ಮಾಡಿದ್ದೆ ವಿಚಿತ್ರ ಕಲ್ಪನೆಯಲ್ಲಿ.
ಕಂಡ ಕಂಡವರೆಲ್ಲ ಕೆನ್ನೆಗೆ ಮುತ್ತಿಕ್ಕಿದಾಗ
'ಅಮ್ಮಾ' ಎಂದು ಹೆದರಿ ಅಡಗಿದ್ದೆ ಸೆರಗಲ್ಲಿ.
ಪ್ರೀತಿಗೆ ಹೆಸರಿಲ್ಲ ಸಂತೋಷಕ್ಕೆ ಕೊನೆಯಿಲ್ಲ
ಜೀವನದ ಗೊಡವೆ ನನಗಿಲ್ಲವಾಗಿತ್ತು.

ಚಂಚಲತೆ ಕಣ್ಣಲ್ಲಿ, ಉದ್ವೇಗ ಮನದಲ್ಲಿ
ಮುಸುಕಿದ್ದ ಬಯಕೆಗಳು ಅರಳಿದಾಗ
ಮಿಡಿದಿತ್ತು ಹೃದಯವೀಣೆ ಪ್ರೇಮಾನುರಾಗ.
ಕನಸಲ್ಲಿ ಮುದಗೊಂಡು ಮನದಲ್ಲಿ ಮರುಕಳಿಸಿ
ಸವಿದಿತ್ತು ಸವಿನೆನಪನ್ನು ಸುಮಧುರವಾಗಿ
ಜತೆಯೊಂದು ದೊರೆತಾಗ ಧರೆಯಲ್ಲೆ ಇರುವಾಗ,
ಹಗುರಾಗಿ ಹಾರಿತ್ತು ಮನ ಹಕ್ಕಿಯಾಗಿ.
(ಕೆಲವೊಮ್ಮೆ) ಭವಿಷ್ಯವ ನೆನೆನೆನೆದು ಬಂಧನವ ಬಲಗೊಳಿಸಿ
ಅಳುತಿತ್ತು, ಮನ ಮರಭೂಮಿಯಲ್ಲಿ
ಆಶೆ ಆಕಾಶದತ್ತ ದೇಹ ಧರೆಯತ್ತ
ಹೃದಯವು ನಡುಗಿತ್ತು ಭೋರಿಡುವ ಬಿರುಗಾಳಿಯಲ್ಲಿ.

ಆಶೆ ಅಂತಿಮವಾಗಿ ಬದುಕು ಹೊನ್ನಾಗಿ
ಹರಡಿತ್ತು ಬೆಳದಿಂಗಳು ಬಾಳಬನದಲ್ಲಿ
ತೃಪ್ತಿಯ ಸಾಗರದಲ್ಲಿ ಶಾಂತತೆಯ ದೋಣಿಯಲ್ಲಿ
ದಡ ತಲುಪಿತ್ತು ಬಾಳು ಪರಿಪೂರ್ಣತೆಯಲ್ಲಿ.

□ □

# ಕ್ಷಮೆ

● ಷಣ್ಮುಖಸ್ವಾಮಿ ಸಾಲೀಮಠ

"ನೋಡು ಶ್ರೀ ನಾಳೆ ನನ್ನ ತಮ್ಮನ ಹುಟ್ಟುಹಬ್ಬ. ಅದ್ದರಿಂದ ನೀನು ನಮ್ಮ ಎಲ್ಲ Classmates ರನ್ನು ಕರೆದುಕೊಂಡು ನಾಳೆ ಸಂಜೆ ನಮ್ಮ ಮನೆಗೆ ಬರಬೇಕು. ನಿಜವಾಗಲೂ ತಪ್ಪದೇ ಬರಬೇಕು" ಎಂದು ಹೇಳಿದ ಸುಧಾಳ ಮಾತಿಗೆ ಶ್ರೀ "O...! ಹೀಗೋ hundred percent sure. ಎಲ್ಲರ ಜೊತೆಗೂಡಿ ಬಂದೇ ಬರ್ತೀನಿ" ಎಂದು ಆತ್ಮವಿಶ್ವಾಸದಿಂದ ಹೇಳಿದ. "ನನಗೆ ಮನೆಯಲ್ಲಿ ತುಂಬಾ ಕೆಲಸವಿದೆ. ನಾಳೆ ಮತ್ತೆ ಭೆಟ್ಟಿಯಾಗೋಣ" ಎಂದ ಸುಧಾ ತನ್ನ ಮನೆಯ ದಾರಿ ಹಿಡಿದಳು. ದಿನಾರೂಢಿಯಂತೆ ಶ್ರೀ ಕೂಡ ತನ್ನ ರೂಮಿನ ದಾರಿ ಹಿಡಿದ.

ಬಿಡುವಿಲ್ಲದೆ ಕ್ಲಾಸ್ ಹಾಗೂ ಪ್ರ್ಯಾಕ್ಟಿಕಲ್‌ಗಳನ್ನು ಅಟೆಂಡ್ ಮಾಡಿದ ಶ್ರೀ ನೇರವಾಗಿ ತನ್ನ ರೂಮಿಗೆ ಬಂದು ಟೇಬಲ್ ಮೇಲೆ ಪುಸ್ತಕ ಇಟ್ಟು ಗಾದೆಯ ಮೇಲೆ ಒರಗುತ್ತಿದ್ದಂತೆ ಆವನ ತಲೆಯಿಂದ ವಿಚಾರದ ಸುರಳಿಗಳು ಬಿಚ್ಚಿಕೊಳ್ಳತೊಡಗಿದವು..... "ಮೊದಲು ನಾನು ಇಲ್ಲಿಗೆ ಬಂದಾಗ ನನ್ನ ನಾನಾ ಉಡುಪು. ನಡೆ. ನುಡಿ ಎಲ್ಲ ನೋಡಿ ನನ್ನ Classmates ನನಗೆ ಗೇಲಿ ಮಾಡುತ್ತಿದ್ದರು. ಎಷ್ಟೋ ಸಲ ನಾನು ರೂಮಿಗೆ ಬಂದು ಅತ್ತದ್ದೂ ಉಂಟು. ಆದರೆ ಈಗ modern style hero ಆಗಿದ್ದೇನೆ. ಇದೆಲ್ಲ ಯಾರ ಪ್ರಭಾವದಿಂದ? ಯಾರ ಉಪದೇಶದಿಂದ? ಇದೆಲ್ಲಕ್ಕೂ ಯಾರು ಕಾರಣ?" ಎಂದು ತನ್ನಷ್ಟಕ್ಕೆ ತಾನೇ ಪ್ರಶ್ನಿಸಿಕೊಂಡು "ಅವಳೇ ಆ ಸುಧಾ" ಎಂದು ಪಟಪಟಿಸಿದ. ಆ ದಿನ ನಾನು city ಯಲ್ಲಿ ಹೋದಾಗ ಹಿಂದಿನಿಂದ ಸದ್ದು ಇಲ್ಲದೆ (ಮಾಡದೇ) ಬಂದ ಆ ರಿಕ್ಷಾ ನನಗೆ ಹಾದದ್ದು...! ನಾನು ಮೂರ್ಛೆ ಹೋಗಿ ಕೆಳಗೆ ಬಿದ್ದದ್ದು..., ತನ್ನ ತಂದೆಯ ಜೊತೆ ಸುಧಾ ವಿಹಾರಕ್ಕೆಂದು ಕಾರಿನಲ್ಲಿ cityಗೆ ಬಂದದ್ದು..., ಆಕಸ್ಮಾತ್ ನನ್ನನ್ನು ನೋಡಿ (ನನ್ನ ಮೇಲೆ ಮರುಕ ಹುಟ್ಟಿ ನನ್ನ ವಿವರ ತಮ್ಮ ತಂದೆಗೆ ಹೇಳಿ) ತಮ್ಮ ಕಾರಿನಲ್ಲಿ ತೆಗೆದುಕೊಂಡು... ತಮ್ಮ ಹಾಸ್ಪಿಟಲ್‌ನಲ್ಲೇ admit ಮಾಡಿ ಒಳ್ಳೆಯ treatment ಮಾಡಿದ್ದು...! ಇದೆಲ್ಲದರ ಜೊತೆಗೆ ನನ್ನನ್ನು ಅವಳು ಅರ್ಥ ಮಾಡಿಕೊಂಡದ್ದು ಅವಳನ್ನು ನಾನು ಅರ್ಥ ಮಾಡಿಕೊಂಡದ್ದು...! ಇದೆಲ್ಲ

ಇಂದಿನ ಅವಳ ಹಾಗೂ ನನ್ನ ಪ್ರೀತಿ, ವಿಶ್ವಾಸ ಮತ್ತು ಪ್ರೇಮಕ್ಕೆ ಅಡಿಪಾಯ. ನನ್ನ
ಹಾಗೂ ಅವಳ ಪ್ರೇಮ ಶಿಲ್ಪಿಗೆ ಕಲ್ಪಿಸಲಾಗದಂಥ ಮೂರ್ತಿ ಇದ್ದಹಾಗೆ...! ಹೌದು
ನಾಳೆ ಅವಳ ತಮ್ಮನ ಹುಟ್ಟುಹಬ್ಬಕ್ಕೆ ನಾನು ಹೋಗಲೇಬೇಕು. ನನ್ನವರೆಂಬುವವರು
ಯಾರೂ ಇಲ್ಲದ ಈ ಸ್ಥಳದಲ್ಲಿ ನನಗೆ ಅವಳು ಮಾಡಿದ ಉಪಕಾರವನ್ನು ಈ ಜನ್ಮದಲ್ಲಿ
ತೀರಿಸಲು ಸಾಧ್ಯವಿಲ್ಲ. ಸುಧಾಳ ತಂದೆ ತಾಯಿ ಇಬ್ಬರೂ ವೃತ್ತಿಯಲ್ಲಿ ಡಾಕ್ಟರ್
ರಾದರೂ ನಡೆನುಡಿಗಳಲ್ಲಿ ಎಂಥ ಸೌಜನ್ಯರು ಎಂಥ ಮೃದುಹೃದಯದವರು...!
ಅದಕ್ಕೆ ಹಿರಿಯರು ಮಾಡಿದ "ತುಂಬಿದ ಕೊಡ ತುಳುಕುವುದಿಲ್ಲ" ಎಂಬ ನಾಣ್ಣುಡಿ
ಯನ್ನು ಎನ್ನುತ್ತಿದ್ದಂತೆ ರಾತ್ರಿಯ ಊಟದ ಪರಿವೇ ಇಲ್ಲದೆ ಶ್ರೀ ಒರಗಿದಲ್ಲೇ ನಿದ್ದೆ
ಹೋಗಿದ್ದ.

ಅದೇನೂ ಪಟ್ಟಣವೂ ಅಲ್ಲ. ಅದೊಂದು ಹಳ್ಳಿಯೂ ಅಲ್ಲ. ಅಂಥ ಊರಿಂದ
ಬಂದ ಶ್ರೀ ತುಂಬಾ ಸರಳ ಹಾಗೂ ಮೃದುಸ್ವಭಾವದ ಹುಡುಗನಾಗಿದ್ದ. ಪ್ರಾಣಿಶಾಸ್ತ್ರ
ವನ್ನು ತನ್ನ ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡ ಶ್ರೀ ತನ್ನ ಹೆಚ್ಚಿನ ವಿದ್ಯಾಭ್ಯಾಸ
ವನ್ನು ಮುಂದುವರೆಸಿದ್ದ. ತಾನು ಮತ್ತು ತನ್ನ ಅಭ್ಯಾಸ. ಯಾರ ಗೋಜಿಗೂ ಹೋಗದೆ
ಯಾರಾದರೂ ಏನಾದರೂ ಗೇಲಿ ಮಾಡಿದರೂ ಸುಮ್ಮನೆ ಇರುತ್ತಿದ್ದ. ಅಂತೆಯೇ
ಅವನೊಬ್ಬ ಅತ್ಯುತ್ತಮ ವಿದ್ಯಾರ್ಥಿ ಎನಿಸಿಕೊಳ್ಳುತ್ತಿದ್ದ.

ಶ್ರೀನ ತಂದೆ ಅಷ್ಟೊಂದು ವಿದ್ಯಾಭ್ಯಾಸ ಮಾಡದಿದ್ದರೂ ಊರಿನ ಪ್ರಮುಖರಲ್ಲಿ
ಒಬ್ಬರಾಗಿದ್ದರು. ಮೊದಲಿದ್ದ ಎರಡೆತ್ತಿನ ಒಕ್ಕಲುತನ ಈಗ ಆರೆತ್ತಿನ ಒಕ್ಕಲುತನ
ವಾದದ್ದು ಅವರ ಜಾಣ್ಮೆಯನ್ನು ಸಾರಿ ಹೇಳುತ್ತಿತ್ತು. ಶ್ರೀನ ತಾಯಿಯಂತೂ ತುಂಬಾ
ಮೃದುಸ್ವಭಾವದವಳು. ಹೊಸ್ತಿಲು ದಾಟಿ ಹೊರಗೆ ಹೋಗದವಳು.

ಮಾರುದಿನ ಬೆಳಿಗ್ಗೆ ಶ್ರೀ ಮೇಲೇಳಲು ಪ್ರಯತ್ನಿಸಿದ. ತನ್ನ ಮೈಯನ್ನು ತಾನೇ
ಮುಟ್ಟಿಕೊಂಡು ನೋಡಿದ. ಮೈ ಅತಿಯಾಗಿ ಸುಡುತ್ತಿತ್ತು. ವಿಪರೀತ ಚಳಿಜ್ವರದಿಂದ
ನಡಗುತ್ತಿದ್ದ...!

ಪ್ರಯತ್ನಪಟ್ಟು ಎದ್ದು ತನ್ನ ರೂಮಿನ ಸಮೀಪವೇ ಇದ್ದ ದವಾಖಾನೆಗೆ
ಹೋದ ಅವನ ಮೈ ಉಷ್ಣತಾಮಾನ ೧೦೩ ಡಿಗ್ರಿಗೂ ಹೆಚ್ಚು ಚಲಿಸುತ್ತಿತ್ತು. ಶ್ರೀಗೆ
ಡಾಕ್ಟರು ಹಾಸಿಗೆ ಬಿಟ್ಟು ಏಳದಹಾಗೆ ೩ ದಿನಗಳ ವಿಶ್ರಾಂತಿ ಹೇಳಿಬಿಟ್ಟರು ಶ್ರೀ
ಮನದಲ್ಲೇ ನೊಂದ. "ಸುಧಾಳ ತಮ್ಮನ ಹುಟ್ಟುಹಬ್ಬಕ್ಕೆ ಹೋಗುವ ಭಾಗ್ಯ ನನಗಿಲ್ಲ"
ಎಂದು ಮರುಗಿದ.

ದಿನದಿನಕ್ಕೂ ಬೆಳೆಯುತ್ತಿರುವ ಶ್ರೀ ಹಾಗೂ ಸುಧಾರ ಪ್ರೀತಿ, ವಿಶ್ವಾಸ, ಪ್ರೇಮ
ವನ್ನು ಕಂಡು ಹೊಟ್ಟೆಕಿಚ್ಚಿನಿಂದ, ಶ್ರೀಯು ಸುಧಾಳ ಮನೆಗೆ ಬಾರದ್ದು ಇದೇ ಸುಸಮಯ
ವೆಂದು ಭಾವಿಸಿ ಅವರದೇ ಕ್ಲಾಸಿನ ಹುಡುಗನಾದ ಪ್ರಕಾಶ ಅವನ ಮೇಲೆ ಕಟ್ಟು
ಕಥೆಯೊಂದನ್ನು ಕಟ್ಟಿ ಸುಧಾಳಿಗೆ "ನೋಡಿ ಮಿಸ್. ನೀವು ತಿಳಿದ ಹಾಗೆ ಒಳ್ಳೆಯ ವಿಶ್ವಾಸಿಕ

ನಾಗಿದ್ದರೆ ನಿಮ್ಮ ಮಾತಿಗೆ ಬೆಲೆ ಕೊಡತಿರಲಿಲ್ಲಾ...! ಅಷ್ಟೇ ಅಲ್ಲದೆ ಆ ನಮ್ಮ junior ಹುಡುಗಿ 'ಸಂಗೀತಾ'ಳ ಜೊತೆ ಪ್ರೇಮ ಅವನದು. ನಿನ್ನೆ ಅವಳ ಜೊತೆ ಸಲೀಸಾಗಿ ಪೇಟೆಯಲ್ಲಿ ಅಡ್ಡಾಡುತ್ತಿದ್ದ. ನಾವು ನಿಮ್ಮ ಮನೆಗೆ ಬರುವಾಗ ಆಕಸ್ಮಾತ್ ಅವರು ನಮ್ಮ ಕಣ್ಣಿಗೆ ಬಿದ್ದಾಗ, ನಮ್ಮನ್ನು ನೋಡಿಯೂ ನೋಡದವರ ಹಾಗೆ ನಟಿಸಿ ಹೊಟೇಲೊಂದರಲ್ಲಿ ಹೊಕ್ಕರು" ಮುಂತಾಗಿ ವಿವರಿಸಿದ.

ಇದನ್ನು ಕೇಳಿದ ಸುಧಾ "ಬೆಂಕಿಯ ಕಿಡಿಯೊಂದರ ಜೊತೆಗೆ ನಾನು ಆಟವಾಡುತ್ತಿದ್ದೇನೆ" ಎಂದು ಭಾವಿಸಿ ತನ್ನ ಗೆಳತಿಯಾದ ಉಷಾಳ ಹತ್ತಿರ ಹೇಳಿದಾಗ ಅದಕ್ಕೆ ಉಷಾ "ಇಲ್ಲ ಕಣೇ ಶ್ರೀ ಒಬ್ಬ ಒಳ್ಳೆಯ ವಿಶ್ವಾಸಿಕ. ಅವನು ನನ್ನ ಒಡಹುಟ್ಟಿದ ಸಹೋದರ ಇದ್ದ ಹಾಗೆ. ನನಗೆ ನಿನ್ನಲ್ಲಿ ಇದ್ದಷ್ಟೇ ನಂಬಿಕೆ ಅವನಲ್ಲಿಯೂ ಇದೆ. 'ಪ್ರತ್ಯಕ್ಷ ಕಂಡು ಪ್ರಮಾಣಿಸಿ ನೋಡು'. ಯಾರ ಮಾತನ್ನೂ ಕೇಳಿ ದುಡುಕಬೇಡ" ಎಂದು ಹೇಳಿದಾಗ ಸುಧಾ ಅವಳ ಸಲಹೆಯನ್ನು ಲೆಕ್ಕಿಸಲಿಲ್ಲ.

ನಾಲ್ಕು ದಿನಗಳಾದ ಮೇಲೆ ಶ್ರೀ ಕಾಲೇಜಿಗೆ ಹೋಗಲು ಸುಧಾ ಇವನನ್ನು ದುರುಗುಟ್ಟಿ ನೋಡಿದಳು. ಶ್ರೀ ಎಂದಿನಂತೆ ಮುಗುಳು ನಕ್ಕು ಮಾತನಾಡಲು ಹೋದ. ಆದರೆ ಸುಧಾ ಅವನ ಕೈಯಲ್ಲಿ ಕಾಗದ ಇಟ್ಟು ಮಾತಿಗೆ ಯಾವ ಅವಕಾಶವನ್ನೂ ಕೊಡದೆ ಬಿರಬಿರನೇ ಹೊರಟು ಹೋದಳು. ಶ್ರೀಗೆ ಮೋಡವೇ ಕಳಚಿ ಅವನ ಮೇಲೆ ಬೀಳುತ್ತಿರುವಂತೆ ಭಾಸವಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಶ್ರೀ ಓದಲು ರೂಮು ಸೇರಿದ. "ಸುಧಾ ಇಂದು ನನ್ನ ಮೇಲೆ ಅಷ್ಟೊಂದು ಸಿಟ್ಟಾಗಲು ಕಾರಣ ವೇನಿರಬಹುದು? ಕಾಗದದಲ್ಲಿ ಏನು ಬರೆದಿರಬಹುದು?" ಎಂದು ಕುತೂಹಲದಿಂದ ಕಾಗದ ಒಡೆದ. ಅದರಲ್ಲಿಯ ಮುತ್ತಿನಂಥ ಅಕ್ಷರಗಳು ಅವನನ್ನು ಅಣಕಿಸಿ ಕೊಲ್ಲುವಂತೆ ಇರಿಯುತ್ತಿದ್ದವು.

"ಶ್ರೀ–

ನಾನು ತಿಳಿದ ಹಾಗೆ ನೀನು ವಿಶ್ವಾಸಿಕನಲ್ಲ. ನೀನೊಬ್ಬ ಮಹಾ ಅಪರಾಧಿ. ಈ ವಿಷಯದಲ್ಲಿ ನಾನು ನಿನಗೆ ಸೋತಿದ್ದೇನೆ. 'ಬೆಳ್ಳಗಿದ್ದದ್ದು ಹಾಲೆಂ'ದು ನಂಬಿ ಮಜ್ಜಿಗೆ ಕುಡಿದ ಬೆಕ್ಕಿನ ಪರಿಸ್ಥಿತಿ ನನ್ನದಾಗಿದೆ. ನನ್ನ ತಮ್ಮನ ಹುಟ್ಟುಹಬ್ಬಕ್ಕೆ ಬರಲಿಲ್ಲ ಅದಕ್ಕೇ ಇದೆಲ್ಲ ಎಂದು ತಿಳಿಯಬೇಡ. ಅದೊಂದು ಸಣ್ಣ ವಿಷಯ. ಬೇರೆ ವಿಷಯ ನಿನಗೆ ಗೊತ್ತೇ ಇದೆ. ಅದನ್ನು ಮತ್ತೇ ನಿನಗೆ ಜ್ಞಾಪಿಸಿ ಕೊಡುವ ಮನಸ್ಸು ನನಗಿಲ್ಲ. ಸಾಧ್ಯವಾದಷ್ಟು ನಿನ್ನ ಪ್ರೇಮ ಪ್ರೀತಿಗಳೆಲ್ಲ ಆ ಸಂಗೀತಾಳೊಡನೆ ಬೆಳೆಯಲಿ. ನನ್ನನ್ನು ಇನ್ನು ಮೇಲೆ ಮರೆತು ಬಿಡು. ಮರೆತು ದೂರವಾಗಿ ಬಿಡು."

ಸುಧಾ

ಸುಧಾಳ ಪತ್ರವನ್ನು ಓದಿ "ಇದೇನು ಯಾವ ಬೇರೆ ವಿಷಯ ? ಯಾವ ಸಂಗೀತಾ ? ಯಾರ ಪ್ರೇಮ-ಪ್ರೀತಿ? ಎಂದು ಗೊಣಗುತ್ತಿದ್ದಂತೆ ಶ್ರೀ ತಲೆ ಗಿರ್ರೆಂದಿತು. ತನ್ನ ಕಣ್ಣುಗಳನ್ನು ತಾನೇ ನಂಬದಾದ. ಅವನ ತಲೆ ವಿಚಾರ ಲೋಕದಲ್ಲಿ ಹೊರಳಾಡ ಹತ್ತಿತು. ಶ್ರೀ ರಾತ್ರಿ ನಿದ್ರಿಸಲು ಪ್ರಯತ್ನಿಸಿದ. ನಿದ್ರೆಯ ಸುಳಿವೇ ಅವನಿಗೆ ಕಾಣಲಿಲ್ಲ. "ಸುಧಾ ನನ್ನನ್ನು ಮರೆತುಬಿಡಬಹುದು. ಆದರೆ ನನ್ನಿಂದ ಸಾಧ್ಯವಿಲ್ಲ. ಸಾಧ್ಯವಾಗದಿದ್ದರೂ ಅವಳ ಸುಖ ಸಂತೋಷಕ್ಕೋಸ್ಕರ ನಾನು ಅವಳನ್ನು ಮರೆಯಲೇಬೇಕು" ಎಂದು ನಿರ್ಧಾರ ಮಾಡಿಕೊಂಡ.

ಬರಬರುತ್ತ ಶ್ರೀಯು ವಜ್ರಾಕಾರದ ಮೆಟ್ಟಿಲು ಇಳಿಯುತ್ತ ಹೋದನು. ಒಂದು ದಿನ ಎಂದೂ ಸಿಗರೇಟು ಸೇದದಿದ್ದ ಶ್ರೀ ನ ಕೈಯಲ್ಲಿ ಅಂದು ಉರಿಯುತ್ತಿದ್ದ ಸಿಗರೇಟು. ಅದನ್ನು ತನಗಿಂತಲೂ ಸೂಕ್ಷ್ಮವೆಂದು ಭಾವಿಸಿ ಹೊಗೆಯನ್ನು ಒಳಗೆ ಸೇವಿಸಿ ಸುರುಳಿ ಆಕಾರದಲ್ಲಿ ಅದನ್ನು ಹೊರಗೆ ಬಿಡುತ್ತ ಕೆಳಮುಖ ಮಾಡಿಕೊಂಡು ಅವನು ಬರುತ್ತಿದ್ದುದನ್ನು ಕಂಡು ಸುಧಾ ದಿಗ್ಭ್ರಾಂತಳಾದಳು.

ಸುಧಾಳ ದೃಷ್ಟಿಯಲ್ಲಿ ಶ್ರೀ ಒಬ್ಬ ನಿರಪರಾಧಿ. ಅವನೊಬ್ಬ ಏನೂ ಅರಿಯದ ಮುಗ್ಧ ಎನ್ನುವಂತೆ ಕಾಲಕ್ರಮೇಣ ಉಷಾ ಎಲ್ಲ ಮೂಲಗಳಿಂದ ಸಾಬೀತು ಮಾಡಿ ಕೊಟ್ಟಿದ್ದಳು. ನಿಜಸಂಗತಿ ಹೊರಬಿದ್ದಾಗ ಪ್ರಕಾಶ ತನ್ನ ಕಾಲೇಜ ಜೀವನಕ್ಕೆ ನಾಂದಿ ಹಾಡಿ ಶಹರದತ್ತ ಪ್ರಯಾಣ ಬೆಳೆಸಿದ್ದ. ಆದರೆ ಶ್ರೀ ಮಾತ್ರ ಸುಧಾಳನ್ನು ಮರೆಯುವ ಯತ್ನದಲ್ಲಿ ತನ್ನ ಅವತಾರವನ್ನೇ ಬದಲಾಯಿಸಿಕೊಂಡಿದ್ದ.

ಒಂದು ದಿನ ಕ್ಲಾಸ್ ಶುರುವಾದರೂ ಒಳಬರದೇ ಗಿಡದ ಮರೆಯಲ್ಲಿ ನಿಂತು ಸಿಗರೇಟು ಸೇದುತ್ತಿದ್ದ ಶ್ರೀಯನ್ನು ಸುಧಾ ಒಬ್ಬಳೇ ನೋಡಿದ್ದಳು. ಅವನು ಅದನ್ನು ಮುಗಿಸಿ ಯಾವಾಗ ಒಳಬಂದಿದ್ದನೋ ಅವಳರಿಯಳು. ಮೊದಲನೆಯ Zoology Period ಮುಗಿದಾಯಿತು. ಸುಧಾ ಅವನತ್ತ ತಿರುಗಿ ನೋಡಿದಾಗ ಅವನ ಬಾಡಿದ ಮುಖ ಕೆಳಗಾಗಿತ್ತು. ಮುಂದಿನ Chemistry Period ಅರ್ಧ ತೆಗೆದುಕೊಂಡಾಗಿರಬಹುದು. ಹಿಂದೆ ಏನೋ ದೊಪ್ಪನೆ ಬಿದ್ದ ಸಪ್ಪಳವಾದ್ದರಿಂದ ಎಲ್ಲರೂ ಆ ಕಡೆ ನೋಡಿದಾಗ "ಹೌದು. ಶ್ರೀ !" ಅವನೇ ಕೆಳಗೆ ಬಿದ್ದಿದ್ದನು. ಅವನ ಪಕ್ಕದಲ್ಲಿದ್ದ ರವಿ ಏನೂ ತಿಳಿಯದ ಹಾಗಾಗಿ ಹೊರಗೋಡಿ ಹೋಗಿ Taxi ತರುವಷ್ಟರಲ್ಲಿ ಶ್ರೀಯ ಸುತ್ತಲೂ ಅವನ ಗೆಳೆಯರಲ್ಲದೆ Professor ಕೂಡ ಸೇರಿದ್ದರು. ಎಲ್ಲರೂ ಅವನ ಬಗ್ಗೆ ಕನಿಕರ ತೋರುವವರೇ. ಸುಧಾಳಿಗೂ ಕೆಡುಕೆನಿಸಿತು. "ಇದೆಲ್ಲಕೂ ಎಲ್ಲಿ ನಾನೇ ಕಾರಣಳಾದೆನೋ" ಎಂಬ ಪ್ರಶ್ನೆ ಅವಳಲ್ಲಿ ಮೂಡಿ ಮಾಯವಾಯಿತು. ಕ್ಲಾಸ್‌ಗಳು ಅಲ್ಲಿಗೇ Cancell ಆಗಿ ಶ್ರೀಯನ್ನು ಪರೀಕ್ಷೆಗೆಂದು Taxi ಯಲ್ಲಿ ಹಾಸ್ಪಿಟಲ್ ಕಡೆ ಒಯ್ದಾಗ ಎಲ್ಲರೂ ಅದನ್ನು ಹಿಂಬಾಲಿಸಿದ್ದರು. ಅಲ್ಲಿಯೇ ಹೊರಟ ರವಿಯನ್ನು ಕಂಡ ಸುಧಾ Excuse me Mr Ravi, if you dont mind, Please

Dr. report ನನಗೂ ಬಂದು ಹೇಳಬೇಕು." ಎಂದಾಗ "O Surely" ಎಂದು ಮುಂದೆ ಸಾಗಿದ.

ಶ್ರೀ ಯು ಸಲುವಾಗಿಯೇ ಅಂದು ಕಾಲೇಜಿಗೆ ಬಿಡುವಾಯ್ತು. ಸುಧಾ ಉಷಾಳ ರೂಮಿಗೆ ಬರುತ್ತಿದ್ದಂತೆ ಉಷಾ ಈಗಾಗಲೇ ರೂಮಿಗೆ ಬಂದು ಏನೋ ಕಾಗದ ಓದುತ್ತಿದ್ದಳು. "ಯಾರ ಕಾಗದಾನೇ ಉಷಾ ?" ಎಂದು ಸುಧಾ ಕೇಳಿದಾಕ್ಷಣ, ಹನಿದುಂಬಿದ ಕಣ್ಣುಗಳಿಂದ ಶ್ರೀನದು. ಈ ದಿನ ಮುಂಜಾನೆಯೇ ಕೊಟ್ಟಿದ್ದ. ಓದಲು ಸಮಯವೇ ಸಿಕ್ಕಿರಲಿಲ್ಲ. ನಿನಗೂ ಒಂದು ಕಾಗದ ಕೊಟ್ಟಿರುವನು. ಇಗೋ ಇಲ್ಲಿ" ಎಂದು ಕೊಡುತ್ತಿದ್ದಂತೆ ಅವಳ ಕಣ್ಣುಗಳೂ ಹನಿದುಂಬಿ ಉದುರಿದವು. ಕಾಗದ ಬಿಡಿಸಿದಾಗ ಶ್ರೀನ ಹವಳದಂಥ ಅಕ್ಷರಗಳು.

"ಸದಾ ನನ್ನೊಲವಿನ ಸುಧಾ,

ನೀನು ನನ್ನನ್ನು ಯಾವ ಕಾರಣದಿಂದ ತಪ್ಪು ತಿಳಿದುಕೊಂಡೆಯೋ ತಿಳಿಯಲಿಲ್ಲ. ನಿನ್ನ ಕಾಗದವನ್ನು ಓದಿದಾಗ ಮನಸ್ಸಿಗೆ ಸಿಡಿಲೇ ಬಡಿದಂತಾಯ್ತು. ಆದರೂ ಸಹಿಸಿಕೊಂಡು (ನಾನು ನಿನ್ನನ್ನು ಮರೆತು ದೂರಾಗುವದರಲ್ಲಿ ನಿನಗೆ ಸುಖ ಸಂತೋಷವಿದೆಯೆಂದು ನಂಬಿ) ನಿನ್ನ ಹೇಳಿಕೆಯ ಪ್ರಕಾರ ನಿನ್ನನ್ನು ಮರೆಯಲು ಪ್ರಯತ್ನಿಸಿದೆ. ಮೊದಮೊದಲು ಸಾಧ್ಯವಾಗದಿದ್ದರೂ ಈ ನನ್ನ ಗೆಳೆಯರಾದ (Mr... Wills flake, xxxRum) ಅದನ್ನು ಸ್ವಲ್ಪವಾದರೂ ಸಾಧ್ಯ ಮಾಡಿಕೊಟ್ಟರು. ಈಗೀಗ ಇವರೇ ನನ್ನ ಸಂಗಾತಿಗಳು. ಇವರು ಯಾವಾಗ ನನಗೆ ಒಳ್ಳೆಯದು ಅಥವಾ ಕೆಟ್ಟದ್ದು ಮಾಡುವರೋ ಕಾಯ್ದು ನೋಡಬೇಕಾಗಿದೆ.

ನೀ ನನ್ನನ್ನು ಮರೆತು ದೂರವಾದರೂ, ನಿನ್ನನ್ನು ಮರೆಯದೇ ದೂರಾಗಿ ನರಳುತ್ತಿರುವ

—ನಿನ್ನ
ಶ್ರೀ

ಕಾಗದ ಮುಗಿಯುತ್ತಿದ್ದಂತೆ ಸುಧಾ ಬಿಕ್ಕ ಬಿಕ್ಕ ಅಳಲಾರಂಭಿಸಿದಳು. ಇವನ್ನು ಕಂಡು ಉಷಾಳಿಗೂ ದುಃಖ ಒತ್ತರಿಸಿ ಬಂತು. ಆದರೂ ಅವಳಿಗೆ ಧೈರ್ಯ ಹೇಳಿ ಇಬ್ಬರೂ ಕೂಡಿ ಹಾಸ್ಪಿಟಲ್ ಕಡೆಗೆ ನಡೆದಾಗ ಸುಧಾಳಿಗೆ ತಾನು ಮಾಡಿದ ತಪ್ಪಿನ ಅರಿವಾಗಿ "ಶ್ರೀ ನ ಆರೋಗ್ಯಕ್ಕೆ ಹೆಚ್ಚಿನ ತೊಂದರೆಯಾಗದಿರಲೆಂದು" ದೇವರಲ್ಲಿ ಪ್ರಾರ್ಥಿಸಿದಳು.

ಮುಂದೆ ಹಾಸ್ಪಿಟಲ್ ಸಮೀಪಿಸುತ್ತಿದ್ದಂತೆ ರವಿ ಇವರಿಗೆ ಎದುರಾದ. ಅವನ ಬಾಡಿದ ಮುಖ ನೋಡಿ ಇವರಿಬ್ಬರ ಕಾಲುಗಳು ಮುಂದೆ ಹೋಗದೆ ನಿಂತಲ್ಲೇ ನಿಂತರು. ಅವನೇ ಇನ್ನೂ ಸಮೀಪ ಬಂದು ಸುಧಾಳ ಕಡೆ ಮುಖ ತಿರುವಿ "Sorry Miss. Shri is no more. ಅವನು ಕಳೆದ ತಿಂಗಳಿಂದ ಮಾನಸಿಕವಾಗಿ ಕೊರಗಿ 'Blood Cancer' ದಿಂದ ತೀರಿಹೋದನು ಎಂದು Doctor report ಹೇಳ್ತಿದೆ.

ಅವನ Parents ಈಗಾಗಲೇ ಅವನ ಪಾರ್ಥಿವ ಶರೀರವನ್ನು ತಮ್ಮೂರಿಗೆ ಒಯ್ದ್ದರು" ಎನ್ನುವಷ್ಟರಲ್ಲಿ, "ಇದೆಲ್ಲಕ್ಕೂ ನಾನೇ ಕಾರಣಳಾದೆ" ಎಂದು ತುಟಿಗಳನ್ನು ಪಟಪಟಿಸುತ್ತಿದ್ದ ಸುಧಾ ಕುಸಿದು ಬಿದ್ದಾಗ ನಲ್ಲನ ಕಾಲು ಹಿಡಿದು ನಲ್ಲೆಯ ಜೀವ ಕ್ಷಮೆಯಾಚಿಸುತ್ತಿತ್ತು......!

□ □

# ವೃತ್ತ-ವಿಷವೃತ್ತ

---

● **ಜಗದೀಶ ದುದ್ದಿ**

ಇವ ಹುಟ್ಟಿದನೇಕೋ ?
ಹುಟ್ಟಿಸಿದವರು ಹಣೆ
ಬರಹ ಬರೆಯಬೇಕೋ ?
ಹಾಗೆಂದರೆ
ಹಣೆಬರಹವೆಂಬುದಿದೆಯೇ ?
ಎಂದು ಕೇಳುವ ಮನದವನಿವನು.
ಬೆಳೆದುದು ಎಲ್ಲರಂತೆ
ಮೈದಳೆದುದು ಮಾತ್ರ ತನ್ನಂತೆ
ವಿಸರ್ಜನೆ ಮಾರ್ಜನೆ ಊಟ
ಮೈಥುನ ನಿದ್ರೆ..... ಪ್ರಾರಂಭ ವೃತ್ತ
ಬದಲೇ ಇಲ್ಲವೆಂಬ ಬೇಸರಿಕೆಯಿಂದ ಅತ್ತ.
ಬಯಸಿದಾಕ್ಷಣ ಬದಲಾಗುವ ಗಾರುಡಿಗ ಅಂತಸ್ಸ್ವನವನೆ ?
ನಡೆದಂತೆ ನಡೆಯಲೆಂದು ಸುಮ್ಮನಿರುವ ಅಸಹಾಯಕನೆ ?
ಎರಡೂ ಅಲ್ಲ. ಹಾಗಾದರೇನು ?
ಅದಕ್ಕೇರದ ಇದಕ್ಕಿಳಿಯದ ನಡುವಿನವನು.
ಇವನಾಸೆಗೆ ತುಂಬಲಿಕೆ ಓಗೊಡದ ಕಣ್ತೆರೆಯದ
ಪರಿಸ್ಥಿತಿ. ಸುತ್ತುಮುತ್ತಲು ಡೊಂಕು
ತನ್ನಲ್ಲೇ ತಳಮಳಿಸುವನೀ ತ್ರಿಶಂಕು ?
ಈಗಲೇ ಕೈ ಮೈ ಚಾಚಿ ಕರೆಯುವ ವಿಷವೃತ್ತ.
ಸಿಕ್ಕು ಸಣ್ಣಾಗಿ ಸುಣ್ಣವಾಗುತ್ತಿದ್ದರೂ
ಮೆಚ್ಚಬೇಕಿವನ
ಆಸೆಯ ಅಂಚು ಹಿಡಿದು
ಹೊರಬರುವ ಯತ್ನ
ಭಗೀರಥ ಪ್ರಯತ್ನ.

□ □

# ಮಸ್ತಕಾಭಿಷೇಕ

---

● ಅರವಿಂದ ಮಾಲಗತ್ತಿ

(ರಂಗಮಂಟಪದ ಮೇಲೆ ಒಂದು ದೊಡ್ಡ ಬೆಟ್ಟ (ಟೇಬಲ್ ಮತ್ತು ಅದರ ಮೇಲೆ ಒಂದು ಕುರ್ಚಿ). ಆ ಬೆಟ್ಟದ ಮೇಲೆ ಗೊಮ್ಮಟ ನಿಂತಿರುತ್ತಾನೆ (ಕರಿ ಅರಿವೆ ತೊಟ್ಟಿರುವ ಮಾಟಕ್ಕೆ ತಕ್ಕ ಬಗ್ಗ) ಶ್ರವಣಬೆಳಗೊಳದ ಗೊಮ್ಮಟ ನಿಂತ ರೀತಿ ಯಲ್ಲಿ ನಿಲ್ಲಬೇಕು. ಅವನ ಕೆಳಭಾಗದಲ್ಲಿ ಮೂರು ಜನ ನಿಂತಿರಬೇಕು. ಪರದೆ ಜರಿದ ನಂತರ ಕೆಳಗೆ ನಿಂತ ಮೂರು ಜನ ಮಸ್ತಕಾಭಿಷೇಕ, ಮಸ್ತಕಾಭಿಷೇಕ, ಮಸ್ತಕಾಭಿಷೇಕ ಎಂದು ಕೂಗುತ್ತ ಒಂದೊಂದೇ ಹೆಜ್ಜೆ ಮುಂದೆ ಹಾಕುತ್ತ ಬಂದು)

ಯ : ಮಸ್ತಕಾಭಿಷೇಕ ! ಹಂಗಂದ್ರೇನು ?

ರ : ಮಸ್ತಕಾಭಿಷೇಕ ಅಂದ್ರ 'ತಲೆ ತೊಂಯ್ಕೋತನಕ ಹೊಯ್ಕೋದು.'

ಯ : ಹೊಯ್ಕೋದು, ಏನು ಹೊಯ್ಕೋದು ?

ರ : ನೀರು, ಹಾಲು, ತುಪ್ಪ, ಮೊಸರು, ಬೆಣ್ಣಿ...

ಲ : ಯಾಕ ಹೊಯ್ಯಬೇಕು ?

ಯ : ನಿದ್ದಿಗಣ್ಣಾಗ ನಿಂತು ತೂಕಡಸತಿರತಾರ...

ರ : ಹಾಂ, ಎಚ್ಚರ ಮಾಡಾಕಾ ಹಾಕೋದಾ ?

ಯ : ಹೂಂ ಎಚ್ಚರ ಮಾಡುದಕ್ಕ.
ಮಸ್ತಕಾಭಿಷೇಕ ! ಮಸ್ತಕಾಭಿಷೇಕ !! ಮಸ್ತಕಾಭಿಷೇಕ !!!
(ಎಂದು ಕೂಗುತ್ತ ಮೂರು ದಿಕ್ಕಿನಿಂದ ಮೂರು ಜನ ಹೋಗುವರು)
('ಶ'ನ ಪ್ರವೇಶ)

ಶ : ಛೀ... ಛೀ... ಈ ರೀತಿ ಅಪದ್ಧ ಮಾತಾಡುದಾ, ಈ ಕಿವಿಯಿಂದ ಕೇಳಬಾರದಪೋ ಕೇಳಬಾರದು.
(ಎಂದು ಕಿವಿಯನ್ನು ಮುಚ್ಚಿಕೊಂಡು ರಂಗಮಂಟಪದ ಎಡಭಾಗದ ಅಂಚಿನಲ್ಲಿ ಹೋಗಿ ನಿಲ್ಲುವನು).
('ಸ' ನ ಪ್ರವೇಶ)

ಸ : ಅಯ್ಯಯ್ಯೋ ಬಾಯಿ ಐತಿ ಅಂತ ಹ್ಯಾಂಗರ ಮಾತಾಡತಾರ, ಹಿಂಗ ಮಾತಾಡವರ ಮೋತಿಸತಕೆ ನೋಡಬಾರದಪ್ಪೋ ನೋಡಬಾರದು.

(ಎಂದು ಹೇಳಿ ತನ್ನ ಎರಡೂ ಕೈಯಿಂದ ಬಾಯಿ ಮುಚ್ಚಿಕೊಂಡು 'ಶ' ನ ಬಳಿಯಲ್ಲಿ ಹೋಗಿ ನಿಲ್ಲುವನು)
('ಷ' ನ ಪ್ರವೇಶ)

ಷ : ಊಂ, ಹುಂ, ನಮ್ಮ ಜನ, ನಮ್ಮ ಜನಾ ಅಂದಂಗೆಲ್ಲಾ ಎಂಥೆಂಥಾದ್ದು ಕೇಳುದು ಬಂತು, ಎಂಥೆಂಥಾದ್ದು ನೋಡುದು ಬಂತು. ನಾ ಈ ಕಣ್ಣಿಂದ ನೋಡಬಾರದಪ್ಪೋ... ನೋಡಬಾರದು.
(ಎಂದು ಹೇಳುತ್ತ ತನ್ನ ಎರಡೂ ಕೈಗಳಿಂದ ಕಣ್ಣನ್ನು ಮುಚ್ಚಿಕೊಳ್ಳುತ್ತ 'ಸ' ಮತ್ತು 'ಶ'ರ ಪಕ್ಕದಲ್ಲಿ ನಿಲ್ಲುತ್ತಾನೆ. ಈ ಮೂವರು ಒಂದೇ ರೀತಿ ಅರಿವೆ ಧರಿಸಬೇಕು )
(ಪರದೆಯ ಹಿಂದಿನಿಂದ ಚಿತ್ರರಂಗದ ವಾರ್ತೆಯಂತೆ ಸಾವಕಾಶವಾಗಿ ಓದಬೇಕು.)

ಧ್ವನಿ : ಕರ್ನಾಟಕದ ಶ್ರವಣಬೆಳಗೊಳದಲ್ಲಿ ಭವ್ಯಮೂರುತಿಯಾಗಿ ನಿಂತಿರುವ ಬಾಹುಬಲಿ ಒಂದು ಉಸಿರು. ಆದಿದೇವನ ನೂರಾರು ಮಕ್ಕಳಲ್ಲಿ ಇವನೂ ಒಬ್ಬ. ಅಧಿಕಾರದ ಲಾಲಸೆಗಾಗಿ ಸಹೋದರನೊಡನೆ ಬಡಿದಾಡಿ ದೃಷ್ಟಿ, ಜಲ, ಮಲ್ಲಯುದ್ಧದಲ್ಲಿ ಗೆದ್ದು ಚಂಚಲೆಯಾದ ಲಕ್ಷ್ಮಿಯನ್ನೂ, ಮನುಜರ ಹಿಂಸೆಯನ್ನೂ, ಲಾಲಸೆಯನ್ನೂ, ಅಧಿಕಾರದ ಮದವನ್ನೂ ನೋಡಿ ಅರಿವಾಗಿ, ಕನ್ನೆರೆಯ ರಾಜ್ಯವನ್ನೆಲ್ಲಾ ಅಣ್ಣನಿಗೆ ಧಾರೆ ಎರೆದು ತಪಸ್ಸು ಮಾಡುವಾಗ ಸಹೋದರನ ಅಡಿ ನೆಲದಲ್ಲಿ ನಿಂತು ಧ್ಯಾನಿಸುತ್ತಿದ್ದೇನಲ್ಲಾ ಎಂದು ಒಳಗೊಳಗೆ ಕೊರಗುತ್ತಿದ್ದನಂತೆ.

ಈ ಮಹಾನ್ ವ್ಯಕ್ತಿಯಾದ ಬಾಹುಬಲಿ ಸಾಯುವಾಗ ನನ್ನ ಮೂರ್ತಿಯನ್ನು ಕೆತ್ತಿಸಿರಿ ಎಂದು ಹೇಳಿರಲಿಲ್ಲ. ಸರ್ವಪರಿತ್ಯಾಗಿಯಾದ ಬಾಹುಬಲಿ ಈ ಮಹಾಮಸ್ತಕಾಭಿಷೇಕ ಬಯಸಿದ್ದನೇ? ಪ್ರಾಣಿ ಜೀವನವು ಮನುಷ್ಯ ಜೀವನದಂತೆ ಪಾವನವಾದುದು. ಪ್ರಾಣಿ ಹಿಂಸೆ ಮಾಡಬೇಡಿ ಎಂದು ಹೇಳಿದ ಗೊಮ್ಮಟ ಮಸ್ತಕಾಭಿಷೇಕದ ನೆಪದಲ್ಲಿ ನರಬಲಿಯಾಗುವದನ್ನು ನೋಡಿದರೆ ಸೈರಿಸುತ್ತಿದ್ದನೇ?
ಚಂದ್ರಗಿರಿಯ ಮೇಲೆ ಬಿರುಗಾಳಿಗೆ ಬೆದರದೆ, ಬಿಸಿಲಿಗೆ ಬಾಡದೆ, ಮಳೆಗೆ ಕರಗದೆ. ಕಿವಿ ಇದ್ದೂ ಕಿವುಡನಾಗಿ, ಕಣ್ಣಿದ್ದೂ ಕುರುಡನಾಗಿ, ಬಾಯಿದ್ದೂ ಮೂಕನಾಗಿ ನಿಂತಂತೆ ತೋರುತ್ತದೆ. ಗೊಮ್ಮಟ, ಕಲ್ಲಿನ

ಬೊಂಬೆಯಾದರೂ ನಾವು ತೊಗಲಿನ ಹರಿದ ತಮ್ಮಟೆಯ ನಾದ ಬರದ ಬೊಂಬೆಗಳಾಗಿದ್ದೇವೆ. ನಮ್ಮ ಮೇಲೆ ಬೀಸುವ ಅನ್ಯಾಯದ ಬಿರುಗಾಳಿ, ಗುಡುಗು, ಮಳೆ ಬಂದರೂ ಕಣ್ಣು – ಬಾಯಿ– ಕಿವಿ ಮುಚ್ಚಿಕೊಂಡು ಗಾಂಧಿಯ ಆದೇಶದ ಕಟ್ಟಿಗೆಯ ಮಂಗನ ಬೊಂಬೆಗಳಾಗಿದ್ದೇವೆ.

(ಕಿವಿ, ಕಣ್ಣು, ಬಾಯಿ ಮುಚ್ಚಿಕೊಂಡ ಶ, ಸ, ಷ –ಈ ಮೂವರು ಕೆಳಗಿನ ಹಾಡನ್ನು ಹೇಳಬೇಕು.)

ಕಲ್ಲಿನ ಗೊಮ್ಮಟನೋ ನೀನು । ಹರಿದ
ತೊಗಲಿನ ತಮ್ಮಟೆಯೋ ನಾವು- ॥ಪಲ್ಲ॥

ಕಿವಿಯಿದ್ದು ಕೇಳಾಂಗಿಲ್ಲಾ
ಕಣ್ಣಿದ್ದು ನೋಡಾಂಗಿಲ್ಲಾ
ಬಾಯಿದ್ದು ನುಡಿಯಾಂಗಿಲ್ಲಾ॥

(ಹಾಡು ಮುಗಿದ ನಂತರ ಮೂರು ಜನ ಮೊದಲಿನಂತೆ ಯಥಾ ಪ್ರಕಾರವಾಗಿ ನಿಲ್ಲಬೇಕು. ಗೊಮ್ಮಟನ ಎದುರಿಗೆ ಜನ ಸಂದಣಿ ಪ್ರಾರಂಭ. ಆಗ 'ಶ, ಸ' ಮತ್ತು 'ಷ' ಜನರೊಂದಿಗೆ ಸೇರಿಬಿಡುತ್ತಾರೆ. ಗೊಮ್ಮಟನ ಭಕ್ತರಲ್ಲಿ ಕೆಲವರು ಕೈಮುಗಿದರೆ, ಇನ್ನು ಕೆಲವರು ಅಭಿಷೇಕ ಮಾಡಿಸಲು ಹೊರಟಿರುವರು, ಇನ್ನು ಕೆಲವರು ತೀರ್ಥ ತೆಗೆದುಕೊಳ್ಳುತ್ತಿರುವರು, ಮೂರ್ತಿ ಸುತ್ತು ಹಾಕುತ್ತಿರುವರು. ಒಟ್ಟಿನಲ್ಲಿ ಜಾತ್ರೆಯಂತೆ ಗದ್ದಲದಿಂದ ಕೂಡಿರುತ್ತದೆ. ಇಲ್ಲಿ ನಡೆದಂತೆ ವಿವರಣೆ ಹೇಳುವವನೊಬ್ಬ. (ಅದೇ ಧ್ವನಿ) (ವೀಕ್ಷಕ ವಿವರಣೆಯ ಧ್ವನಿಯಲ್ಲಿ ಹೇಳಬೇಕು).

ಧ್ವನಿ : ನೀವೀಗ ಶ್ರವಣಬೆಳಗೊಳದ ಗೊಮ್ಮಟನ ಹತ್ತಿರ ಬಂದಿರುವಿರಿ. ಇಂದ್ರಗಿರಿಯ ಕೆಳಗಡೆಯ ಭಾಗದಲ್ಲಿ ತುಪ್ಪದ, ಹಾಲಿನ, ಕಬ್ಬಿನ ರಸದ, ಬಾಳೆರಸದ, ಅಷ್ಟಗಂಧಕದ, ಕಷಾಯದ, ಅರಿಷಿಣದ ನೀರು. ಎಲ್ಲವನ್ನೂ ದೊಡ್ಡದೊಡ್ಡ ಪಾತ್ರೆಗಳಲ್ಲಿ ಕೂಡಿಸಿಟ್ಟಿದ್ದಾರೆ. ಅಭಿಷೇಕದ ಮುಹೂರ್ತ ಹತ್ತಿರಕ್ಕೆ ಬರತಾ ಇದೆ. ಇನ್ನು ಕೆಲವೇ ನಿಮಿಷಗಳಲ್ಲಿ ಅಭಿಷೇಕ ಪ್ರಾರಂಭವಾಗುತ್ತೆ. ಇನ್ನೇನು ಮಂತ್ರಿಗಳು ಬರುವದಷ್ಟೇ ತಡ, (ಏರು ಧ್ವನಿಯಲ್ಲಿ) ಅಗೋ...! ಅಲ್ನೋಡಿ ಅಲ್ನೋಡಿ ನಕ್ಷತ್ರದಂತೆ ಹೊಳಿತಾ ಇರೊ ಕಾರು ಬಂತು. ಬಂದ್ರು, ಬಂದ್ರು... ಕಾರಿಂದಾ ಹೊರಗಡೆ ಬಂದ್ರು... ಪೋಲಿಸರು ಅವರಿಗೆ ದಾರಿ ಮಾಡಿ ಕೊಡತಾ ಇದ್ದಾರೆ...'

(ಇಳುಧ್ವನಿ) ಮಹಾಶಯರು ಸಹಕರಿಸಬೇಕು. ಪ್ರಧಾನ ಮಂತ್ರಿ ಹಾಗೂ ನಮ್ಮ ಮಂತ್ರಿಗಳಾದಂಥವರು ಬಂದಿದ್ದಾರೆ. ಆದರೆ ನಮ್ಮ ಮಂತ್ರಿಗಳ ಧರ್ಮಪತ್ನಿಯರು ಹಿಂದಿನ ಕಾರಿನಲ್ಲಿ ಬರತಾ ಇದಾರಂತೆ. ಬಂದ ತಕ್ಷಣವೇ ಅಭಿಷೇಕ ಅವರ ಅಮೃತ ಹಸ್ತದಿಂದ ಪ್ರಾರಂಭ ವಾಗುತ್ತದೆ. ಈಗಾಗಲೇ ಮುಹೂರ್ತ ಮೀರಿದೆ. ಅಗೋ... ಅವರೂ ಬಂದೇ ಬಿಟ್ಟರು. ಪ್ರಧಾನ ಮಂತ್ರಿಗಳವರು ಗೊಮ್ಮಟನ ಪೂಜೆಗಾಗಿ ಬೆಳ್ಳಿಯಿಂದ ಮಾಡಿದ ತೆಂಗಿನಕಾಯಿಯನ್ನು ತಂದಿದ್ದಾರೆ.

(ಈ ಸಮಯದಲ್ಲಿ ಪೋಲಿಸರ ಸರಿಸುವಿಕೆ, ತಿಕ್ಕಾಟ, ಒದೆತ, ತಿವಿತ ಎಲ್ಲವನ್ನೂ ತೋರಿಸಬೇಕು. ಇದೇವೇಳೆಗೆ ಜನರಲ್ಲಿಯೇ ಇಬ್ಬರು ಮುಂದೆ ಬಂದು)

ಅ : ಮಂತ್ರಿ ಮಹಾಶಯರು ಬೆಳ್ಳಿಕಾಯಿ ಮಾಡಿಸಿಕೊಂಡು ಬಂದಾರಂತ.

ಬ : ಅವರಿಗೆ ಟೆಂಗಿನಕಾಯಿ ಸಿಕ್ಕಿಲ್ಲಂತ ಕಾಣತದ.

ಅ : ಅಲ್ಲೋ ಅವರ ಭಕ್ತಿ ಅಷ್ಟು ದೊಡ್ಡದ ಐತಿ.

ಬ : ಅಂತೂ ದೇವರ, ರೊಕ್ಕಾ ಕೊಟ್ಟಂಗ ಒಲಿತಾನಂದಾಂಗಾತ.

ಅ : ಅಭಿಷೇಕ ಮಾಡಾಕ ನಾವು ಹೋದ್ರು ಬಿಡತಾರಂತ ತಿಳದೇನ ? ಐವತ್ತು ರೂಪಾಯಿ ತಿಕೀಟ ಐತಿ. ಒಬ್ಬೊಬ್ಬರು ಸಾವಿರ ಸಾವಿರ ಗಟ್ಟಲೇನೂ ಕೊಡತಾರಂತ.

ಬ : ನಮ್ಮ ಹತ್ರ ಎಲ್ಲಿಂದ ಬರಬೇಕ ? ಇಲ್ಲಿಂದ ಕೈಮುಗದರಾತ. ಇಲ್ಲಾ. ದೇವರ ಮ್ಯಾಗ ನೀರ ಸುರುವಾಕಂದ್ರ ಎಷ್ಟ ಹೇಳದಷ್ಟ ಕೊಡತಾರ. ಅದೇ ಯಾವುದರ ಸಮಾಜ ಉದ್ಧಾರ ಕಾರ್ಯಕ ಕೊಡಾಂದ್ರ...

(ಪೋಲೀಸ ಬಂದು)

ಪೋ : ಏ ಏನ ಮಾಡತಿರಿ. ನಡಿರಿ ಮುಂದ ನಡಿರಿ.

(ಜನರೊಂದಿಗೆ ಸೇರುವರು. ವಾರ್ತೆಯನ್ನು ಹೇಳುವವ ಇವರ ಮಾತಿಗಿಂತಲೂ ಸಾವಕಾಶವಾಗಿ ಹಾಗೆಯೇ ಹೇಳುತ್ತಾ ಇರುತ್ತಾನೆ.)

ಧ್ವನಿ : ಶ್ರೀಮಂತಿಯವರು ಏಣಿಯನ್ನು ಏರತಾ ಇದ್ದಾರೆ. ಅಭಿಷೇಕ ಮಾಡುವುದಕ್ಕೆ. ಹಾಂ, ಪ್ರಾರಂಭವಾಯ್ತು. ಹಾಲು ಹೊಯ್ಯುತಾ ಇದ್ದಾರೆ. ನೋಡಿ, ಎಷ್ಟೋ ಹಾಲು ಹಾಕಿದರೂ ಇನ್ನೂ ಮೂರ್ತಿ ತೊಯ್ಯುತಾನೇ ಇಲ್ಲಾ. ಆಹಾ, ಹರಿತಾ ಇರುವ ಹಾಲು ಓಮಕರಗಿ ಗೊಮ್ಮಟನ ಮೇಲೆ ಬೀಳತಾ ಇದೆ ಏನೋ ಏನ್ನುವಂತೆ ಕಾಣತಾ ಇದೆ. ಇರುವೆ ಸಾಲಿನಂತೆ ಜನ ಬೆಟ್ಟವನ್ನು ಏರತಾ ಇದಾರೆ. ಅಲ್ನೋಡಿ, ಅಲ್ನೋಡಿ ಅಲ್ಲೊಂದು ಮುದುಕಿ ನಡಾ ಬಾಗಿದರೂ ಭಕ್ತಿಪೂರ್ವಕವಾಗಿ ಕೈಮುಗಿತಾ ಇಂದ್ರಗಿರಿಯನ್ನು ಏರತಾ ಬರತಾ ಇವಾಳೆ. ದೇವರ ಆರಾಧನೆಯೊಂದಿಗೆ ಜನ ಹೊರಟೇ ಇದಾರೆ.

ಅಲ್ಲಿ ನಡೆದಿರುವದನ್ನು ಇನ್ನು ಕಣ್ಣಾರೆ ನೀವೇ ನೋಡಿ ಆನಂದಪಡಿ (ಜನಸಮೂಹವೆಲ್ಲ ಸೇರಿ ಜೈನರ ಮೂಲಮಂತ್ರವನ್ನು ಹೇಳುತ್ತಾ ಇರಬೇಕು.)

ಣಮೋ ಅರಹಂತಾಣಂ
ಣಮೋ ಸಿದ್ಧಾಣಂ
ಣಮೋ ಆಯಾರಿಯಾಣಂ
ಣಮೋ ಉವಜ್ಝಾಯಾಣಂ
ಣಮೋ ಲೋಏ ಸಬ್ಬಸಾಹೂಣಂ

(ಈ ಮಂತ್ರವನ್ನು ಹೇಳುವ ಪ್ರಾರಂಭದಲ್ಲಿಯೇ ಜನರಲ್ಲಿಯ ಇಬ್ಬರು ಮುಂದೆ ಬಂದು) (ಹಿಂದೆ ಜನ ಹಾಗೇ ತಿರುಗುತ್ತ ಇರುತ್ತಾರೆ.)

ಅ : ಓಹೋ ಸಾಹಿತಿಗಳು. ಅಪರೂಪ ದರ್ಶನ ಇಲ್ಲಿ ?

ಬ : ಸುಮ್ಮ ಹಾಗೆ ಬಂದಿದ್ದೆ.

ಅ : ನೀವು 'ಬಾಹುಬಲಿ'ಯ ಬಗ್ಗೆ ಏನೋ ಬರೀತಾ ಇದ್ದೀನಿ ಅಂತಾ ಹೇಳತ್ತಿದ್ರಲ್ಲಾ. ಎಲ್ಲಿವರ್ಗೆ ಬಂತು ?

ಬ : ಬರದ ಮುಗಿಸಿದ್ದೂ ಆಯಿತು. ಕೃತಿ ಹೊರಗ ಬಂದದ್ದೂ ಆಯಿತು. ಇಲ್ಲೇನಾದರೂ ಒಂದೆರಡು ಬುಕ್ ಮಾರಾಟ ಆಗಬಹುದಂತಾ ಬಂದಿದ್ದೆ.

ಅ : ಓಹೋ ಹಾಗಾ.

ಬ : ಅಂದ್ಹಾಂಗ ನೀವು ಮಸ್ತಕಾಭಿಷೇಕ ಅಂತ ನಾಟಕಾ ಬರಿಬೇಕಾಗಿದೆ ಅಂತಾ ಅನ್ನುವುದನ್ನು ಕೇಳಿದ್ದೆ

ಅ : ಹಾಂ ಹೌದು. ಅದಕಾಗಲೇ ವಿಷಯದ ವಸ್ತು ಬೇಕಲ್ಲಾ. ನೋಡಿ ಕೊಂಡು ಹೋಗುನಾ ಅಂತಾ ಬಂದೆ.

ಬ : ಮತ್ತೇನಂತಾರೆ ನಿಮ್ಮ ಬಡಾಯಿ ಸಾಹಿತಿಗಳು.

ಅ : ಯಾವ ಬಡಾಯಿ ಸಾಹಿತಿ ?

ಬ : ಹೇ, ಯಾರದೋ ಕುದುರೆ ಯಾರದೋ ಜಬರಿ ಅಂತಾ ಹೊಡಿತಾ ಹೊಂಟಿದ್ದಾರೆ ಅಂತಾ ಹೇಳುತ್ತಿದ್ದೆಲ್ಲಾ.

ಅ : ಓಹೋ ಆ ಮಹಾಶಯರೇ, ಇನ್ನೂ ಅವನ ಹುಳುಕು ಹೊರಗ ಬಿದ್ದಿಲ್ಲ. ಎಷ್ಟು ದಿನಾ ಅಂತ ಮುಚ್ಚಿ ಇಡಾಕ ಆಗತ್ತೈತಿ. ಬ್ಯಾರೆ ಬಡಸಾಹಿತಿಗಳು ಬರದಿದ್ದು ತನ್ನ ಹೆಸರಲೇ ಪ್ರಿಂಟ್ ಮಾಡಿಸೋದು.

ಬ : ನಮ್ಮ ಬಡಸಾಹಿತಿಗಳ, ಕಲಾಕಾರರ ಹಣೇಬರಹನೆ ಇಷ್ಟು.

ಅ : ಏ, ಆವನದೆ ಮೊನ್ನೆ ಮೆರವಣಿಗೆ ತಗದರಲ್ಲಾ, ಗೊತ್ತಿದೆ ಇಲ್ಲಾ.

ಬ : ಎದರ ಮೆರವಣಿಗೆ

ಅ : ಅದೊಂದು ದೊಡ್ಡ ಕಥೆ ಹೇಳ್ತೀನಿ ಬಾ ಇಲ್ಲಿ.

(ಇದ್ದಕ್ಕಿದ್ದಂತೆ ಬೆಳಕು ಹೋಗುತ್ತಲೇ ಶ್ರವಣಬೆಳಗೊಳಕ್ಕೆ ಬಂದ ಜನ ಹಾಗೂ 'ಅ' ಮತ್ತು 'ಬ' ಮಾಯವಾಗಬೇಕು. 'ಶ', 'ಸ' ಮತ್ತು 'ಷ' ಮಾತ್ರ ಮೊದಲು ನಿಂತ ಜಾಗದಲ್ಲಿಯೇ ನಿಂತು ಕಿವಿ, ಬಾಯಿ, ಕಣ್ಣು ಮುಚ್ಚಿಕೊಂಡಿರಬೇಕು. ರಂಗಮಂಟಪದ ಮೇಲೆ ಮುಂದೆ ನಡೆಯುವ ಪಾತ್ರಧಾರಿಗಳ ಮಾತನ್ನು, ನೋಟವನ್ನು ಕದ್ದು ಕದ್ದು ಕೇಳಿ, ಬಾಯಿ ಮುಚ್ಚಿಕೊಂಡವ ನಕ್ಕು ವಿಡಂಬನ ಮಾಡುವದು - ಇವರ ಕೆಲಸ. ಒಂದು ಕಡೆಯಿಂದ ಸಾಹಿತಿ, ಇನ್ನೊಂದು ಕಡೆಯಿಂದ ಮೂರು ಜನ (ಬ, ಕ, ಡ,) ಬರುತ್ತಾರೆ)

ಬ, ಕ, ಡ : ಓಹೋ, ನಮಸ್ಕಾರ ನಮಸ್ಕಾರ.

ಸಾಹಿತಿ : ನಮಸ್ಕಾರ.

ಬ : ನಿಮಗೆ ಪ್ರಶಸ್ತಿ ಸಿಕ್ಕಿದ್ದಕ್ಕೆ ಧನ್ಯವಾದಗಳು.

ಕ : ಅದಕ್ಕಾಗಿಯೇ ನಿಮಗೆ ಶಾಲು ಹೊದಿಸಿ ಸನ್ಮಾನ ಮಾಡೋಣಾಂತ ಬಂದಿದ್ವಿ

ಡ : ಹಾ. ಹೌದು.

ಸಾಹಿತಿ : ಹೋ, ನಾನು ಅಂದುಕೊಂಡೆ, ನನಗೆ ಪ್ರಶಸ್ತಿ ಸಿಕ್ಕಿರೋದು ನಿಮ್ಮ ಸಂಘಕ್ಕೆ ತಿಳಿದಿದೆಯೋ ಇಲ್ವೋ! ಅಂತಾ ಹೇಳಿ, ಜ್ಞಾಪಕ ಮಾಡಿ ಕೊಡೋಣಾಂತ ನಾನೇ ಬರತಾ ಇದ್ದೆ.

ಡ : ಸರ್, ನಿಮ್ಮ ಕೃತಿ ನಾ ಓದಿದಿನಿ ಸಾರ್.

ಬ : ನಾನೂ ಒಂದಕ್ಷರ ಬಿಡದೆ ಓದಿದಿನಿ ಸಾರ್. ಆದರೆ...ಅದರ ಅಂತ್ಯನೇ ಹತ್ತಲಿಲ್ಲ.

ಕ : ನಿಮ್ಮಂಥ ದಡ್ಡ ತಲಿಗೇನ್ ಹತ್ತೈತಿ ಅದು. ನಿಮ್ಮ ತಲಿಗೆ ಅದಕ ಹತ್ತಬೇಕು. ಅದಕಂದಲೆ ಅದಕ್ಕ ಪ್ರಶಸ್ತಿ ಕೊಟ್ಟಿರೋದು.

ಸಾಹಿತಿ : ಅಂದ ಹಾಗೆ ನನಗೆ ಸನ್ಮಾನ ಯಾವಾಗ ಮಾಡಬೇಕು ಅಂತ ಮಾಡಿದಿರಿ

ಡ : ನೀವು ಹೇಳಿದ್ರೆ... ಈಗಲೇ ಸಾರ್. ಶಾಲು ತಂದಿದಿವಿ, ಮಂತ್ರಿಗಳು ಅಧ್ಯಕ್ಷತೆಗೆ ಒಪ್ಪಿಕೊಂಡಿದಾರೆ. ಅವರೂ ಬರತಾನೆ ಇದಾರೆ.

ಬ : ಬೇಂಡ ಬಾಜಾದವರು ಬಂದಿದ್ದಾರೆ ಸಾರ್; ಅವರ ಜೊತೆಗೆ ಹೋಗಿ ಬಿಡೋಣ.

ಸಾಹಿತಿ : ಮೆರವಣಿಗೆಯೇ ? ಬೇಡಾ... ಬೇಡಾ..

ಕ : ಏನ ಸಾರ್, ಎಂಥಾ ಸಾಹಿತ್ಯ ಪರಿಯಾಸಕರೇ ಹಾರ ತುರಾಯಿ ಹಾಕಿ ಊರ ತುಂಬಾ ಜಾತ್ರೆ ಮಾಡತಾರಂತೆ. ಇನ್ನ ನಾವೇಕ ಮಾಡಬಾರದು. ಇರಲಿ ನಡಿರಿ ಸಾರ್.

ಡ : ಕರಿ ಕರಿರಿ, ಬ್ಯಾಂಡ ಬಾಜಾದವರಿಗೆ ಕರಿರಿ.

(ಮತ್ತೆ ನಾಲ್ಕು ಜನ ಬರುತ್ತಾರೆ, ಕೈ ಮುಂದೆ ಮಾಡಿ ಬಾಯಿಯಿಂದ ಸನ್ನೆ ವಾದ್ಯ ಊದುತ್ತ ಮೆರವಣಿಗೆ ನಡೆಯುತ್ತದೆ. ಅಲ್ಲಿಯೇ ಗೊಮ್ಮಟನ ಸುತ್ತುವರಿದು ಮುಂದೆ ಹಾಕಿದ ಕುರ್ಚಿಯ ಮೇಲೆ ಸಾಹಿತಿ, ಮಂತ್ರಿ, ಮಾಜಿ ಮಂತ್ರಿಗಳು ಕುಳಿತುಕೊಂಡಿರುತ್ತಾರೆ. 'ಶ', ಸ, ಷ' ಇವರು ಮಾತ್ರ ಇವರ ಭಾಷಣಕ್ಕೆ ತಕ್ಕಂತೆ ವಿಡಂಬನೆ ಮಾಡಬೇಕು. ಸಾಹಿತಿ ಮಂತ್ರಿಗಳಿಗೆ ಹಾರ. ತುರಾಯಿ ಹಾಕಬೇಕು.)

ಡ : ಈಗ ಮಾನ್ಯ ಮಂತ್ರಿಗಳವರಿಂದ ಭಾಷಣ.

(ಮಂತ್ರಿಗಳು ಮುಂದೆ ಬಂದು ಮಾತನಾಡದೆ ಹಾವ-ಭಾವದೊಂದಿಗೆ ಮೂಕ ಭಾಷಣ ಮಾಡಬೇಕು.)

ಡ : ಈಗ ಮಾಜಿ ಮಂತ್ರಿಗಳವರಿಂದ ಭಾಷಣ.

(ಹಾವ, ಭಾವದೊಂದಿಗೆ ಮೂಕಭಾಷಣ ಮಾಡಬೇಕು.)

ಡ : ಈಗ ಸಾಹಿತಿಗಳವರಿಂದ ಭಾಷಣ.

(ಸಾಹಿತಿಗಳು ಭಾಷಣಕ್ಕೆ ಮುಂದೆ ಬರುವದಕ್ಕಿಂತ ಮುಂಚಿತವಾಗಿ ಮಂತ್ರಿಗಳವರು ಸಭೆಯಿಂದ ಎದ್ದು ಹೋಗಬೇಕು.)

ಸಾಹಿತಿ : (ಮುಂದೆ ಬಂದು)—ಮಾನ್ಯಮಂತ್ರಿಗಳಾದ ಶಿಕ್ಷಣ ಸಚಿವರೆ (ಹೊರಳಿ ನೋಡಿ). ಅರ್ಜಂಟ ಕೆಲಸ ಇತ್ತಂತ ಕಾಣುತ್ತೆ ಎದ್ದು ಹೋಗಿದಾರೆ ಪಾಪ ನಮ್ಮ ಭಾಷಣ ಕೇಳೋಕೆ ಪುರಸತ್ತ ಅವರಿಗೆಲ್ಲಿ (ನಗು). ಅವರಿಗೆ ಭಾಷಣ ಮಾಡುವದು ಮಾತ್ರ ಗೊತ್ತು, ಕೇಳುವದು ಗೊತ್ತೇ ಇಲ್ಲ. ಮಾನ್ಯ ಮಾಜಿ ಸಚಿವರೆ (ಹೊರಳಿ ನೋಡಿದಾಗ ನಾನು ಇದ್ದೇನೆ ಎನ್ನುವ ರೀತಿಯಲ್ಲಿ ಸಚಿವರು ಕೈ ಮಾಡಿ ತೋರಿಸುವರು) ನನಗೆ ಸನ್ಮಾನ ಮಾಡಿದುದಕ್ಕೆ ತುಂಬಾ ಸಂತೋಷ (ಇದ್ದಕ್ಕಿದ್ದಂತೆ ಮೈಕ್ ಬಂದಾಗುವದು. ಮೂಕಭಾಷಣ). ಇತ್ತಿತ್ತಲಾಗಿ ನಮ್ಮ ಸಾಹಿತ್ಯ ಸಮುದ್ರದಂತೆ ಸಮೃದ್ಧವಾಗಿ ಉಕ್ಕಿಬರತಾ ಇದೆ. ಬಹಳ ಕಷ್ಟಪಟ್ಟು ಬರೀತಾ ಇದಾರೆ. ಆದರೇನು ಮಾಡುವದು ? ಅದರ ಸ್ವಂತಿಕೆ ಅನ್ನುವದೇ ಇರುವದಿಲ್ಲ.

(ಬಾಯಿ ಮುಚ್ಚಿಕೊಂಡ 'ಸ' ನು ಬಾಯಿಯನ್ನು ತೆಗೆದು)

ಸ : ನಿಮ್ಮ ಕೃತಿ ಸ್ವಂತ ನೀವು ಬರದದ್ದೇ ಸಾರ್ ?

ಸಾಹಿತಿ : ನಿಜವಾಗಿಯೂ ನಮ್ಮಪ್ಪರಾಣೆಗೂ ನಾನೇ ಬರೆದದ್ದು, ಅದರಲ್ಲೇನೂ ಸಂಶಯವಿಲ್ಲ.

(ಕಣ್ಣುಮುಚ್ಚಿಕೊಂಡವ ನಕ್ಕು, ಮತ್ತೆ ತನ್ನ ಕಣ್ಣನ್ನು ಮುಚ್ಚಿಕೊಳ್ಳುವನು)

ಸ : ಹಾಗಿದ್ರೆ ಮೊನ್ನೆ ಏನೇನೋ ವಿಮರ್ಶೆ ಬಂದಿತ್ತು ? ಒಬ್ಬರ ಕಿಸೆಯಲ್ಲಿ ಕೈ ಇಟ್ಟು ಬರೀತಾರೆ. ಪ್ರೂಫ್ ಮಾಡುವ ರೀತಿಯಲ್ಲಿ ಕೊಟೇಶನ್ ಕೂಡಾ ಕೊಟ್ಟಿದ್ರು ? ('ಶ' ನು ಕಿವಿಬಿಟ್ಟು)

ಶ : ನಡುವೆ ಹಾಗೆಲ್ಲಾ ಪ್ರಶ್ನೆ ಕೇಳಬಾರದು. ಸುಮ್ನೆ ಕೂಡು.

ಸಾಹಿತಿ : ಕೇಳ್ಲಿ ಬಿಡಿ. ಅದರಲ್ಲೇನಿದೆ? ನನ್ನ ಕೃತಿಯಲ್ಲಿ ಬಂದಿರೋ ಪ್ಯಾರಾಗಳು ಅವರ ಪುಸ್ತಕದಲ್ಲಿ ಬಂದಿರಹುದು ಒಪ್ಪಿಕೊಳ್ಳತೀನಿ. ಇದೇನು ದೊಡ್ ಮಹಾ. ಪುಸ್ತಕಕ್ಕೆ ಪುಸ್ತಕನೇ ಕದೀತಾರೆ. ಪಿಎಚ್.ಡಿ. ಪ್ರಬಂಧಕ್ಕೂ ಕೂಡಾ ಬಳಸಿರುವ ಪುಸ್ತಕದ ರೆಫರೆನ್ಸ ಕೂಡಾ ಕೊಡೂದಿಲ್ಲಾ. ಅಂದ ಮೇಲೆ... (ಇದ್ದಕ್ಕಿದಂತೆ ಮೈಕ್ ಬಂದಾಗುವದು. ಮೂಕ ಭಾಷಣ)

(ಆಗ 'ಶ, ಸ, ಷ, ಈ ಮೂವರು ಕೈ ಕೆಳಗೆ ಮಾಡಿ ಕೆಳಗಿನ ಹಾಡು ಹೇಳುವರು)

ಶ, ಸ, ಷ : ಕಲ್ಲಿನ ಗೊಮ್ಮಟನೋ ನೀನು । ಹರಿದ
ತೊಗಲಿನ ತಮ್ಮಟೆಯೋ ನಾವು ॥ ಪಲ್ಲ ॥
ಕಿವಿಯಿದ್ದು ಕೇಳಂಗಿಲ್ಲ
ಕಣ್ಣಿದ್ದು ನೋಡಾಂಗಿಲ್ಲ
ಬಾಯಿದ್ದು ನುಡಿಯಾಂಗಿಲ್ಲ ॥ ೧ ॥

(ಎಂದು ಹಾಡುವಾಗಲೇ ಮತ್ತೆ ಗೊಮ್ಮಟನ ಮುಂದೆ ಯಥಾಪ್ರಕಾರವಾಗಿ ಜನ ಸೇರುತ್ತಾರೆ. ಅವರ ಜೊತೆಗೆ 'ಶ, ಸ, ಷ' ಸೇರಿಬಿಡುತ್ತಾರೆ. ಮತ್ತೆ ಮಂತ್ರ ಪಠಣ. ಮೊದಲಿನಂತೆ ಗುಜು ಗುಜು ಶಬ್ದ)

ಧ್ವನಿ : (ಪ್ರೇಕ್ಷಕ ವಿವರಣೆ ಮುಂದುವರಿಯುವುದು)— ಹನ್ನೆರಡು ವರ್ಷಕ್ಕೊಮ್ಮೆ ಈ ಅಭಿಷೇಕ ಆಗುತ್ತೆ. ಏಕೆಂದರೆ ಹನ್ನೆರಡು ವರ್ಷದವರೆಗೆ ಈ ಮೂರ್ತಿ ಕೆತ್ತಿದ್ದಕ್ಕಾಗಿ ಎಂದು ಹೇಳುವದುಂಟು. ಹಾಂ, ಈಗ ನೋಡಿ ಚಂದನದ ಅಭಿಷೇಕ ಮಾಡತಾ ಇದಾರೆ. ಅಭಿಷೇಕ ಮಾಡುವವರು ಒಂದು ಸಾವಿರ ರೂಪಾಯಿ ಕೊಟ್ಟಿದ್ದಾರಂತೆ. ಚಂದನದ ಅಭಿಷೇಕದಲ್ಲಿ ಭುಜಬಲಿಯು ಪೂರ್ತಿಯಾಗಿ ಕೇಸರಿ ವರ್ಣದಿಂದ ಹೊಳೆಯುತ್ತಿದಾನೆ. ಆಹಾ, ಅಭಿಷೇಕ ಮಾಡಿದ ನೀರು ಕಾಲುವೆ ಹರಿದ ರೀತಿಯಲ್ಲಿ ಹರಿತಾ ಇದೆ. ಭಕ್ತಾದಿಗಳು ಅದರಲ್ಲಿಯೇ ಉರುಳಾಡಿ ಪಾವನವಾದೆವು ಎನ್ನುತ್ತಿದ್ದಾರೆ (ಜನ ಉರುಳಾಡುತ್ತಿರುವದನ್ನು ಮೂರ್ತಿಯ ಮುಂದೆ ತೋರಿಸಬೇಕು). ಕೆಂಪು ಬಾವುಟ ಎತ್ತಿದರು. ಈಗ ಮತ್ತೆ ನೀರಿನ ಅಭಿಷೇಕ ನಡೀತಾ ಇದೆ. ಈಗಂತೂ ಗೊಮ್ಮಟ ಅಪ್ಪಟ ರಂಜಿತವರ್ಣದಿಂದಾ ಕೂಡಿದಂತೆ ಕಾಣುತ್ತಿದೆ.

(ಇಬ್ಬರು ಮುಂದೆ ಬಂದು)

ವ : ಏ ಎಷ್ಟು ಚಂದ ಕಾಣತದ ನೋಡೋ.

ರ : ಹೌದು. ಎಷ್ಟ ಚಂದ ಕಾಣತದ.

ವ : ಇಲ್ಲಿ, ಈ ಬಾಹುಬಲಿ ಶ್ವೇತಾಂಬರನೋ ದಿಗಂಬರನೋ ?

ರ : ಏ ಅಪಟ ದಿಗಂಬರ. ಕಾಣುದಿಲ್ಲೇನ, ಬೆತ್ತಲೆಯಾಗಿ ನಿಂತಿದ್ದು ?

ವ : ಅರವಿ ಇದ್ದಂಗ ಕಾಣತಾವ.

ರ : ಕಣ್ಣಿಗಿ ಏರಿಗಿರಿ ಬಂದದೇನ ನೋಡು. ಅನಬಾರದ ಹಂಗ. ಗಲ್ಲಾ ಗಲ್ಲಾ ಬಡಕೋ. ತಪ್ಪಾಯಿತು ಅನ್ನು. ದೇವರು ಮೂಗು ಕೊಯ್ಯುತೈತಿ.

(ಪೋಲಿಸ ಬಂದು ನಡೆಯಿರೆಂದು ಕಳಿಸುವನು– ವೀಕ್ಷಕ ವಿವರಣೆ ಮಾತ್ರ ಮಾತಾಡುವಾಗಲೂ ಸಾವಕಾಶವಾಗಿ ಹೇಳುತ್ತಲೇ ಹೋಗಬೇಕು.)

ಧ್ವನಿ : (ಮುಂದುವರಿದಿದ್ದು)—ಹಾ, ಹಾ ಇಲ್ಲಿ ನೋಡಿ. ನಡಿತಾ ಇರುವ ದೃಶ್ಯವನ್ನು ನೋಡಲಿಕ್ಕೆ ನಮ್ಮ ಈ ಎರಡೂ ಕಣ್ಣು ಸಾಲವು. ಇಲ್ಲಿ ಬಂದಿರುವ ಎಲ್ಲರ ಕಣ್ಣು ಕಿತ್ತಿ ನಾವೇ ಹಚ್ಚಿಕೊಂಡು ನೋಡೋಣವೇ ಅನಿಸುತ್ತೆ. ಇಂಥ ರಮಣೀಯವಾದ ದೃಶ್ಯವನ್ನು ದೇವಲೋಕದ ಅಪ್ಸರೆಯರು ಬಂದು ನಿಂತು ನೋಡಿ ಹೋಗಬೇಕು. ಅಷ್ಟೊಂದು ರಂಜನೀಯವಾಗಿದೆ. ಅಲ್ಲಲ್ಲಿ ಹಾಡುತ್ತಿರುವ ಜನ… ಓಹೋ, ಅಲ್ನೋಡಿ ಮುದುಕಿಯೊಬ್ಬಳು, ನಡು ಬಾಗಿದವಳು ಕೋಲು ಊರುತ್ತಾ ದರ್ಶನಕ್ಕಾಗಿ ಬರತಾನೇ ಇದ್ದಾಳೆ. ಪಕ್ಕದಲ್ಲಿದ್ದವರು ಯಾರೂ ಆಕೆಗೆ ಆಶ್ರಯ ನೀಡಲೊಲ್ಲರು. ಜನಾ ಒಂದೇ ರಾಗದಿಂದ ಹಾಡತಾನೆ ಇದಾರೆ. ನಿಮಗೆ ನೋಡಬೇಕೆನ್ನುವ ಆಶಯವಾಗಿರಬಹುದಲ್ಲವೇ ? ನೋಡಿ ನೀವೇ ಕಣ್ಣಾರೆ ನೋಡಿ…

(ಮುದುಕಿಯೊಬ್ಬಳು ಕೋಲೂರುತ್ತ ಹೋಗುತ್ತಿರುತ್ತಾಳೆ. ಮೊದಲು ಮಾತನಾಡಿದ 'ವ' ಮತ್ತು 'ರ' ರನ್ನು ಪೋಲಿಸರು ತಳ್ಳಿದಾಗ 'ಜ' ಮತ್ತು 'ಬ' ಇಬ್ಬರೂ ಮುಂದೆ ಬಂದು ಮಾತನಾಡುವರು)

ಜ : ಅಯ್ಯೋ ಯಾವಾಗ ಬಂದೆ ?

ಬ : ಎರಡು ಮೂರ ದಿನ ಆಯಿತು ಬಂದು.

ಜ : ಮತ್ತೇನು ಎಲ್ಲೇರ ಜಾಬು ?

ಬ : ಎಲ್ಲಿ ಜಾಬ್, ಜವಾಬ ಇತ್ತಂದ್ರ ನಾನ್ಯಾಕ ಇಲ್ಲಿ ಬರತಿದ್ಯಾ ಸಾಯಾಕ...

ಜ : ಯಾಕೋ ಎಷ್ಟ ಬೇಸರದಿಂದ ಮಾತಾಡತಿ. ಒಂದಿಲ್ಲಾ ಒಂದಿನ ಸಿಕ್ಕೇ ಸಿಗುತ್ತೆ. ನೋಡು ನಾನು ಬಿ.ಎ. ಮುಗಿಸಿದೆ. ಸಾಹೇಬ್ರು ಮನ್ಯಾಗ ಕಾಯಿಪಲ್ಲೆ ಹೊರೋ ಜಗಾಕ ತಗೋ ಬೇಕಾದ್ರ ಎಡತಾಕಿ ನನ್ನ

ಎರಡು ಜೋಡು ಚಪ್ಪಲಿ ಹರದ ಹೋದ್ವು. ಹಂಗ ನೀನೂ ಯಾರ್ನರ ಹಿಡಿಬೇಕು ?

ಬ : ಏನು ಹಿಡಿಯುವದೋ, ಏನು ಬಿಡುವದೋ, ನನಗೊಂದೂ ಅರ್ಥವಾಗತಾ ಇಲ್ಲಾ.

ಜ : ಮತ್ತ ನಿಮ್ಮ ಊರವರು ಯಾರೋ ಮಂತ್ರಿ ಆಗ್ಯಾರಂತ ಕೇಳಿದ್ವೆ ?

ಬ : ಹೌದು ಆಗ್ಯಾರ. ಮಂತ್ರಿ ಆಗೂಕಿಂತ ಮೊದಲ ಬಾಳ ಚಲೋ ಇದ್ದರ್ರಿ. ಮಂತ್ರಿ ಆದಮೇಲೆ ಎಲ್ಲಾ ಹದಗೆಟ್ಟದ.

ಜ : ಯಾಕ ಏನಾತು ಹಂತಾದ್ದು ?

ಬ : ನಮ್ಮಪ್ಪ ನನಗ ನೌಕರಿ ಹಚ್ಚಿ ಅಂತ ಹೊಲ ಮನಿ ಮಾರಿ ರೊಕ್ಕಾ ಕಟಗೊಂಡು ಇವನ ಮನಿಮುಂದ ಕುಂತ ಬಂದ. ರೊಕ್ಕ ಹೋತು ಎಲ್ಲಾನೂ ಹೋತು.

ಜ : ಮತ್ತ ನೀನ ಹೋಗಿ ಕೇಳಬೇಕು ?

ಬ : ಹೋಗಿದ್ದ್ಯಾ. ನನ್ನ ಪರಿಸ್ಥಿತಿ ಏನ ಆತು ಗೊತ್ತಾ . . . ಬಾ ಇಲ್ಲಿ ಹೇಳತೀನಿ . . .

(ಇದ್ದಕ್ಕಿದ್ದಂತೆ ಅವರು ಸರಿಯಬೇಕು. ಜನರಲ್ಲಿ ಒಂದಾದ ಕ, ಸ, ಹ ಮೂವರು ತಮ್ಮ ಸ್ಥಾನದಲ್ಲಿ ಬಂದು ಯಥಾಪ್ರಕಾರವಾಗಿ ನಿಲ್ಲಬೇಕು. ಒಂದು ಕುರ್ಚಿ, ಅದರ ಮೇಲೆ ಮಂತ್ರಿಗಳವರು ಪೇಪರ ಓದುತ್ತ ಸಿಗಾರೇಟ್ ಸೇದುತ್ತ ಕುಳಿತಿರುತ್ತಾರೆ. ಆಗ ಮತ್ತೆ 'ಬ' ನ ಪ್ರವೇಶವಾಗುತ್ತದೆ)

ಬ : (ಅಂಜುತ್ತ) ನಮಸ್ಕಾರ.

ಮಂತ್ರಿ : ಯಾರು ?

ಬ : ನಾನರಿ.

ಮಂತ್ರಿ : ಹೂಂ, ಯಾರಿಗಿ ಕೇಳಿ ಬಂದಿ ಒಳಗ? ಯಾರೂ ತಡಿಲಿಲ್ಲೇನ ನಿನಗ ?

ಬ : ಇಲ್ಲರ್ರಿ. ಮುಂದಿನ ಗೇಟನ್ಯಾಗ ನಾಯಿ ಇದೆ ಎಚ್ಚರಿಕೆ ಅಂತಾ ಬೋರ್ಡ ಹಾಕಿತ್ತು. ನಾಯಿನೂ ಇರಲಿಲ್ಲಾ. ಯಾರೂ ಇರಲಿಲ್ಲಾ. ಹಾಗೇ ಬಂದೆ.

ಮಂತ್ರಿ : (ದಿಟ್ಟಿಸಿ ನೋಡುತ್ತ) –ಯಾವೂರು ?

ಬ : ಬಿಟ್ಟಬಂದ ಹಳ್ಳಿ, ನಿಮಸ್ಕಾರ ಕಡೆಯವನರ್ರಿ.

ಮಂತ್ರಿ : (ಸೀಗರೇಟು ಸೇದುತ್ತ) ಹೂಂ. ಹೌದಪ್ಪ. ನಾನು ನಿಮ್ಮ ಕಡೆಯವನ. ಅದು ಕುರ್ಚಿ ಸಿಕ್ಕ ಮ್ಯಾಲ ನೀವೆಲ್ಲಾ ಅದನ್ನ ಮರ್ತ ಬಿಡಬೇಕ್ರಿಪಾ. ಯಾಕಂದ್ರ ಇವಾಗ ನಾವು ಒಂದು ದೇಶದ ಭಾರಾ ಹೊತ್ತಿರತೇವಿ. ಎಲ್ಲಾರಿಗೂ ಉದ್ಧಾರ ಮಾಡಬೇಕಾಗತದ ನೋಡ. ಹೌದಿಲ್ಲೋ ?

ಬ : (ಗೋಣು ಹಾಕುವನು. ಮೂರ್ತಿಗಳ ವಿಡಂಬನೆ ತೋರಬೇಕು)

ಮಂತ್ರಿ : ಹೂಂ, ಏನಾಗಬೇಕಿತ್ತು ?

ಬ : ಬಸವೇಶ್ವರ ಕಾಲೇಜದಾಗ ಒಂದು ಪ್ರೊಫೆಸರ ಜಾಗಾ ಖಾಲಿ ಐತಿ. ಅದನ್ನ ಹ್ಯಾಂಗರ ಮಾಡಿ ನನಗ…

ಮಂತ್ರಿ : ಯಾವ ಕಾಲೇಜು ? ಬಸವೇಶ್ವರ ಕಾಲೇಜಾ ? ಸ್ವಾಮಿಗೋಳು ನಡೆಸುದಾ ?

ಬ : ಹೂನ್ರಿ… ?

ಮಂತ್ರಿ : ಹಂಗಿದ್ರ ನನ್ನತ್ರ ಯಾಕ ಬಂದಿ. ಯಾರರ ಸ್ವಾಮೇರ್ನರ–ಪೀಠಾಧೀಶ್ವರರನ್ನ ಹಿಡೀಬೇಕಪಾ. ಇಲ್ಲಾ ಯಾವ ದೇವರ ಜುಟ್ಟಾ ಯಾವ ಪೂಜಾರಿ ಕೈಯಾಗ ಐತಿ. ಅವರಿಗಿ ಹಿಡಿದರ ಕೆಲಸ ಆಕ್ಕಾವು (ನಗು, ಸ್ವಲ್ಪ ತಡೆದು). ಈ ಸನ್ನ ನನ್ನ ಹತ್ರ ಬಂದ್ರ…(ಸಿಗಾರೇಟ ಸೇದುತ್ತ ಅದರ ಧೂಳು ಝಾಡಿಸುವ ನೆವ ಮಾಡಿ ಹಣ ಕೇಳುವ ಸನ್ನೆ ಮಾಡುತ್ತಾ) ಇದು ಇರಲಾರದ ಕೆಲಸ ಆಗಂಗಿಲಪಾ….

ಬ . ಮೊನ್ನೆ ನಮ್ಮಪ್ಪ ಬಂದು….

ಮಂತ್ರಿ : ಯಾರ ನಿಮ್ಮಪ್ಪ ? ಓಹೋ, ಯಂಕಪ್ಪಾನಾ ? ಅದು ಎಲ್ಲಿ ಸಾಲ ಬೇಕು ? ಖರೆ ಅಲ್ಲಿಗಿ ಒಂದ್ರ ನಮ್ಮ ಕಾರಿನ ಪೆಟ್ರೋಲ್ ಸಾಲಂಗಿಲ್ಲಪ್ಪ. ನನ್ನ ಸ್ವಲ್ಪ ಜವಾಬು (ಮತ್ತೆ ಹಣ ಬೇಕೆನ್ನುವ ಸನ್ನೆ ಮಾಡುತ್ತ). ನೋಡೂಣಂತ

ಬ : ನಾವು ಬಡೂರು, ನಮ್ಮದು ಅನ್ನೋದು ಈಗ ಏನಿಲ್ಲ. ಹ್ಯಾಂಗರ ಮಾಡಿ ಅದರಾಗ….

ಮಂತ್ರಿ : ಅದರಾಗ ಏನಾಗತದೋ ? ನೋಡಿ ಇಲ್ಲಿ ಉಳದಾದ ನಮ್ಮ ಸರಿ ಜೋಡಿಯವರು ಗಂಧದ ಕಟ್ಟಿಗೆಯ ಬಾಗಿಲಾ ಮಾಡಸ್ಯಾರಪಾ.

ಬ : ನಾವು ಬಡೂರು ಅದರಾಗ ಹ್ಯಾಂಗರ….

ಮಂತ್ರಿ : ಒಮ್ಮೆ ಹೇಳಿದ್ರ ತಿಳಿಯುಂಗಿಲ್ಲೇನ ನಿನಗ, ಮತ್ಯಾರಿಗ್ಯರ ಸ್ವಾಮಿಗಳನ್ನ ನೋಡಕೊ ಹೋಗು.

ಬ : ನೀವ ಹ್ಯಾಂಗರ….

ಮಂತ್ರಿ : ಏನ ಹ್ಯಾಂಗರ, ಹ್ಯಾಂಗರ ಅಂತ, ಸುಮ್ನ ಹೋಗತ್ತಿಲ್ಲ. ಸುಮ್ನ ಯಾಕ ನಮ್ಮ ಟಾಯಿಮು ವೇಸ್ಟ ಮಾಡತಿ. ಯಾರದಿರೋ ಅಲ್ಲಿ ಎಳದೊಗಿರಿ ಇವನ್ನ ಹೊರಗ.

(ಒಬ್ಬ ಗುಮಾಸ್ತ ಬಂದು ಅವನನ್ನು ಎಳೆದು ಒಗೆಯುವ ಸನ್ನಿವೇಶ. ಆತ ನೆಲಕ್ಕೆ ಬೀಳುವನು. ನುಗಿಸಿದವ ನುಗಿಸಿದ ರೀತಿಯಲ್ಲಿಯೇ ಬೊಂಬೆಯಂತೆ ನಿಂತುಕೊಳ್ಳಬೇಕು. ಮಂತ್ರಿಗಳವರು ಪೇಪರ ಓದುವ

ಮೂರ್ತಿಯಂತೆ ಕುಳಿತಿರಬೇಕು. ಶ, ಸ, ಷ ರು ಮೂರು ಜನ ಹಾಡನ್ನು ಹೇಳುವರು.)

ಶ ಸ ಷ : ಕಲ್ಲಿನ ಗೊಮ್ಮಟನೋ ನೀನು । ಹರಿದ
ತೊಗಲಿನ ತಮ್ಮಟೆಯೋ ನಾವು ॥ ಪಲ್ಲ ॥

ಹೊಡಿ ಹೊಡಿ ದೇಶದ್ರೋಹಿ
ಜೋಕುಮಾರ ಮಂತ್ರಿಗಳನ್ನ
ಜಂಗ ಹತ್ತಿದ ಸ್ವಾಮಿಗಳನ್ನ
ಧರ್ಮವಿಲ್ಲದ ನಮ್ಮ ಧರ್ಮಗುರುನಾ ॥*

(ಇದ್ದಕ್ಕಿದ್ದಂತೆ ಜನ ತಿರುಗಾಟ ಮತ್ತೆ ಪ್ರಾರಂಭವಾಗುತ್ತದೆ. ಜನರೊಂದಿಗೆ ಇವರೂ ಬೆರೆತು ಹೋಗುತ್ತಾರೆ. ಜನಸಂದಣಿಯಲ್ಲಿ ಜೇಬು ಕತ್ತರಿಸುವದು, ಸ್ತ್ರೀಯರ ಮೇಲೆ ಅತ್ಯಾಚಾರ ಸಾಧ್ಯವಾದಷ್ಟು ಪುಟ್ಟಿಗೆ ತೋರಿಸಬೇಕು ಹಿಂದೆ ವೀಕ್ಷಕ ವಿವರಣೆಯ ಧ್ವನಿ ಮುಂದುವರಿಯುತ್ತಿರಬೇಕು.)

ಧ್ವನಿ : ಅಭಿಷೇಕಕ್ಕೆ ಭಾರತೀಯರಷ್ಟೇ ಅಲ್ಲದೆ ಪರದೇಶದವರು ಇದರಲ್ಲಿ ಕೂಡಿದ್ದಾರೆ. ಕಷಾಯದ ಅಭಿಷೇಕ ನಡೆದಿದೆ ಈಗಂತೂ ಈ ಮೂರ್ತಿ ಪೂರ್ತಿಯಾಗಿ ಕಪ್ಪು ವರ್ಣದಲ್ಲಿ ಕಾಣತಾ ಇದೆ. ಅಭಿಷೇಕ ನಿಂತಾಗ ಮೂಗಿನಿಂದಾ ಬೀಳುವ ಒಂದೊಂದು ಹನಿ ನೀರು ಮುತ್ತುಗಳು ಉದುರುತಾ ಇವೆ ಏನೋ ಎನ್ನುವಂತೆ ಕಾಣತಾ ಇವೆ. ಈ ಹರಿದು ಹೋಗುವ ನೀರಿನಲ್ಲಿ ಜನ ಉರುಳಾಡಿ ಪಾವನವಾದೆವು ಎಂದು ಹೋಗುವಾಗ ಕೆಲವರು ಅರಿಷಿಣ ಬಣ್ಣ, ಕಪ್ಪು, ಕೇಸರಿ, ರಜತ ವರ್ಣದವರ ಗುಂಪು ಗುಂಪುಗಳಾಗಿ ಕಾಣತಾ ಇವಾರೆ. ಈ ದೃಶ್ಯವನ್ನು ಸೆರೆ ಹಿಡಿಯಲು ಟೆಲಿವಿಜನ್‌ನವರು ಬಂದಿದ್ದಾರೆ. ಹಾಂ, ಅಲ್ನೋಡಿ ಆ ಮುದುಕಿ ಕೊನೆಗೂ ಕಷ್ಟಪಟ್ಟು ಇಂದ್ರಗಿರಿಯನ್ನು ಏರಿ ಬಂದಳು. ಆಯಿತು. ಇನ್ನೇನು ಆಕೆಗೆ ಜಿನೇಂದ್ರನ ದರ್ಶನವಾದಂತೆಯೇ...... ಅಯ್ಯಯ್ಯೋ.. ಜನರ ಕಾಲಲ್ಲಿ ಸಿಗತಾ ಇದೆ. ಆ ಮುದುಕಿಗೆ ಸರಿಸಿ ಸರಿಸಿ.... ಅಯ್ಯೋ ಪಾಪ ನೆಲಕ್ಕೆ ಬಿತ್ತು... ತುಳದ್ರು, ತುಳದ್ರು.... (ಚೀರುವ ಧ್ವನಿ) ಪಾಪ ಮುದುಕಿ ಸತ್ತಳು ಅಂತಾ ಕಾಣುತ್ತೆ. (ದುಃಖದ ಧ್ವನಿಯಲ್ಲಿ) ಇಲ್ಲಾ ಅಜ್ಜಿ ಜಿನೇಂದ್ರ ದೇವನ ಪಾದವನ್ನು ಸೇರಿದಳು. ಇಂಥವರ ಸಾವು ಒಳ್ಳೆಯ ಸಾವು

---

* 'ಒಡೆದ ಕನ್ನಡಿ ಒಂದುಗೂಡಿಸಿ ಹೊತ್ತ ಹೊಂದುತನ ಹಾಡೂನ ಬಾರ' (ಡಾ. ಎಸ್. ಜಿ. ಇಮ್ರಾಪುರ)

ಎಂದೇ ಹೋಲಿಸಬೇಕು. ಅಭಿಷೇಕದ ನೀರಿನೊಂದಿಗೆ ಸತ್ತವರ ರಕ್ತವು ಒಂದು ಬಣ್ಣವಾಗಿ ಹರಿತಾ ಇದೆ (ಬೇರೆಯೊಬ್ಬರು ಬಂದು) ಏ ಅಂಥಾ ವಿಷಯವನ್ನು ಹೇಳಬೇಡ ವಾರ್ತೆಯಲ್ಲಿ (ಮುದುಕಿಯನ್ನು ಹೊತ್ತು ಒಯ್ಯುವರು).

ಈಗ ಅಷ್ಟಗಂಧಕದ ಅಭಿಷೇಕ ನಡೀತಾ ಇದೆ. ಅಭಿಷೇಕ ಮಾಡುವವರು ಎರಡು ಸಾವಿರಕ್ಕೂ ಮಿಕ್ಕಿ ಕೊಟ್ಟಿದ್ದಾರಂತೆ. ಜನರೆಲ್ಲಾ ಜಿನ ಮಂತ್ರವನ್ನು ಹೇಳುತ್ತಿದ್ದಾರೆ. ಪರದೇಶದವರು ಈ ಮಂತ್ರವನ್ನು ತಿಳಿಯದಿದ್ದರೂ ಅವರೊಂದಿಗೆ ಸೋ ಗೂಡಿಸುತ್ತಾ ಇದಾರೆ. ಹಾಂ ಈಗ ಅದನ್ನು ನೀವೇ ನೋಡಿ.

(ಗುಂಪಿನಲ್ಲಿ ಗುಜು ಗುಜು ಶಬ್ದ. ಮಂತ್ರ ಪಠಣ ನಡೆದಿರುತ್ತದೆ. ಈಗ ಅದು ಮತ್ತಷ್ಟು ತೀವ್ರವಾಗುವದು. ಆಗ ಇಬ್ಬರು ರೈತರು ಒಬ್ಬರಿಗೊಬ್ಬರು ಸಂದರ್ಶಿಸುತ್ತಾರೆ.)

ಜನ ಸಮೂಹ : ಣಮೋ ಅರಹಂತಾಣಂ
ಣಮೋ ಸಿದ್ಧಾಣಂ
ಣಮೋ ಆಯಾರಿಯಾಣಂ
ಣಮೋ ಉವಜ್ಝಾಯಾಣಂ
ಣಮೋ ಲೋಏ ಸಬ್ಬಸಾಹೂಣಂ

ಕ : ಅಯ್ಯ ಯಮುನಪ್ಪಣ್ಣಾ ಯಾವಾಗ ಬಂದಿ ?

ಯ : ಈಗ ಮುಂಜಾನೆ ಬಂದೆನ್ನೋಪ.

ಕ : ಏನ ಈ ಕಡೆ ಅಪರೂಪ, ನೀ ಇಲ್ಲಿ ಬರತೀ ಅಂತ ಕನಸಿನ್ಯಾಗೂ ಕಂಡಿರಲಿಲ್ಲ.

ಯ : ಅಯ್ಯೋ ಮಾರಾಯಾ. ನಾ ಎಲ್ಲಿ ಬರಾಕ ಹೋಗಲಿ, ರೈತ ಜಾತಾಕ ಹೋಗಿದ್ದೆ ವಾ. ಊರಿಗೆ ಹೋಗಬೇಕೆಂದ್ರ ನಮ್ಮ ಹಣೆಬಾರಕ ನಮ್ಮ ಹಳ್ಳಿಗೆ ಒಂದ ಬಸ್ ಇಲ್ಲಾ. ಬರೇ ಶ್ರವಣಬೆಳಗೊಳ, ತಿರುಪತಿ, ಧರ್ಮಸ್ಥಳ, ಮಂತ್ರಾಲಯ ಆ ದೇವರು–ಈ ದೇವರು ಅಂತ ನೂರಾ ಎಂಟು ಬಸ್ ಇಟ್ಟಾರ. ಅದೇ ಖಾಲಿ ಹೊಂಟಿದ್ದಂವಾ, ಹತ್ತಿ ಬಂದ್ಯಾ ನೋಡ ಇಲ್ಲಿಗೆ.

ಕ : ಅಲ್ಲಾ ನೀನು ರೈತ ಜಾತಾಕ ಹೋಗಿದ್ಯಾ ? ಹೆಂಗಿತ್ತು ?

ಯ : ಯಾಕ ಪೇಪರನ್ಯಾಗ ಏನೂ ಕೊಟ್ಟಿದ್ದಿಲ್ಲೇನು ?

ಕ : ಪೇಪರನ್ಯಾಗ ನಿಮ್ಮ ಬಗ್ಗೆ ಕೊಟ್ರ ಅಲ್ಲಾ ನಾವು ಓದೂದು ?

ಯ : ಹೌದು. ಅವರದು ಖರೆ ಐತಿ. ಹೆಬ್ಬಟ್ಟಿನ ಮಂದಿ ನಾವು, ಕೂಳಿಗಿ ಗತಿ ಇಲ್ಲದವರು. ನಮ್ಮ ಸುದ್ದಿ ಅವರ್ಯಾಕ ಕೊಟ್ಟಾರು ?

ಕ : ಹಾಂ, ಅಂದಾಂಗ ಮಂತ್ರಿ ಏನ ಹೇಳಿದ್ದರಂತ ? ಅದು ರೈತ ಜಾತಾ ಅಲ್ಲಾ, ರೈತರ ಸೋಗ ಹಾಕಿದ್ದ ಬಾಡಿಗಿ ಮಂದಿ ಐತಿ ಅಂತ ಕೊಟ್ಟಿದ್ರು.

ಯು : ಹಾಂ. ಅದೇ ಅಪಾ ರೊಟ್ಟಿ ಒಗದ ಕಡೆ ನಾಯಿ ಹೋಗುದು ಚಟಾ.

ಕ : ಇರಲಿ ಬಿಡು, ನಮ್ಮ ಹಣೆಬರಹ ಅದು. ಊರ ಕಡೆ ಮಳಿ ಬೆಳಿ ಹ್ಯಾಂಗ ಪಾಡದವಾ ?

ಯು : ಮಾರಾಯ ಊರಾಗ ಮಳಿ ಇತ್ತಂದ್ರ ನಾಯಕ ಹಿಂಗ ಕೌಳಿ ಹತ್ತಿದ ನಾಯಿಯಂಗ ತಿರಗ್ಯಾಡತಿದ್ವ್ಯಾ. ಮಳಿ ಇರಲಾರದಕ ನೆಲಾ ಎಲ್ಲಾ ಎರಕಬಿಡಿ ಬಿಡಾಕತ್ಯಾವ. ಎಲ್ಲಿ ನೋಡಿದ್ರೂ ಹಸರ ಕಾಣವಲ್ತು, ದನಾ ಕರಾ ಎಲ್ಲಾ ಸತ್ತ ಸತ್ತ ಬೀಳಾಕತ್ಯಾವ, ರಣಹದ್ದು, ಕಾಗಿ ಅದರ ಮ್ಯಾಗ ಹಾರ್‍ಯಾಡಕ ಹತ್ಯಾವ, ನಾಯಿ ರಾತ್ರಿ-ಹಗಲು ಗೊಳೋ ಅಂತ ಅಳತಾವ. ಇನ್ನ ನಮ್ಮ ಪರಿಸ್ಥಿತಿ ಕೇಳತ್ಯಾ. ಅಗಾ.....

(ಇದ್ದಕ್ಕಿದ್ದಂತೆ ಎಲ್ಲ ಜನ ಸರಿದು ಬಿಡುತ್ತಾರೆ. ಕ, ಮು, ರು ಹೋಗುತ್ತಾರೆ. ಶ, ಸ, ಷ ರು ಮಾತ್ರ ಬಂದು ತಮ್ಮ ಸ್ಥಾನದಲ್ಲಿ ಯಥಾ ಪ್ರಕಾರ ನಿಂತುಕೊಳ್ಳುತ್ತಾರೆ. ನಾಯಿ ಬೊಗಳುವದು, ಕಾಗೆ, ಆಕಳು ಒದರುವದು ತೋರಿಸಬೇಕು. ಒಂದು ಕಡೆಯಿಂದ ಒಬ್ಬ ನೀರು ಹೊತ್ತುಕೊಂಡು ಬರಬೇಕು. ಮೂರು ಜನ ಮೊದಲು ಅಲ್ಲಿಯೇ ಕುಳಿತಿರಬೇಕು. ನೀರಿನ ಬಿಂದಿಗೆಯ ತಂದಾಕ್ಷಣ)

ವು : ಯಪ್ಪಾ ನನಗ ನೀರು.
ಯಣ್ಣಾ ನನಗ ನೀರು.
ಕಾಕಾ ನನಗ ನೀರು.
(ಮೂವರು ಒಬ್ಬರ ಮೇಲೊಬ್ಬರಂತೆ ಬಿದ್ದು ಬಿಂದಿಗೆಯನ್ನು ಹೊತ್ತಿನಲ್ಲಿ ಜಗಳಾಡಬೇಕು.)

ಜಾ : (ನೀರು ಹೊತ್ತವ) – ಏ, ಜಗ್ಯಾಡ ಬ್ಯಾಡ್ರಲೇ. ಮದಲ ಮಣ್ಣಿನ ಬಿಂದಗಿ, ಒಡದ ಮೂರು ತುಣಕಾಗದ್ಹಂಗ ಇದ್ದಸ ನೀರು ಮಣ್ಣು ಪಾಲಾಗದ್ಹಂಗ. ಸರಿ. ದೂರ ಸರಿ. ನಾ ಹಾಕಿ ಕೊಡತೀನಿ.

ವು : ಯಪ್ಪಾ ನಾನು ಮೈ ತಕ್ಕೋತ್ತೀನಿ.

ಜಾ : ಮಗನ, ಕುಡ್ಯಾಕ ನೀರಿಲ್ಲದ ಹೊತ್ತಿನಾಗ ಮೈ ತಕ್ಕೋತಾನಂತ. ಅರವಿ ತುಂಬಾ ತೊಯ್ಸಿ ಕೊಡತೀನಿ. ಒದ್ದೆ ಅರವಿಲೆ ಒರಸಿಕೊಳ್ಳುವಿಯಂತೆ.

ವು : ಪಿಸ್, ನಾ ಒಲ್ಯಾ.

ಜಾ : ಒಲ್ಯಾ ಅಂದರ ಹೋಗು ನಡಿ ಮಗನಾ.....

(ಕೊನೆಗೆ 'ವ' ಅರವಿ ತಂದು ಕೊಡುವನು. 'ಜಾ' ತೊಯ್ಸಿ ಕೊಟ್ಟಾಗ ಹಸಿ ಅರಿವೆಯಿಂದ ಕೈ ಕಾಲು ಒರೆಸಿಕೊಳ್ಳುತ್ತಿರಬೇಕು. 'ಊ' ಹೊರಗಿಂದ ಮೂಗು ಮುಚ್ಚಿಕೊಂಡು ಅಂಗಿ ಎತ್ತಿ ಹಿಡಿದು ಕುಂಟುತ್ತ ಬರಬೇಕು.)

ಊ : ಯಣ್ಣಾ, ಹುಡುಗಾ ಮೈಯ್ಯಾಗ ಹೇಸಿಗಿ ಮಾಡ್ಯೇತೆಪಾ. ನೀರು ಹಾಕು.

(ಜಾ ತಂಬಿಗೆಯಲ್ಲಿ ನೀರು ಕೊಡುವನು. ನೀರು ತಂದು ಕೈಗೆ ಹತ್ತಿದ ಹೇಸಿಗೆ ತೊಳೆಯಲು ನೀರು ಹಾಕುವನು.)

ಜಾ : ಹಂಗ ತೊಳಕೊಳ್ಳಾಕತ್ತೀನೊ. ಅದರ ಬುಡಕ ಒಂದು ತಾಟ ಇಡ್ರಿ : ಅದೇ ನೀರು ದನ ಕರ ಕುಡಸಾಕ ಬರತಾವು.

(ಎಂದು ಹೇಳಿ ತಾನೇ ಒಂದು ತಾಟನ್ನು ತಂದು ನೀರು ಹಿಡಿಯಲು ಕೊಡುವನು. 'ಊ' ನೀರು ಹಾಕುತ್ತಿರುವನು. 'ಊ' ತೊಳೆದುಕೊಳ್ಳುತ್ತಿರುತ್ತಾನೆ. 'ಜಾ'ನು ಒಂದು ಆಕಳ ಎಳೆದು ಕೊಂಡು ಬರುತ್ತಾನೆ. [ಒಬ್ಬ ಬಗ್ಗಿದ ವ್ಯಕ್ತಿ ಹಿಡಿದುಕೊಂಡು ಬರಬೇಕು] ಆಕಳಂತೆ ಒದರುತ್ತಿರಬೇಕು.)

ಜಾ : ಸ್ವಲ್ಪ ಬ್ಯಾರೆಯವರ ಮನ್ಯಾಗ ಹೋಗಿ ನೋಡಿ ಬರ್ರಿ. ಹೊರಸಿನ ಮ್ಯಾಗ ಕುಂತು ಕೆಳಗ ಪರಾತ ಇಟ್ಟು ಜಳಕಾ ಮಾಡಿ ಅದರ ನೀರು ದನಕ ಕುಡಸ್ತಾರ. ನೀರಿನ ಬರಾ ಎಷ್ಟೈತಿ ಅನ್ನೋದು ನಿಮಗ ಇನ್ನೂ ತಿಳಿವಲ್ದಲ್ಲ.

(ಒಮ್ಮೆ ಅರಿವೆಯಿಂದ ಕೈ ಒರೆಸಿಕೊಳ್ಳುತ್ತಿರುವವ ಒರೆಸಿಕೊಳ್ಳುತ್ತಲೇ ಇರಬೇಕು. ಕೈ ತೊಳೆದುಕೊಳ್ಳುವವ ತೊಳೆದುಕೊಳ್ಳುತ್ತಲೇ ಇರಬೇಕು. ನೀರು ಹಾಕುವವ ಒಂದು ಕೈಯಿಂದ ನೀರು ಹಾಕುತ್ತ, ಒಂದು ಕೈಯಿಂದ ಬೀಳುವ ನೀರನ್ನು ತಾಟಿನಲ್ಲಿ ಹಿಡಿಯುತ್ತಿರುತ್ತಾನೆ. 'ಜಾ' ಆಕಳು ತರುವ ಸನ್ನಿವೇಶ. ಇದೇರೀತಿ ಎಲ್ಲರೂ ಬೊಂಬೆಯಾಕಾರದಲ್ಲಿ ನಿಂತುಕೊಳ್ಳಬೇಕು. ಸಂದರ್ಭಕ್ಕೆ ತಕ್ಕಂತೆ 'ಶ. ಸ. ಷ'ರು ವಿಡಂಬನ ಮಾಡಿ ಮುಗಿಸಿ ಇವರು ಹೀಗೆ ನಿಂತಾಗ ಹಾಡು ಹೇಳಲು ಪ್ರಾರಂಭಿಸಬೇಕು.)

ಶ ಸ ಷ : ಕಲ್ಲಿನ ಗೊಮ್ಮಟ ನೀನಾದೆಯೋ । ಹರಿದ
ತೊಗಲಿನ ತಮ್ಮಟೆ ನಾವಾದೆವೋ

ಒಕ್ಕಲ ಗೇರ್‍ಯಾಗ ಮಳಿರಾಜ । ಅವರು
ಮಕ್ಕಳ ಮಾರ್‍ಯಾರೊ ಮಳಿರಾಜ
ಮಕ್ಕಳ ಮಾರಿ ರೊಕ್ಕಾ ಹಿಡಕೊಂಡು
ಭತ್ತಂತ ತಿರುಗ್ಯಾರೊ ಮಳಿರಾಜ ॥ ೧ ॥
ಹಾರೋರ ಕೇರ್‍ಯಾಗ ಮಳಿರಾಜ । ಅವರು
ನಾರೇರು ಪಡದಾರು ಮಳಿರಾಜ
ಪಡದಂಥ ಮಕ್ಕಳನ ಹರಕೊಂಡ ತಿಂದರ
ಹೊಟ್ಟಿ ಹಸುವ ನೀಗಲಿಲ್ಲ ಮಳಿರಾಜ* ॥ ೨ ॥

(ಹಾಡು ಮುಗಿಯುವದರೊಳಗಾಗಿಯೇ ಮಂತ್ರ ಜನ ತಿರುಗಾಡಲು ಪ್ರಾರಂಭವಾಗಬೇಕು. ಗುಜು ಗುಜು ಸಪ್ಪಳ. ಸಿಡಿಲು ಸಿಡಿದಂತೆ ಒಮ್ಮೆಲೇ ಸಪ್ಪಳ-ಗಾಳಿ. ಮಳೆ. ಒಮ್ಮಿಂದೊಮ್ಮೆಲೇ ಇಂದ್ರಗಿರಿಯ ಮೇಲೆ ನಿಂತ ಕಲ್ಲುಗೊಮ್ಮಟ ತಲೆಯಾಡಿಸಿ ಕೆಳಗಿಳಿದು ಬರುತ್ತಾ)

ಗೊಮ್ಮಟ : ಸಾಕು ನಿಲ್ಲಿಸಿ ಹಾಡನ್ನ— ನಾನು ಒಂದು ಕಾಲದಲ್ಲಿ ನ್ಯಾಯ, ನೀತಿ, ಧರ್ಮ ಅಂತ ಹೋರಾಡಿದವನು. ಆದರೆ ಇಂದು....., ಕಲ್ಲುಮೂರ್ತಿಯನ್ನಾಗಿ ಮಾಡಿ ನಿಲ್ಲಿಸಿದವರು ನೀವು. ಕಲ್ಲುಮೂರ್ತಿಯ ಮೇಲೆ ಕೋಟಿಗಟ್ಟಲೇ ಹಣ ಖರ್ಚು ಮಾಡಿ ಅಭಿಷೇಕ ಮಾಡಿರೆಂದು ನಾನು ಹೇಳಿದ್ದೆನೆ ?

ಎಷ್ಟೋ ಹಳ್ಳಿಗಳಲ್ಲಿ ಬರಗಾಲದಿಂದ ಹೈರಾಣಾಗಿ ಗೋಳಾಡುತ್ತಿದ್ದರೂ, ನನ್ನ ಮೇಲೆ ವ್ಯರ್ಥವಾಗಿ ಹಾಲು ತುಪ್ಪ ಕಷಾಯ ಸುರಿಯುತ್ತಿರುವಿರಲ್ಲ. ಮನುಷ್ಯರ ಮನುಷ್ಯತ್ವವನ್ನು ಅರಿಯದ ಪಶುಗಳಂತೆ ವರ್ತಿಸುತ್ತಿದ್ದೀರಲ್ಲಾ ?

ನೀವು ಅಭಿಷೇಕ ಮಾಡುತ್ತಿರುವುದು ನನಗಲ್ಲಾ, ನೆಲಕ್ಕೆ. ನನಗೆ ಬೇಕಾದುದು ನಿಮ್ಮ ಭಕ್ತಿಯಲ್ಲ. ನೈವೇದ್ಯವಲ್ಲ. ಅಭಿಷೇಕವಲ್ಲ. ನಿಮ್ಮ ಸ್ವಾರ್ಥಕ್ಕಾಗಿ ಮುಗ್ಧಜನರ ಮನಸ್ಸನ್ನು ಬಲಿಕೊಟ್ಟು ಹಣ ದೋಚುವುದೇಕೆ ?

ದೇವರ ಹೆಸರಿನಲ್ಲಿ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ, ವಂಚನೆ ನಡೆದರೂ ಕಣ್ಣು,ಬಾಯಿ,ಕಿವಿ ಮುಚ್ಚಿಕೊಂಡು ಸುಮ್ಮನೆ ಕೂತಿದ್ದೀರಲ್ಲಾ. ನೀವೇನು ಮಾನವರೋ ಅಥವಾ ಎರಡು ಕಾಲಿನ ಪಶುಗಳೋ ? ನೀವು ಜೀವವುಳ್ಳವರು, ಬುದ್ಧಿಬಲ ಉಳ್ಳವರು, ವಿಚಾರವಂತರು. ಕಣ್ಣಿಗೆ ಕಂಡದ್ದನ್ನು ಕಿವಿಗೆ ಕೇಳಿದ್ದನ್ನು ಪ್ರತಿಭಟಿಸಿ. ಪ್ರತಿಭಟಿಸಿರೆಂದು ಹೇಳುವುದಕ್ಕಾಗಿಯೇ ಈ ಮಹಾಮಸ್ತಕಾಭಿಷೇಕ ಮಾಡಿದಂತೆ

* ಪಲ್ಲ ಬಿಟ್ಟು, ಉಳಿದೆರಡು ನುಡಿಗಳನ್ನು ಜನಪದ ಸಾಹಿತ್ಯದಿಂದ ಎತ್ತಿಕೊಳ್ಳಲಾಗಿದೆ.

ತೋರುವುದು. ಕಲ್ಲುಗೊಂಬೆಯಾದ ನಾನು ಹೇಳುತ್ತಿದ್ದೇನೆ. ಏಳಿ, ಈಗಲಾದರೂ ಜಾಗೃತರಾಗಿ, ಜಾಗೃತರಾಗಿ.

(ಕೆಲವು ಜನ (ಮಂತ್ರಿಗಳು) ಎಲ್ಲಿ ಹೋದ ಗೊಮ್ಮಟ ? ಎಂದು ಟೇಬಲ್ಲಿನ ಕೆಳಗೆ, ಚಾದರ ಕೆಳಗೆ ಹುಡುಕುತ್ತ ನಡೆಯುವರು. ಮುಂದೆ ಸರಿದ ಜನರಲ್ಲಿಯೇ ಗೊಮ್ಮಟ ನಿಂತಿರುತ್ತಾನೆ. 'ಶ ಸ, ಷ' ಮೂಗು ಬಾಯಿ ಕಿವಿ ಬಿಟ್ಟು ಗೊಮ್ಮಟನೊಂದಿಗೆ ಬೆರೆತಿರುತ್ತಾರೆ. ಇದ್ದಕ್ಕಿದ್ದಂತೆ ಸ್ತಬ್ಧ)

ಮಂತ್ರಿ : ('ಶ'ನನ್ನು ನೋಡಿ)— ಓಹೋ ಇಲ್ಲಿ ಇದ್ದಾನೆ ಗೊಮ್ಮಟ.
('ಸ'ನನ್ನು ನೋಡಿ) — ಇವನೂ ಹಾಗೇ ಕಾಣುವನಲ್ಲ.
('ಷ'ನನ್ನು ನೋಡಿ)— ಅರೆರೆ! ಇವನೂ ಗೊಮ್ಮಟನೇ. ಇದರಲ್ಲಿ ಯಾರು ಗೊಮ್ಮಟ? ಯಾರೆಂದು ಹೇಳಲಿ ಬಾಹುಬಲಿ? ಯಾರೆಂದು ಹೇಳಲಿ ?

('ಶ, ಸ, ಷ' ಬಾಹುಬಲಿ ಎಲ್ಲರೂ ಸೇರಿಯೇ)

ಹೌದು ನಾವೆಲ್ಲ ಬಾಹುಬಲಿಗಳೇ (ಕೈ ಮೇಲೆ ಎತ್ತುವರು)
ಈಗ ನಾವು ಕಲ್ಲಿನ ಗೊಮ್ಮಟಗಳಲ್ಲ. ಹರಿದ ತೊಗಲಿನ ತಮ್ಮಟೆಗಳಲ್ಲ. ಜ್ಞಾನೋದಯವಾದ ಅಜ್ಞಾನಬಾಹುಬಲಿಗಳುಳ್ಳ ಬಾಹುಬಲಿಗಳು ನಾವು. ಇಷ್ಟು ದಿನ ಕಣ್ಣಿದ್ದೂ ಕುರುಡರಂತೆ, ಕಿವಿಯಿದ್ದೂ ಕಿವುಡರಂತೆ, ಬಾಯಿದ್ದೂ ಮೂಕರಂತೆ ನಡೆದೆವು. ಈಗ ನಿಮ್ಮ ದಬ್ಬಾಳಿಕೆ, ದೌರ್ಜನ್ಯ, ಮೋಸ, ವಂಚನೆ ನಡೆಯದು. ಈಗ ನಾವು ನಿಮ್ಮ ಕಲ್ಲಿನ ಗೊಮ್ಮಟಗಳಲ್ಲ. ಬಾಹುಬಲಿಗಳು. ನಾವು ಬಾಹುಬಲಿಗಳು. ಈಗ ನಾವು ನಿಮ್ಮನ್ನು ಕಲ್ಲುಗೊಮ್ಮಟಗಳಾಗಿ ನಿಲ್ಲಿಸಿ ಲಾಲಾರಸಾಭಿಷೇಕ ಮಾಡುತ್ತೇವೆ! ಲಾಲಾರಸಾಭಿಷೇಕ ಮಾಡುತ್ತೇವೆ!
(ಒಮ್ಮತ್ತಲೇ ಅಲ್ಲಿಂದ ಹೊರಗೆ ಬರುವರು)

□ □

# ಭ್ರೂಣಗಳು

**● ಪ್ರೇಮಾ ಬರ್ರೋಟ**

ಭ್ರೂಣಗಳು ಬೆಳೆಯುತ್ತಿವೆ !
ಅಲ್ಲಲ್ಲ ಬೆಳೆಸುತ್ತಿದ್ದಾರೆ.
ಬೆಳೆಸಿ ಹಿಚುಕುತ್ತಿದ್ದಾರೆ
ಕೊಳಕು ಹುಳುಕನ್ನೆಲ್ಲ ತುಂಬುತ್ತಿದ್ದಾರೆ
ತಮ್ಮ ಹೊಲಸನ್ನೇ ಮೆತ್ತುತ್ತಿದ್ದಾರೆ.
ಅದಕ್ಕೆ ಅರಿವಿಲ್ಲ
ಈ ವಿಕೃತಸಮಾಜದ ಪರಿಚಯವಿಲ್ಲ
ತುಂಬಿದ್ದನ್ನೆಲ್ಲ ತುಂಬಿಸಿಕೊಳ್ಳುತ್ತಿವೆ
ದಿನದಿನಕ್ಕೆ ಪುಷ್ಟಗೊಳ್ಳುತ್ತಿವೆ
ಮತ್ತೆ, ಹೊಸಭ್ರೂಣಗಳ ತಯಾರಿಗಾಗಿ
ಬೆಳೆಯುತ್ತಿವೆ. ಬೆಳೆಯುತ್ತಿವೆ.

□ □

## ಸೀನು

**● ಗಂಗು ಮೂಲಿಮನಿ**

ಸೀನಪ್ಪ : ನೀನು ಯಾವಾಗ್ಬರೇನು, ಬಂದೇ ಬರುವೆ. ನನಗೆ ಹೆದರಿಕೆ ಏನು ಅಂತಿ ಕ್ಲಾಸಿನ್ಲ್ಲಿ ಸರ್ ಪಾಠ ಮಾಡುವರು. ಬರಬ್ಯಾಡ ಹೋಗು. ಸುಮ್ಮನೇ ತೊಂದರೆ ಯಾಕೆ ಕೊಡಬೇಡಾ. ಬರಬ್ಯಾಡ ಅಂದ್ರ ಮುಂದ್ಯಾಕ ನನ್ನ ಪರೀಕ್ಷಾ ಮಾಡಕ್ಕ ಬರ್ತೀ. ನಾನು ನಿನ್ನ ತೊಂದರೆ ಎಷ್ಟಂತಾ ಸಹಿಸಿಕೊಳ್ಳಲಿ ? ಬ್ಯಾರೆ ಬ್ಯಾರೆ ಹುಡುಗೂರು. ನಮ್ಮ ಬಾರ್ಕೆ ಬ್ಯಾರೆ ಸರ್‌ಗಳು ನಿನ್ನ ಅಭ್ಯಾಗಮನ ಎಷ್ಟೊಂತ ಸಹಿಸಿಯಾರು ? ನನಗಂತೂ ತ್ರಾಸ ಕೊಟ್ಟು ಕೊಡತಿ, ಬ್ಯಾರೆದವರಿಗೂ ಕೊಡುವದೇ ? ನನಗಂತೂ ನೀ ಬರುವದು ಸೇರುವದಿಲ್ಲ.

ಸೀನಪ್ಪ, ನೀ ಹ್ಯಾಂಗ ಬರತಿ ಹೇಳಿ ಬಾ. ವೇಳೆ ಬದಲಾಯಿಸಿ ಬರಬೇಡ. ಒಮ್ಮೆಲೇ ಬಂದಿ ಅಂದರ ಕುದುರಿ ಸವಾರಿ ಕತ್ತಿ, ಢಾಲು ಹಿಡಿದು ಸೈನ್ಯವನ್ನು ಬಡಿಯಿಸಲು ಹೊರಟಾವರಂಗ ಬರ್ತೀ. ಕಾಳಗ ಮಾಡಿ, ಪ್ರತಿಧ್ವನಿ ಎಬ್ಬಿಸಿ ಕ್ಲಾಸಿನಲ್ಲಿ ಸೀರೆದು ತಂಪ ಮಾಡಿ, ಒಂದ ನಿಮಿಷ ಮೌನ ಆಚರಿಸಿ ಎಂದು ಹೇಳಿ ಹೊರಟಾಂಗ ಮಾಡ್ತಿ.

ಜೊತೆಗೆ ನಿಮ್ಮ ಗೆಳೆಯಾ ಕೆಮ್ಮಪ್ಪನ್ನೂ ತಂದಿರತೀ. ಕೆಮ್ಮಪ್ಪಂತೂ ಗುಡುಗಿದ್ಹಾಂಗ ಗದ್ದರಿಸುತ್ತಾ ಬರತಾನ. ಇಬ್ಬರೂ ಹ್ಯಾಂಗ್ ಅಂದ್ರ; ಕೃಷ್ಣಾರ್ಜುನರಿದ್ಹಾಂಗದೀರಿ. ನೀವಿಬ್ರು ಬಂದರ ನಮ್ಮ ಸರ್ ಹೆದರಿ, ಪಾಠ ಹೇಳೋದೋ ಅಥವಾ ಮನೀಗ್ಹೋಗೋದೋ ಅನ್ನಾವರಂಗ ನಿಂತಿರ್ತಾರ.

ಸೀನಪ್ಪ ಕೆಮ್ಮಪ್ಪ ಬಂದರಂದ್ರ ಕುಸ್ತಿ ಕಣ ಏರ್ಪಾಟ ಮಾಡ್ಯಾರೇನೋ ಅನ್ನಾವರಂಗ ಇಬ್ಬರೂ ಕುಸ್ತಿ ಆಡಿ, ನಾ ಮುಂದೆ ನೀ ಮುಂದೆ ಎಂದು ಗೆದಿಯುವ ಮಾತಂತೂ ಸುಳ್ಳೇ ! ಎಲ್ಲದರಲ್ಲೂ ಸೀನಪ್ಪನ ಧಿಮಾಕವೆ ಜಾಸ್ತಿ.

ಸೀನಪ್ಪ ನೀ ಹಿಂಗ ಬರಾಕ ನಾಚಿಗಿ–ಗೀಚಗಿ ಎಲ್ಲಾದರೂ ಇಟ್ಟಗಿಟ್ಟ ಬಂದಿಯೇನು ಅಂತ ನನಗನಸ್ತದ.

ಒಂದ ಸಲ ಡಾಕ್ಟರಿಗೆ ಮದುವೆ ಮಾಡಿ ಕೊಟ್ಟೆವೆಂದರ ನಿನಗ ಗೊತ್ತಾಗತೈತಿ. ಯಾಕಂದರ ಎಲ್ಲರಿಗೂ ನಿನ್ನ ತ್ರಾಸು ಬಹಳ ಆಗತೈತಿ. ಅವರಾದರೇ ಚುಚ್ಚುಮದ್ದಿನಿಂದ ನಿನ್ನ ವಾಸಿ ಮಾಡತಾರ.

ನೀ ಬಂದಿ ಅಂದರ ನನಗಂತೂ ಮೈಯೆಲ್ಲೆಲ್ಲ ನಡುಕು. ಆಗ ಎಲ್ಲರೂ ನನ್ನ ನೋಡತಾರ. ಬರಬೇಡ, ಕಾಲಬೀಳತೇನಿ. ನೀ ದೊಡ್ಡದೇವರಲ್ಲಾ ?

ನೀ ಎಲ್ಲಿ ಬರೋದಿಲ್ಲ ? ಬಂದs ಬರ್ತಿ. ಹಾದಿ ಅನ್ನೂದಿಲ್ಲ, ಬೀದಿ ಅನ್ನೂದಿಲ್ಲ, ಮನಿಮಾರ ಅನ್ನೂದಿಲ್ಲ, ಕ್ಲಾಸಗೀಸ್ ಅನ್ನೂದಿಲ್ಲ ಎಲ್ಲಾ ಕಡೆ ಬರಬಾರದು ಅಂತ ನಿನಗ ಹೆಂಗ ತಿಳಿಯೂದಿಲ್ಲಾ ?

ನನ್ನ ಮರ್ಯಾದಿ ಎಲ್ಲಾ ಕಡೆ ತಗೀತಿ. ಹೊತ್ತನೂ ಗೊತ್ತಿಲ್ಲ. ಆದರ ಮಹತ್ವಾನೂ ನಿನಗ ಗೊತ್ತಿಲ್ಲ.

ನನ್ನ ಎಲ್ಲಿ ಬೇಕ ಅಲ್ಲಿ ಮಾಡ್ತಿ. ನೀನು ನಿರಪರಾಧಿ ಅಂತ ನನಗೊತ್ತ. ಆದರೆ ನನಗೆ-ನಿನಗೆ ಪೂರ್ತಿ ಬಿಡುಗಡೆ ಅನ್ನುವದೇ ಇಲ್ಲ.

ಇಬ್ಬರೂ ಕೂಡಿ ನಾ ಮುಂದೆ ಹೋಗಲೋ ನೀ ಮುಂದೆ ಹೋಕ್ಕಿಯೋ ಅಂತ ವಿಚಾರ ಮಾಡಿಕೊಂಡು ಬರ್ತೀರೇನೋ ? ಎಲ್ಲರಿಗೂ ಒಂದು ರೀತಿಯಿಂದ ನೀವು Head-ache ಆಗೀರಿ. ಆದರೂ ನೀವು 'ಚಿರನೂತನ'ರು.

ಆದರೆ ಅದು ನಿಮ್ಮ ತಪ್ಪುತಿಳುವಳಿಕೆ. ಸೀನು, ಕೆಮ್ಮು ಇದ್ದವರೆಲ್ಲಾ ಮುದುಕರಲ್ಲಾ. ಅದು ಎಲ್ಲರಿಗೂ ಇರಬಹುದು.

ಎಲ್ಲಾ ವಯಸ್ಸಿನವರೂ ನಿಮ್ಮ ದಬ್ಬಾಳಿಕೆ ತಡಕೋಬೇಕಲ್ಲ? ನೀವಿಬ್ಬರು ಹೆಚ್ಚಿ ಗದ್ಲಾ ಮಾಡಾಕತ್ತರೆಂದ್ರ ಅದಾವಲ್ಲಾ 'ಸರಕಾರಿ ಆರೋಗ್ಯ ಕೇಂದ್ರ'. ಅಲ್ಲಿಯೇ ನಿಮ್ಮನ್ನು ಇಟ್ಟರಾಯಿತು.

ಸೀನಪ್ಪ, ಬರಬೇಡ. ಸರ್ ಇದ್ದಾರ. ಕ್ಲಾಸಿನಲ್ಲಿ ಪಾಠ ಮಾಡಾಕತ್ತಾರ. ನಿನ್ನ ಅಟಂಬಾಂಬಿನ ಅಸಹ್ಯತನಾ ಪ್ರದರ್ಶನ ಮಾಡಿ ಹೋಗಬೇಡಾ.

ನಮ್ಮ ದೇಶದ ಮಹಾಪುರುಷರು ಸತ್ತಾಗ ಮೌನ ಆಚರಿಸಿ, ನಾ ಬಂದಾಗ ಯಾಕ ಆಚರಿಸಬಾರದು ಅಂತಿಯೇನು ?

ಮುಂದ ಸರ್ ಪಾಠ ಮಾಡ್ತಾರ. ಹುಡುಗರು ಹಿಂದ ಪಾಠ ಕೇಳ್ತಾರ ಎಂದ ಹೇಳಿ, ಹಿಂದಿನ ಬಾಗಲ್ಲೆ ಟಾಟಾ ಮಾಡಿ ಬೈ ಬೈ ಹೇಳಿ ಹೊರಟ ಹೋಗಿ ಬಿಡ್ತಾನ ಸೀನಪ್ಪ.

ನೀನಂತೂ ಓಡಿ ನನ್ನ ಕಂಗಾಲ ಎಬ್ಬಿಸಿ ಹೋಗತಿ. ಆದರೆ ನನಗ ಬಿಡುಗಡೆ ಅನ್ನುವುದೇ ಇಲ್ಲಾ.

□ □

# ಕುವೆಂಪು ಚಿತ್ರಿಸಿದ ದ್ರೋಣ

● ವಿಜಯಲಕ್ಷ್ಮಿ ಒಡುಗೌಡರ

ದ್ರೋಣರ ಈ ಪಾತ್ರಚಿತ್ರಣವನ್ನು ರಾಷ್ಟ್ರಕವಿ ಕುವೆಂಪುರವರ "ಬೆರಳ್‌ಗೆ ಕೊರಳ್" ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಮಹಾಭಾರತದ ಮಹಾಸಾಗರದಲ್ಲೊಂದು ಹನಿಯಾಗಿ, ಅಲ್ಲಿಯ ಕೋಲಾಹಲದ ನಡುವೆ ಸುಳಿದು ಮರೆಯಾಗುವ ಏಕಲವ್ಯನ ಉಪಾಖ್ಯಾನ ಇಲ್ಲಿ ದಾರ್ಶನಿಕ ನಾಟಕವಾಗಿ ಪರಿಣಮಿಸಿದೆ. ಅಲ್ಲಿ ಇಂಗಿತವಾಗಿ ಅಪ್ರಕಟಿತ ರೂಪದಲ್ಲಿರುವ ಮಹಿಮೆ ಇಲ್ಲಿ ಸುಪ್ರಕಟವಾಗಿ ತನ್ನ ಉನ್ನತಾವಸ್ಥೆಯಲ್ಲಿ ಗೋಚರವಾಗುತ್ತದೆ. ಗುರುಶಿಷ್ಯ ಸಂಬಂಧವಾದ ತತ್ತ್ವ, ಕರ್ಮತತ್ತ್ವ ಮತ್ತು ಸಮರ್ಪಣರೂಪವಾದ ಯಜ್ಞತತ್ತ್ವಗಳು ಇಲ್ಲಿ ಪ್ರತಿಮಾವಿಧಾನದಿಂದ ಧ್ವನಿತವಾಗಿವೆ. ಈ ತತ್ತ್ವಗಳು ಏಕಲವ್ಯ ದ್ರೋಣರ ಮುಖಾಂತರ ತಲೆದೋರಿದ್ದರೂ ಅವು ವ್ಯಕ್ತಿತ್ವಕ್ಕೆ ಅತೀತವಾಗಿ ನಿತ್ಯವಾದವು. ಈ ತತ್ತ್ವ ಪ್ರಕಟಿಸುವುದರಲ್ಲಿ ಅವು ವಿಶಿಷ್ಟಪಾತ್ರಗಳು.

ಇಲ್ಲಿ ದ್ರೋಣರು ಕರುಣಾಮಯಿಯಾಗಿ ಕಂಡಿದ್ದಾರೆ. ಆದರೆ ಮೂಲಕಥೆಯಲ್ಲಿ ದ್ರೋಣರಿಷ್ಟು ವಾತ್ಸಲ್ಯಮೂರ್ತಿಯಾಗಿ ಕಂಗೊಳಿಸಿಲ್ಲ. ಕುವೆಂಪುರವರು ದ್ರೋಣರ ಅಂತರಂಗ ತುಮುಲವನ್ನು ತುಂಬ ಮನೋಜ್ಞವಾಗಿ, ಹೃದಯ ತಟ್ಟುವಂತೆ ಚಿತ್ರಿಸಿದ್ದಾರೆ. ಅವರಿಗೆ ಮಗನ ಮೇಲಿರುವ ಅಮಿತ ಪ್ರೀತಿಯನ್ನೂ, ನಿರಪರಾಧಿ ವ್ಯಾಧ ಬಾಲಕನೋರ್ವನ ಭವಿಷ್ಯ ನಾಶಪಡಿಸುವದನ್ನೂ, ಅರ್ಜುನನ ಹೆಸರಿನ ದಾಹವನ್ನೂ, ತಮ್ಮ ವಿಧಿಯನ್ನು ಹಳಿದುಕೊಳ್ಳುತ್ತಿರುವ ದೃಶ್ಯವನ್ನೂ ತುಂಬ ಮನೋಜ್ಞವಾಗಿ ನಿರೂಪಿಸಿದ್ದಾರೆ. ಇಲ್ಲಿ ಅವರೊಬ್ಬ ದ್ವಾಪರಯುಗದ ಸೀಮಾರೇಖೆಯಾಗಿ ಮೆರೆದಿದ್ದಾರೆ.

ಕರ್ಮಫಲಸ್ವರೂಪಿಯಾದ ವಿಧಿಯ ಕಠೋರನಿಯತಿಯ ವಜ್ರಪಂಜರದಲ್ಲಿ ಸಿಕ್ಕ ಕೌರವ ಪಾಂಡವರ ದಾಯಾದಿ ಮತ್ಸರದ ಬೇಗೆಯೊಳ್ ಬೆಂದು ಸೋತಿರುವ ದ್ರೋಣನು ತನ್ನ ವಚನ ರಕ್ಷಣಾರ್ಥವಾಗಿ ಶಿಷ್ಯನೆಡೆಗೆ ಐತರುತ್ತಾನೆ. ಅವನ ಹೃದಯ ಉಭಯಸಂಕಟದ ಇಕ್ಕಳದಲ್ಲಿ ಸಿಕ್ಕು ನರಳುತ್ತಿದೆ ಒಂದು ಕಡೆ ಅರ್ಜುನನಿಗೆ

ಕೊಟ್ಟಿರುವ ವಚನ, ಇನ್ನೊಂದೆಡೆಗೆ ಆ ವಾಗ್ದಾನದ ಫಲವಾಗಿ ಮುಗ್ಧನೂ,ನಿಷ್ಕಲ್ಮಷನೂ ಆದ ವ್ಯಾಧ ಶಿಷ್ಯನೋರ್ವನಿಗೆ ಒದಗಲಿರುವ ಕೇಡು. ವಚನಭಂಗ ಇಲ್ಲವೆ ಪಾಪಕರವಾದ ಹೇಯಕಾರ್ಯ. ಈ ನಡುವೆ ಮನಸ್ಸು ತೂಗುಯ್ಯಾಲೆಯಾಡುತ್ತಿದೆ.

ಏಕಲವ್ಯನು ಅಬ್ಬೆಗೆ ನಡೆದ ಕತೆಯೊಂದನ್ನು ನಿವೇದಿಸುತ್ತಿರುವಾಗ, ಶಬ್ದವೇಧಿ ವಿದ್ಯೆ ಪ್ರಯೋಗಿಸಿದ್ದನ್ನು ಹೇಳಲಾಗಿ, ಅದನ್ನಾರಿಂದ ಕಲಿತೆ ಎನ್ನಲಾಗಿ, ಗುರು ಮಹಿಮೆಯನ್ನು ತಾಯಿಗೆ ಬಣ್ಣಿಸುತ್ತಾನೆ. ಈತ ದೇವಸ್ವರೂಪಿಯಾದ ನರರೂಪಿ ಗುರು. "ಉಣ್ಬನ್, ಉಸಿರ್ವನ್, ನಮ್ಮಂತೆ ಬದುಕಿರ್ಪನ್. ಹಸ್ತಿಪುರ ರಾಜಧಾನಿಯೊಳಿತ್ತಿರ್ಪನ್, ಅರಸುಮಕ್ಕಳ್ಗೆ ಮನೆ ಗರುಡಿಯಾಚಾರ್ಯನ್. ಮೂಲ ನೋಡಿ ದ್ರೋಣನೆಂಬುದು ಪೆಸರ್. ತಿಳಿದವನ್, ಅಳ್ಕರೆಯುಳ್ಳವನ್, ತಿಳಿಗೊಂಡವನ್, ದಿವ್ಯಜ್ಞಾನಿಯೆಂಬರ್, ಸಮದರ್ಶಿಯೆಂಬರ್, ಧನುರ್ವಿದ್ಯಾದೇವನ್." ಅವನನ್ನು ಎಷ್ಟು ಹೊಗಳಿದರೂ ಅಲ್ಪವೇ. ಆ ಗುರುಮಹಿಮೆಯನ್ನು ಅಯ್ಯನಿಂದರಿತು ನಾನು ಅವರ ಬಳಿ ವಿದ್ಯೆ ಕಲಿತು ಬರುವೆನೆಂದು ಅರುಹಲಾಗಿ, ಅಯ್ಯನು "ಅವರ್ ಪಾರ್ವರ್, ಬೇಡರ್ಗೆ ಒವಜುಗೆಯ್ಯಲ್ಕೆ ಒಪ್ಪರ್" ಎಂದನು. ಆದರೂ ನನ್ನ ವಿದ್ಯಾದಾಹ, ಅದು ಪ್ರಜ್ವಲಿಸುವ ಆಸೆಯು ಕಿವಿ ಕಂಡು ಕನಿಕರಪಟ್ಟು ಕಳಿಸಿದನು. ಅಲ್ಲಿ ಗುರುಪುತ್ರನ ಸ್ನೇಹದಿಂದ ಅವರ ಸ್ವರ್ಗಸಾದೃಶ್ಯ ಸಾಮೀಪ್ಯ ಲಾಭ ನನಗೆ ದಕ್ಕಿತು. ನನ್ನಾಸೆಯ ಪಿರಿಯ ಬಯಕೆಯನ್ನು ತೋರ್ಪಡಿಸಲಾಗಿ ಅವರು ನನ್ನನ್ನು ಕಲ್ಪುಮನವ ಅನೂನಾದರವಾದ ನಾಗರಿಕಜೀವನದಲ್ಲಿದ್ದೂ ಮಗನೊಂದಿಗೆ ಮಗನಾಗಿ ಬೆಳೆಸಿ, ಅವರ ಮೇಲಿನ ನನ್ನ ಶ್ರದ್ಧಾ ಭಕ್ತಿಗಳಿಗೆ ಕಾರಣರಾದರೂ ನಂತರ ನನ್ನನ್ನು ತಿರಸ್ಕರಿಸದೆ, ತಮ್ಮ ಸುತನಿಗೆ

"ಅಶ್ವತ್ಥಾಮ, ನಮ್ಮ ಚಿಟ್ಟರೊಳಿವನುಮೊರ್ವನ್:
ನಿನ್ನ ನೇರ್ಗೆರಿಯನೆಂದೀತನನ್ ಕಾಣ್"

ಎಂದ ಅವರ ಮನೋವೈಶಾಲ್ಯವನ್ನರಿಯಬಹುದು.

"ತಳತಳಿಪ ಆಯುಧಾಗಾರಮಂ ಪೊಕ್ಕವೋಲಾಯ್ತು, ನನಗಾತನಂ ಕಂಡು"! ಎಂಬ ಅವರ ಪ್ರಖರ ತೇಜಸ್ಸನ್ನು ಗುರುತಿಸಬಹುದು.

ಅರಸುಮಕ್ಕಳ ಅಸೂಯೆ ವಿದ್ಯೆ ಕಲಿಯಲು ಅಡ್ಡಿಬಂದಾಗ ಕಂಬನಿದುಂಬಿ ನಿಂತ ಬಾಲಕನನ್ನು ಕಂಡು

"ಏಕಲವ್ಯ, ಅಳಲದಿರ್, ಅಸೆಗೆಡದಿರ್, ನೀನೆಮ್ಮ ಮನೆಯೊಳಾಗಿರು. ಈ ಗರುಡಿಗೆನ್ನ ಸೇವೆಗೈತರುತೆ. ದೂರದಿಂ ಕಂಡು ಕಲಿ, ಕಲ್ಪಿಸಿತಂ. ಮತ್ತೆಳಿಮದಂ ಮನೆಯೊಳೆಯೆ ಕಲಿಯುಖವನಿತಂ, ಕಲಿವೆನಶ್ವತ್ಥಾಮನೊಡನೆ" ಎಂಬ ಉಕ್ತಿಯನ್ನು ಗಮನಿಸಿದಾಗ ಆ ಗುರುವಿನ ಔದಾರ್ಯ, ಔನ್ನತ್ಯಗಳನ್ನರಿಯಬಹುದು.

ಆದರೂ ರಾಜಭವನ ಅವರ ವ್ಯಕ್ತಿತ್ವವನ್ನು ಕಬಳಿಸಿ, ಸ್ವಂತಿಕೆ ಕ್ಷತ್ರಿಯರ ಮುಂದೆ ಕ್ಷಮಿಸಿದ್ದನ್ನು ಕಂಡು ದ್ರೋಣರ ಪಲಾಯನವಾದದ ಒಂದು ಮುಖವನ್ನು ನೋಡಬಹುದು. ಇಲ್ಲಿ ಅರಮನೆಯ ಹಂಗು ದ್ರೋಣರನ್ನು ಇಕ್ಕಟ್ಟಿಗೆ ಸಿಲುಕಿಸಿತು.

ಈ ರೀತಿ ಮೊದಲದೃಶ್ಯ "ಗುರು"ವಿನಲ್ಲಿ ಗುರುವಾದ ದ್ರೋಣಾಚಾರ್ಯರು ಪ್ರತ್ಯಕ್ಷವಾಗಿ ಕಾಣದಿದ್ದರೂ, ಅವರ ಪ್ರಭಾವ ಪ್ರಸಂಗ ಇಡೀ ದೃಶ್ಯವನ್ನೆಲ್ಲ ವ್ಯಾಪಿಸಿದೆ.

ಅಮ್ಮನ ಮರಣಾನಂತರ ಕಾಡಿಗೈತಂದ ಏಕಲವ್ಯನಲ್ಲಿ ದ್ರೋಣರ ಪಾರ್ಥಿವ ಶರೀರ ಬೇರೆ ನಿಂತರೂ, ಗುರು ಉದ್ದೀಪಿಸಿ, ಶ್ರದ್ಧಾಭಕ್ತಿಗಳು ವರ್ಧಿಸಿ, ಅದೇ ಅವನಿಗೆ ವಿದ್ಯಾಗಮಾಕ್ಷವಾಗುತ್ತದೆ. ಗುರುಮಹಿಮೆಯಿಂದ ಬಿಲ್ಲಾಸ್ತ್ರವಿದ್ಯೆಗಳಲ್ಲಿ ಪರಿಣತನಾಗುತ್ತಾನೆ.

"ಕರ್ಣ" ಭಾಗದಲ್ಲಿ ದ್ರೋಣರ ಅಂತರಾತ್ಮದ ತುಮುಲವನ್ನು ಚಿತ್ರಿಸಿದ್ದಾರೆ. ಚಿಂತಾಗಂಭೀರ ಮುಖಮುದ್ರೆ, ಕವಚ, ಮುಂಡಿಗಚ್ಚೆ ಧರಿಸಿದ್ದಾನೆ. ಉತ್ತರೀಯ ಸ್ವಲ್ಪ ಅಸ್ತವ್ಯಸ್ತವಾಗಿದೆ. ಧೀರ. ಧೀರನ ಕಾಡಿನಲ್ಲಿ ಬರುತ್ತಿರುವಾಗ

"ಬೆಟ್ಟಯುರದೆದೆ ಬೆಟ್ಟಯುರಸುತಿರ್ಪೆಯ್, ವತ್ಸ !
ಪುಟ್ಟಗುಣಮದು ನಿನಗೆ . . . . ."

ಈ ಮಾತು ಎಷ್ಟು ಧ್ವನಿಪೂರ್ಣ ! ಏಕಲವ್ಯನ ಶಬ್ದವೇಧಿ ವಿದ್ಯಾಪ್ರಾವೀಣ್ಯತೆ ವೀಕ್ಷಿಸಿದ ಬಳಿಕವಳಿ, ಕೀರ್ತಿಕಾಮಿಯು ಬೆಂಬತ್ತಿದ ಅರ್ಜುನನು ಅಸೂಯೆಗೊಂಡು, ತನ್ನ ಗುರುಗಳಿಗೆ ತಾನಿತ್ತ ವಚನವನ್ನು ನೆನಪಿಸಿದಾಗ ಈ ಹೇಯಕಾರ್ಯಕ್ಕಾಗಿ ಒರಲೇಬೇಕಾದ ದ್ರೋಣರ ಅಂತರಂಗದ ತುಮುಲವನ್ನಿಲ್ಲಿ ಕಾಣಬಹುದು. ತಮ್ಮ ಅಹಂಕಾರ ಪಿಶಾಚಿಯನ್ನು ತೆಗಳಿದ್ದನ್ನರಿಯಬಹುದು. ಇಲ್ಲದಿದ್ದರೆ ನಾನೇಕೆ ಅರ್ಜುನನಿಗೆ ಗುರುವಾಗಿ, ತನ್ನನ್ನು ಅವಮಾನಗೊಳಿಸಿದ್ದ ದ್ರುಪದನನ್ನು ತಂದು ತನ್ನಡಿಗೆ ಹಾಕೆಂದು ಹೇಳಿ, ಹಾಗಾದಾಗ ತೃಪ್ತಿಪಟ್ಟಿದ್ದೆನಲ್ಲವೆ ? ಆಗ ಹಂಗಿಗೆ ಒಳಗಾಗಿದ್ದರಿಂದಲ್ಲವೇ ಈ ಧರ್ಮಸಂಕಟಕ್ಕೊಳಗಾದದ್ದು ? ಆಗ ತಾನು ದ್ರೋಣ ಶಿಷ್ಯರಲ್ಲಿ ನಿನ್ನನ್ನು ತ್ರೈಲೋಕ್ಯಗಂಡನನ್ನಾಗಿ ಮಾಡುವೆನು. ನಿನ್ನ ಹೆಸರನ್ನು ಗಗನಕ್ಕೇರಿಸುವೆನು ಎಂದಿತ್ತ ವಚನವಲ್ಲವೇ ? ಅಷ್ಟಕ್ಕೆಲ್ಲ ಕಾರಣವಾಗಿರುವದು.

"ನಿನ್ನಹಂಕಾರದ ಫಲಮೆ ಮರಿಯಿಕ್ಕಿದುದು ಪಾರ್ಥನ ಅಹಂಕಾರದೀ ಕ್ರೂರ ಕಾರ್ಯಮೆ". ನಿಜವಾದ ಗುರುವಾಗಿದ್ದರೆ ಅರ್ಜುನನನ್ನು ಈ ಸಂದರ್ಭದಲ್ಲಿ ತಿರಸ್ಕರಿಸಬೇಕಾಗಿತ್ತು. ಆದರೆ ದ್ರೋಣರು ಅಸಹಾಯಕರಾಗಿ ಆತ್ಮವಂಚನೆಗೆ ಸಿದ್ಧರಾಗುತ್ತಾರೆ. ಇಲ್ಲಿಂದ ದ್ರೋಣರ ವ್ಯಕ್ತಿತ್ವದ ಪತನ ಆರಂಭವಾಗುತ್ತದೆ.

ಅಶ್ವತ್ಥಾಮನಿಗೆ ಚಿತ್ತವ್ಯಾಕುಲನಾಗಿದ್ದ ತಂದೆಯನ್ನು ನೋಡಿದಾಗ, ಅವರು ಯಾವುದೋ ಗೂಢಶೋಕದಲ್ಲಿದ್ದಾರೆಂಬ ಅರಿವಾಗಿ, ಅವರನ್ನು ಕೇಳಲಾಗಿ ದ್ರೋಣರು ತಮ್ಮ ಮಗನ ಮುಂದೆಯೂ ಮುಖವೆತ್ತಿ ಮಾತಾಡಲಾರದವರಾಗಿದ್ದಾರೆ. ಒಂದ ಕಡೆ

ತಮ್ಮ ಒಲುಮೆಯನ್ನೇ ಬಯಸುತ್ತಿದ್ದ ಪ್ರತಿಭಾಸಂಪನ್ನನಾದ ಶಿಷ್ಯೋತ್ತಮನ ಭವಿಷ್ಯತ್ತಿನ ಕಗ್ಗೊಲೆಯನ್ನು ಕೈಕೊಳ್ಳುವುದು, ಇನ್ನೊಂದು ಕಡೆ ಇತ್ತ ವಚನ, ಮಗುದೊಂದು ಕಡೆ ತಮ್ಮ ಹರಣಕ್ಕಿಂತಲೂ ಮಿಗಿಲಾದ ಸುತನ ಆತ್ಮೀಯ ಮಿತ್ರನಿಗೆ ಕೇಡನ್ನೆಸಗುವುದು– ಇವುಗಳಿಂದ ಎಷ್ಟೇ ಮಹಿಮಾನ್ವಿತರಾದರೂ ಪುತ್ರನ ಮುಂದೆ ಅಧೋವದನರಾಗಿ ನಿಂತಿದ್ದರು. ಮಗನ ಮೇಲೆ ಕೋಪಗೊಂಡರೂ, ಆ ವ್ಯಾಧಿಗೀಗ ನಿರ್ಜನತೆಯೇ ಭೇಷಜ ಎಂದವನನ್ನು ಮರಳಿ ಕಳಿಸುವರು. ಅರಸುಮಕ್ಕಳಿಗೆ ವಿದ್ಯೆಕಲಿಸುವುದೂ ಒಂದೇ, ಸಿಡಿಮದ್ದನರೆವುದೂ ಒಂದೇ ಎಂದು ನೊಂದುಕೊಳ್ಳುತ್ತಾರೆ.

ವಿಧಿಯು ಕರ್ಮದಾಟದ ಲೀಲಾಮೃತದ ಉಪದೇಶವಾಣಿಯನ್ನು ನುಡಿಯಲು, ಅವನನ್ನು ಸಂತೈಸಿ, ತನ್ನ ಅಂತಃಸಂಕಟವನ್ನು ತೋರ್ಪಡಿಸಿಕೊಳ್ಳದೇ ಅವನಿಗೆ ಯಾವುದೇ ಪೆರ್ಕೇಡುಂಟಾಗದಂತೆ ಮಾಡುವೆನೆಂಬ ಭರವಸೆ ನೀಡಿ ಅವನನ್ನು ಅಲ್ಲಿಂದ ಕಳುಹುತ್ತಾರೆ.

"ವಿದ್ಯೆಯೆಂಬಾ ಪೆಸರ ಮರೆಯೊಳಾನ್ ಅವಿದ್ಯೆಯಂ ಘೋಷಿಸುವ ಗುರುವಾದೆನಲೆ" ಎಂದು ವಿಧಿವಶರಾಗಿ, ನಾಗರಿಕ ಮತ್ಸರಾಗ್ನಿಯಿಂದ ಸಂತಪ್ತರಾದ ದ್ರೋಣರು ನೊಂದುಕೊಳ್ಳುತ್ತಾರೆ. ತಮ್ಮ ದಾರಿತಪ್ಪಿದ ನಡೆಗಾಗಿ, ರಂಗಕ್ಕೆ ಧುಮುಕಿ ಆಗಿದೆ. ಜಯಾಪಜಯಗಳ ಮಾಲೆ ದೇವರಿಗೆ ಬಿಟ್ಟದ್ದು. ಪಾರ್ಥನಿಗೆ ತಾನು ಕೊಟ್ಟ ವಚನಕ್ಕೆ ಭಂಗಬರದಂತೆ, ಏಕಲವ್ಯನಿಗೆ "ಆವುದುಂ ಪೆರ್ಕೇಡು" ಒದಗದಂತೆ "ಆ ದೈವಮುಂ ನೆಮ್ಮಿ ಕೆಲಸ ಮಾಳ್ಪೆನ್" ಎಂದುಕೊಳ್ಳುತ್ತಾರೆ.

ಅರ್ಜುನನ ಮತ್ಸರಾಗ್ನಿಯನ್ನು ನಂದಿಸುವುದಕ್ಕಾಗಿ ಏಕಲವ್ಯನ ಹೆಬ್ಬೆರಳನ್ನು ಆಹುತಿಯಾಗಿ ತೆಗೆದುಕೊಂಡ ದೃಶ್ಯ 'ಯಜ್ಞ' ಭಾಗದಲ್ಲಿ ಮೂಡಿದೆ. ಏಕಲವ್ಯ ದ್ರೋಣನನ್ನು ಗುರುವೆಂದೊಲಿದು, ಶ್ರದ್ಧಾಭಕ್ತಿಗಳಿಂದ ಪೂಜಿಸುವುದಕ್ಕೆ ಕೊಡುವ ಕಾಣಿಕೆಯಿದು! ಗುರುವು ಏಕಲವ್ಯನ ಹೆಬ್ಬೆರಳನ್ನು ಆಹುತಿ ತೆಗೆದುಕೊಳ್ಳದೆಯೇ ಅವನ ಮಹಿಮಾಶಕ್ತಿಯನ್ನು ಕ್ಷಯಿಸುವುದು ಸಾಧ್ಯವೇ ಎಂದಾಲೋಚಿಸಿ, ವಿಹಂಗಮ ವಿಹಾರಗೈಯುತ್ತಿದ್ದ ಪಕ್ಷಿಯನ್ನು ಬೇಟೆಯಾಡ ಹೇಳಿದಾಗ, ನಿರಪರಾಧಿ ಪಕ್ಷಿಯ ಪ್ರಾಣಹತ್ಯೆಯ ಉಲಿಯ ಉಲಿದು ಪಶ್ಚಾತ್ತಪ್ತನಾಗಿ, ಧರ್ಮಬುದ್ಧಿಯನ್ನು ತೋರ್ಪಡಿಸಿ ಗುರುವನ್ನು ಮತ್ತೆ ಸಂದಿಗ್ಧದಲ್ಲಿ ಕೆಡಹುವನು ಏಕಲವ್ಯ. "ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು, ಆಚಾರ್ಯ. ಆ ವಿದ್ಯೆಯುಂ ಕಲಿತ್ತುದೆನಗೆ . . ." ಮಂತ್ರಘೋಷದಂತಹ ಮಾತು ಕೇಳಿ ಗುರು ಮರುಹುಟ್ಟುಪಡೆದಂತಾಗುತ್ತಾನೆ.

ಏಕಲವ್ಯ ಸರ್ವಸ್ವವನ್ನು ಅರ್ಪಿಸುವೆನೆಂದಾಗ ಗುರುವು. "ನಾನಂತೂ ಕಟುಕನ್ ಬಿಟಂ! ನಂಬಿದವನಂ ಕೊರಲ್ ಕೊರೆವ ಕಜ್ಜಮಂ ಕೈಕೊಂಡು ಬಂದೆನ್".

ಎಂದು ತನ್ನ ಅಸಹಾಯಕತೆಯನ್ನು ತೋರ್ಪಡಿಸುತ್ತಾನೆ. ನಂತರ ವಿಧಿಯು ವಿಕಟಹಾಸದಂಬುಧಿಯಲ್ಲಿ ಮುಳುಗಿದ ದ್ರೋಣರು ಅನ್ಯಮಾರ್ಗವಿಲ್ಲದೆ ಬಿಲ್‌ಬಿಜ್ಜೆಗುಸಿರಾದ ಆ ಪೆರ್ಬೆರಳ್‌ನು ಕೊಡು ಎಂದು ಅತ್ಯಂತ ದುಃಖದಿಂದ, ದೈನ್ಯದಿಂದ ಕೇಳಿಕೊಳ್ಳು

ವರು. ಆಗ ಏಕಲವ್ಯ ಸ್ವಪ್ನದ ಪ್ರಸ್ತಾಪ ಮಾಡಿದಾಗ "ಭಗವದರ್ಪಿತಮಾಗೆ, ಸಾವುದಂ ಬರ್ದುಗಿನ್ನೆಲ್ ಶ್ರೇಯಸ್ಕರಂ" ಎಂದು ಹೇಳಿದಾಗ, ಏಕಲವ್ಯ ನಿಷ್ಕಾಮವಾದ ಸ್ವಾರ್ಪಣವನ್ನರ್ಪಿಸಿದನು. ಕೊನೆಗೆ ಏಕಲವ್ಯ ದಕ್ಷಿಣೆಯನ್ನರ್ಪಿಸಲು, ದ್ರೋಣರು ಮಡುಗಟ್ಟಿ ನಿಂತಿದ್ದ ರಕ್ತವನ್ನು ಬಾಗಿ ನೋಡುವರು. ಆಗ ವಿಕೃತವಾದ ತಮ್ಮ ಮುಖವನ್ನು ಬಿದ್ದ ಮಸುಕ್ಕಿದ ಭೀಮುಖವನ್ನುದೊಂದರಗಿ ಕಣ್ಮುಚ್ಚಿ, ರುಂಡಮುಂಡಗಳೆರಡೂ ಬೇರ್ಪಟ್ಟಿದ್ದನ್ನು ಕಂಡು ಭೀತರಾಗಿ

> "ಬಿಲ್ಲ ಬೆರಳ್ಗೆ, ಕೊಳ್ಳುದೆಂದೇ ತೋರ್ಪುದಾ ಬಿದಿ, ನನ್ನ ಕೊರಳಂ
> . . . . . . . . . . . . . . . . .
> ಅಂತೆ ಕರ್ಮದ ಪಾಂಗು ! ಮರಿಗೆ ಮರಿ; ಮರಿಗೆ ಮರಿ;
> ಬೆರಳ್ಗೆ ಕೊರಳ್;

ಬರಲಿರುವ ಭವಿಷ್ಯದೃಶ್ಯ ಆ ಪ್ರತಿಬಿಂಬದಲ್ಲಿ ಸೂಚಿತವಾಯಿತೆಂದು ಆಶಂಕಿಸಿ ಹೇಳುತ್ತಾರೆ. ನಂತರ ಏಕಲವ್ಯನಿಗೆ ನಿನ್ನ ಅವ್ವೆಗೆ ಇದು ತಿಳಿಯದಿರಲಿ. "ನಿನಗೊದಗಿದ್ದ ಶೋಕ ಸಂತಪ್ತ ಮಾತೃಶಾಪಂ !" ಇಲ್ಲಿ ನಾವು ದ್ರೋಣರ ಮನದ ಭೀತಿಯನ್ನೂ, ಮಾನಸಿಕ ತುಮುಲವನ್ನೂ ಅರಿಯಬಹುದು.

ಆದರೂ ಮಾತೃಶಾಪದ ವಿಧಿಯ ಪ್ರೇರಣೆಯಿಂದ ನಡೆದು ಹೋಗಿ ದೃಷ್ಟದ್ಯುಮ್ನನಿಂದ ದ್ರೋಣರ ಕೊರಳು ಕತ್ತರಿಸಲ್ಪಡುವುದು. ಇದೇ ಕರ್ಮಪರಂಪರೆ.

ಗುರು ಶಿಷ್ಯನ ವ್ಯಕ್ತಿತ್ವದ ಬೆಳವಣಿಗಾಗಿ, ಅರಿವಿನ ಪುಂಜವಾಗುತ್ತಾನೆ. ಅಷ್ಟೇ ಅಲ್ಲದೆ ಗುರುಶಿಷ್ಯ ಸಂಬಂಧವು "ಜ್ಯೋತಿಯಿಂದ ಬೆಳಗಿದ ಜ್ಯೋತಿ"ಯಂತಿರಬೇಕು. ಪಶುತ್ವದಿಂದ ಮಾನವತ್ವದೆಡೆಗೆ ಬದುಕನ್ನು ಬದಲಿಸುವುದು ಗುರುವಿನ ಮುಖ್ಯ ಕರ್ತವ್ಯವಾಗಿದೆ. ಹೀಗಾಗಿ ಗುರು ಶಿಷ್ಯನ ಬದುಕನ್ನು ರೂಪಿಸುವ ಮಹಾನ್‌ಶಕ್ತಿಯಾಗಿದ್ದಾನೆ. ಗುರು ದೇವರಾಗಿ ಶಿಷ್ಯನ ಬದುಕನ್ನು ನಿರ್ಮಿಸುವುದಕ್ಕೆ ಕೆಲವೊಮ್ಮೆ ಅಡ್ಡಿ ಆತಂಕಗಳು ಬರಬಹುದು. ಅಂತಹ ರೀತಿಯಲ್ಲಿ ಮಹಾಭಾರತದ ದ್ರೋಣರ ಗುರುತನ ನಮ್ಮನ್ನು ಆಕರ್ಷಿಸುತ್ತದೆ. ಬಿಲ್ವಿದ್ಯೆಯಲ್ಲಿ ಅಪ್ರತಿಮರಾದರೂ ಶಿಷ್ಯರ ಆಯ್ಕೆಯಲ್ಲಿ ಸೋಲುತ್ತಾರೆ. ರಾಜಕೀಯ ತಂತ್ರಗಳಲ್ಲಿ ವ್ಯಕ್ತಿ ದ್ರೋಣರು ಸಮರ್ಥರಾದರೂ ಗುರುತ್ವದಲ್ಲಿ ಅವರು ಅಸಮರ್ಥರೆಂದೇ ಹೇಳಬಹುದು. ಇದೇ 'ಬೆರಳ್ಗೆ ಕೊರಳ್'ದ ಆಶಯವಾಗಿದೆ.

▢ ▢

# ಜೀವಂತ ಸಮಾಧಿ

---

● ಸುಬ್ರಮಣ್ಯ ಜೋಶಿ

ನೋಡಲ್ಲಿ ಬರುತಿಹರು
ಅತೀವ ಕಾಯರು
ಪುಷ್ಪಗುಚ್ಛ ಕೈಯಲಿ
ಕಣ್ಣಲ್ಲಿ ಗ್ಲಿಸರೀನ್ ನೀರು
ಜಾಲದ ಬಲೆಯ ಬಿಸುಟು ತಲೆಯಲ್ಲಿ.
ಸತ್ತವರ ಸಮಾಧಿಯು
ಬತ್ತಿದ ಅಶ್ರುಧಾರೆಯಿಂದ
ತೊಳೆದು, ಶೃಂಗರಿಸಿ
ಪುಷ್ಪ–ಗುಚ್ಛವ ಅಲ್ಲಿಟ್ಟು
ಸತ್ತವರ ತತ್ವ ಹೇಳಿ
ಇದ್ದವರ ಬೋಳಿಸಲು
ಬಂಗಿ ಹುಡುಕುತ್ತ ನಿಂತಿಹರು.
ಇದ್ದು ಸಾಯುತ್ತಿದ್ದ
ತತ್ವಕೆ ನೀರೆರೆಯುವರಿಲ್ಲ.
ಇಲ್ಲದ, ಕಾಣದ
ಆ ತತ್ವಪಿಂಡಕೆ.
ಸತ್ತ ಮೇಲೇ
ಕೊಟ್ಟ ಬೆಲೆ
ಹೇಳುತಿದೆ.
ಬಾಳ್ವಿಗೆ ಇದ್ದಾಗ ಬೆಳಕಿಲ್ಲ
ಸತ್ತವರ ಬದುಕಿನ ಹೊಡೆದಾಟ
ಇದ್ದವರ, ಸಾಯ ಹೊಡೆದಿದೆ.
ಯಾರದೋ ತತ್ವಕೆ
ಯಾರದೋ ಬಣ್ಣದಡಿಯಲಿ
ನಡೆದಿದೆ "ಜೀವಂತ ಸಮಾಧಿ".

□ □

# ಕೈ ತಪ್ಪಿದ ಕೂಸು

● ನಾಸುದೇವ ಶೆಟ್ಟಿ

"ಸಂಜೂ, ನಿನ್ನೆ ರಾತ್ರಿ ಹಾಸಿಗೆ ಮೇಲೆ ಉಚ್ಚೆ ಹೊಯ್ದ್ಬಿಯಲ್ಲೋ. ಥುಸಿ, ಚಾದರ ಎಲ್ಲಾ ತೊಳೆಯುವ ಹಾಗೆ ಆಯ್ತು" ಎಂದು ಅಜ್ಜಿ ಅಂದಾಗಲೇ ನಾಲ್ಕು ವರುಷದ ಸಂಜೀವ ಒಗ್ಗಿ ಚಡ್ಡಿ ನೋಡಿಕೊಂಡ. ಹೌದು, ಒದ್ದೆಯಾಗಿತ್ತು. ನಾಚಿಕೆ ಎನಿಸಿತು. ಹೀಗೇ ನಾಲ್ಕು ದಿನದ ಹಿಂದೂ ಒಂದುಸಲ ಮಾಡಿದ್ದ. ಯಾಕೋ ಏನೋ? ರಾತ್ರಿ ಮಲಗಿದಾಗ ತರ ತರದ ಕನಸು. ಏಳಬೇಕೆಂದರೂ ಏಳಲು ಆಗುವುದೇ ಇಲ್ಲ. ಬೆಳಿಗ್ಗೆ ನೋಡಿದಾಗ ಹೀಗೆ ಆಗಿರುತ್ತದೆ. ಅಜ್ಜಿ ಹೇಳಿದಳು

"ಚಡ್ಡಿ ಬಿಚ್ಚಿ ಹಾಕಿ, ಮುಖ ತೊಳೆದು ಕೊಂಡು ಬಾ. ತಿಂಡಿ ಕೊಡುತ್ತೇನೆ."

ಸಂಜೀವ ಬಚ್ಚಲಿಗೆ ಹೋದ. ಉಗುರು ಬೆಚ್ಚಗೆ ಕಾದ ನೀರನ್ನು ಮುಖಕ್ಕೆ ಚಿಮುಕಿಸಿಕೊಳ್ಳುತ್ತಾ, ರಾತ್ರಿ ಏನು ಕನಸು ಬಿದ್ದಿತ್ತು ಎಂದು ಆಲೋಚಿಸುತ್ತಿದ್ದ. ಹಾಂ, ನೆನಪಾಯಿತು. ಅಮ್ಮ ರಾತ್ರಿ ಕನಸಿನಲ್ಲಿ ಬಂದಿದ್ದಳು. ತಾನು ಮನೆಯಲ್ಲಿ ರೇಡಿಯೋ ಮೇಲೆ ಇಟ್ಟ ತಲೆ ಅಲ್ಲಾಡಿಸುವ ನಾಯಿಯ ಬೊಂಬೆ ಮುರಿದು ಬಿಟ್ಟಿದ್ದ. ಅಮ್ಮ ಕಂಡು ಇವನಿಗೆ ಚೆನ್ನಾಗಿ ಹೊಡೆದಿದ್ದಳು. ಆ ನೋವಿನ ಉರಿಗೆ ಆತ ಮೂತ್ರ ಮಾಡಿ ಕೊಂಡಿದ್ದ. ಅಜ್ಜಿ ಹೇಳಿದ ಮೇಲೆಯೇ ಗೊತ್ತಾದದ್ದು. ತಾನು ಮೂತ್ರ ಮಾಡಿದ್ದು ಹಾಸಿಗೆಯಲ್ಲಿ ಎಂದು.

ಸಂಜೀವ ಮುಖ ತೊಳೆದು ಬಂದ. "ಅಜ್ಜಿ ನಿನ್ನೆ ರಾತ್ರಿ ನಿದ್ರಿಲಿ ಅಮ್ಮ ಬಂದಿದ್ಲು. ಅವಳು ನನಗೆ ಹೊಡೆದ ಹಾಗೆ ಆಯಿತು. ಅದ್ಕೇ ನಾನು ಉಚ್ಚೆ ಹೊಯ್ದು ಕೊಂಡೆ" ಅಂದ.

ಸಂಜೀವನಿಗೆ ತಾಯಿ ತಂದೆಗಳ ಸಂಪರ್ಕವೇ ಬಹಳ ಕಡಿಮೆ. ಹುಟ್ಟಿದ ಹತ್ತು ತಿಂಗಳಿಗೇ ಆತ ತಾಯಿ ತಂದೆಗಳಿಂದ ದೂರವಿರಬೇಕಾದ ಪ್ರಸಂಗ ಒದಗಿತು. ಅವನ ಅಪ್ಪ ಅಮ್ಮ ಇಬ್ಬರೂ ನೌಕರಿಯಲ್ಲಿ ಇದ್ದರು. ಮನೆಯಲ್ಲಿ ಇವನನ್ನು ನೋಡಿಕೊಳ್ಳುವುದು ಸಮಸ್ಯೆಯಾಯಿತು. ಆಳುಮಕ್ಕಳ ಹತ್ತಿರ ಅವನು ಎಷ್ಟು ಚೆನ್ನಾಗಿ ಬೆಳೆಯಬಹುದು? ಅದಕ್ಕಾಗಿ ಆತನನ್ನು, ಅವನ ಅಮ್ಮ ತವರುಮನೆಯಲ್ಲಿ ಬಿಟ್ಟಿದ್ದಳು.

ಹತ್ತು ತಿಂಗಳ ಮಗು ಸಂಜೀವನಿಗೆ ಪರಿಸರ ಒಮ್ಮೆಲೇ ಬದಲಾವಣೆಯಾಯಿತು. ಬಂದ ಹೊಸದರಲ್ಲಿ ಹದಿನೈದು ದಿನಗಳ ಕಾಲ ಅತ್ತು ರಂಪ ಮಾಡಿದ್ದ. ಅಜ್ಜ ಸಿಟ್ಟು ಬಂದು ರೇಗಿದ್ದ. ಆತನನ್ನು ಹಿಂದಕ್ಕೆ ಕಳುಹಿಸುವ ಯೋಚನೆಯನ್ನು ಮಾಡಿದ್ದ. ಸಂಜೀವ ಅಷ್ಟಷ್ಟಾಗಿ ಸಮಾಧಾನಿಯಾಗುತ್ತ ಬಂದ. ದಿನದ ಬಹುತೇಕ ವೇಳೆ ಮೌನಿಯಾಗಿಯೇ ಇರುತ್ತಿದ್ದ. ಹೊಟ್ಟೆಗೆ ಹಸಿವೆನಿಸಿದಾಗ ಅಜ್ಜಿಯನ್ನು ಕೇಳುತ್ತಿದ್ದ. ಅಜ್ಜಿ ಆತನಿಗೆ ಯಾತಕ್ಕೂ ಕಡಿಮೆ ಮಾಡಿರಲಿಲ್ಲ. ಆದರೂ ಆತ ದೇಹದಲ್ಲಿ ಉಬ್ಬಿರಲಿಲ್ಲ. ಕಡ್ಡಿಯಾಗಿಯೇ ಇದ್ದ. ಒಮ್ಮೊಮ್ಮೆ ರಾತ್ರಿ ಎದ್ದು 'ಅಮ್ಮಾ' ಎಂದು ಕೂಗುತ್ತಿದ್ದ. 'ಅಪ್ಪಾ' ಎಂದು ಒರಲುತ್ತಿದ್ದ. ಸುಮ್ಮನೆ ಎದ್ದು ಕುಳಿತು ಅಳುತ್ತಿದ್ದ. ಅವನ ಸ್ಥಿತಿಯನ್ನು ನೋಡಿ ಅಜ್ಜಿಯ ಕರುಳು ಮಿಡಿಯುತ್ತಿತ್ತು. ಆತನನ್ನು ಹತ್ತಿರ ಎಳೆದುಕೊಂಡು ತಲೆ ನೇವರಿಸುತ್ತಿದ್ದಳು. ಸಂಜು ಹಾಗೇ ಅಜ್ಜಿಯ ಎದೆಗೆ ಒರಗಿ ನಿದ್ದೆ ಹೋಗುತ್ತಿದ್ದ. ಅಜ್ಜಿ ಅವನನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ಬೆಚ್ಚಗೆ ಹೊದಿಸುತ್ತಿದ್ದಳು.

ಅಜ್ಜಿ ಸಂಜೀವನಿಗೆ ಬಿಸಿ ಬಿಸಿ ದೋಸೆ, ತುಪ್ಪ, ಬೆಲ್ಲ ಕೊಟ್ಟಳು. ಅವನು ಮೆಲ್ಲನೆ ತಿನ್ನುತ್ತಿದ್ದ. ಅಜ್ಜಿ ಹೇಳಿದಳು

"ಸಂಜೂ, ಅಮ್ಮ ಬರುತ್ತಾಳಂತಲ್ಲೋ"

"ಯಾವಾಗ ಬರುತ್ತಾಳೆ ?"

"ಇನ್ನು ಮೂರ್ನಾಲ್ಕು ದಿನದಲ್ಲಿ ಬರುತ್ತಾಳೋ"

ಆತನ ಮುಖದಲ್ಲಿ ಏನೂ ಆಸಕ್ತಿ ಮೂಡಲಿಲ್ಲ. ಸುಮ್ಮನೆ ಕುಳಿತಿದ್ದ. ಅಮ್ಮ ಬರುವಳೆಂದು ಖುಷಿಪಡಬಹುದೇನೋ ನಿರೀಕ್ಷಿಸಿದ ಅಜ್ಜಿಗೆ ನಿರಾಸೆ ಆಯಿತು.

ಅಮ್ಮ ಬರುವುದು ಅವನ ಪಾಲಿಗೇನೂ ಹೊಸದಲ್ಲ. ಮೂರು ನಾಲ್ಕು ತಿಂಗಳಿಗೆ ಬಂದು ನೋಡಿ ಹೋಗುತ್ತಿದ್ದಳು. ಅಪ್ಪನೂ ಬಂದು ನೋಡಿ ಹೋಗುತ್ತಿದ್ದ. ವರುಷಕ್ಕೆ ಹದಿನೈದು ದಿನ ತಮ್ಮೊಟ್ಟಿಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ಅವನಿಗೆ ಅಪರಿಚಿತರ ಸಂಗಡ ಒಡನಾಟ ಮಾಡಿದಂತೆ ಆಗುತ್ತಿತ್ತು. ಅವರು ಪ್ರೀತಿಸಿ ಮಾತನಾಡಿಸಿದರೂ ಇವನಿಗೆ ಮುಜುಗರ ಹಾಗಾಗಿ ಆಗಲೂ ಮೌನಿಯಾಗಿ ಇರುತ್ತಿದ್ದ. ಅವರ ಬಗ್ಗೆ ಮಧುರಭಾವನೆ ಅಳಿಸಿಹೋಗಿತ್ತು. ಹಾಗಾಗಿ ಅಮ್ಮ ಬರುತ್ತಾಳೆಂದು ಅಜ್ಜಿ ಅಂದಾಗ ಏನೂ ಅನಿಸಿರಲೇ ಇಲ್ಲ.

ದಿನ ಉರುಳಿತು. ಅಮ್ಮ ಬಂದಳು. ಸಂಜೀವ ಅಂಗಳದಲ್ಲೇ ಆಡುತ್ತಿದ್ದ. ಅವಳು "ಸಂಜೂಽಽ" ಎಂದು ಕರೆದಳು. ಇವನು ತಿರುಗಿ ನೋಡಿದ. ಒಮ್ಮೆ ಪರಿಚಯದ ನಗೆನಕ್ಕು ಪುನಃ ಆಟದಲ್ಲಿ ಮಗ್ನನಾದ. ತನ್ನನ್ನು ಕಂಡ ಕೂಡಲೇ ನೆಗೆದು ಬಂದು ತನಗೆ ತೆಕ್ಕೆ ಬೀಳುವನೆಂದುಕೊಂಡಿದ್ದ ಆಕೆಗೆ ಅತಿಯಾದ ಆಘಾತವಾಯಿತು.

"ಏನೋ ಸಂಜು, ಗುರುತು ಸಿಗಲಿಲ್ಲವೇನೋ ?"

"ಚಿಕ್ಕಮ್ಮ, ನೀನು ನನ್ನ ಅಮ್ಮ ಅಲ್ಲವಾ ?"

ಉತ್ತರ ಕೇಳಿ ಆಕೆ ದಿಙ್ಮೂಢಳಾದಳು. ಅವ್ಯಕ್ತ ವೇದನೆಯಿಂದ ಕಣ್ಣು ನೀರಾಡಿತು. ಮನದಲ್ಲೇ ಏನನ್ನೋ ನಿರ್ಧರಿಸಿದಳು.

ಅವಳು ಸಂಜೆ ತಾಯಿಯೊಟ್ಟಿಗೆ ಮಾತನಾಡುತ್ತ, "ಈ ಸಲ ಸಂಜೂನ ಕರೆದುಕೊಂಡು ಹೋದವಳು ಅವನನ್ನು ಅಲ್ಲೇ ಇಟ್ಟುಕೊಳ್ಳುತ್ತೇನೆ" ಎಂದಳು.

"ಯಾಕೆ?"

"ಅಲ್ಲ. ಅವನು ನಮ್ಮ ಮರೆತು ಬಿಡುತ್ತಾನೇನೋ ಅನ್ನುವ ಹೆದರಿಕೆ ಆಗುತ್ತ ಇದೆ."

"ಅವನು ನಮ್ಮನ್ನ ಬಹಳ ಹಚ್ಚಿಕೊಂಡು ಬಿಟ್ಟಿದ್ದಾನೆ. ಅವನು ಇಲ್ಲದಿದ್ರೆ ನಮ್ಮಿಬ್ಬರಿಗೂ ಬಹಳ ಬೇಜಾರು ಆಗುತ್ತದೆ. ನಿನ್ನ ಮಗೂನ ನೀನ್ ಕರೆದುಕೊಂಡು ಹೋಗುವದಾದ್ರೆ ನಾನು ಬೇಡ ಅನ್ನುವದಿಲ್ಲ. ಆದರೆ ಅವನನ್ನು ಹೇಗೆ ಸಂಭಾಳಿಸುತ್ತೀ."

"ಹೇಗಾದ್ರೂ ಆಗುತ್ತದೆ. ಮೇಲಾಗಿ ಈಗ ಸ್ವಲ್ಪ ದೊಡ್ಡವ ಆಗಿದ್ದಾನೆ."

"ಸರಿ, ನಿನ್ನಿಷ್ಟ ಬಂದಂತೆ ಮಾಡು" ಎಂದು ತಾಯಿ ಮಾತು ಮುಗಿಸಿದಳು.

ತಾನು ಇಲ್ಲಿಗೆ ಬೇಗನೆ ಹಿಂತಿರುಗುವದಿಲ್ಲ ಎನ್ನುವ ವಿಷಯ ಸಂಜೀವನಿಗೆ ಗೊತ್ತಾಯಿತು. "ಅಜ್ಜಿ, ನೀ ಬರುವದಿಲ್ವಾ ?" ಎಂದ.

"ನಾನ್ಯಾಕೆ ಬರ್ಲಿ ? ನೀನು ಇಲ್ಲಿ ಬರುವುದು ಬಹಳ ದಿನ ತಡ ಆಗುತ್ತದೋ"

ಸಂಜೀವನ ಬಾಯಿ ಸಪ್ಪಗೆ ಆಯ್ತು. ಹೋಗುವ ದಿನದ ವರೆಗೂ ಮಂಕಾಗಿದ್ದ.

ಬಸ್ಸಿನಲ್ಲಿ ಆತ ಕಿಟಕಿಯ ಅಂಚಿಗೇ ಕುಳಿತಿದ್ದ. ಮೌನವಾಗಿ ಹೊರನೋಡುತ್ತಿದ್ದ ಅವನ ತಲೆಗೂದಲಲ್ಲಿ ಅವನಮ್ಮ ಬೆರಳಾಡಿಸುತ್ತಿದ್ದಳು. ಆತ ಏನನ್ನು ಕಂಡಾಗಲೂ ಆಸಕ್ತಿಯಿಂದ ವಿಚಾರಿಸಲಿಲ್ಲ.

ಬಸ್ಸು ನಾಲ್ಕು ತಾಸು ಕ್ರಮಿಸಿದ ಮೇಲೆ ನಿಂತ ಒಂದು ನಿಲ್ದಾಣದಲ್ಲಿ ಅಮ್ಮ ಸಂಜೀವನಿಗೆ ಇಳಿಯಲು ಸೂಚಿಸಿದಳು. ಸಂಜೀವ ಅಮ್ಮನೊಟ್ಟಿಗೆ ಇಳಿದ. ಆಕೆ ಹೆಲ್ಮೆಟ್‌ನ್ನು ತಲೆಗೆ ಹಾಕಿಕೊಂಡ ಒಬ್ಬ ವ್ಯಕ್ತಿಯೊಡನೆ ಮಾತನಾಡಿದಳು. ಸಂಜೀವನಿಗೆ ಆತನ ಗುರುತು ಸಿಗಲಿಲ್ಲ.

"ಏನೋ. ಅಪ್ಪನ ಗುರ್ತು ಸಿಗಲಿಲ್ಲವೇನೋ?" ಎಂದು ಅಮ್ಮ ಅಂದಾಗಲೇ ಅವನು ಅರಿತದ್ದು, ಆತ ತನ್ನ ತಂದೆ ಎಂದು. ಅಪ್ಪ ಈಗ ಮೀಸೆಯನ್ನೂ ಬಿಟ್ಟಿದ್ದ. ಮೇಲಾಗಿ ತಲೆಗೆ ಹೆಲ್ಮೆಟ್. ನೋಡದೆ ಐದಾರು ತಿಂಗಳು ಆಗಿತ್ತು. ಹೀಗಾಗಿ ಆತ ಗುರುತಿಸದೇ ಇದ್ದದ್ದು ಸಹಜವೇ.

ತಂದೆ ಸಂಜೀವನನ್ನು ಎತ್ತಿಕೊಂಡ. ಅಮ್ಮ ಅವರನ್ನು ಹಿಂಬಾಲಿಸಿದಳು. ಇಬ್ಬರೂ ಮೋಟರ್ ಸೈಕಲ್ ಇಟ್ಟಲ್ಲಿಗೆ ಬಂದರು. ಸಂಜೂನನ್ನು ಮುಂದೆ ಕುಳ್ಳಿರಿಸಿಕೊಂಡು, ಅವನಮ್ಮನನ್ನು ಹಿಂದೆ ಕುಳ್ಳಿರಿಸಿಕೊಂಡು ಅಪ್ಪ ಗಾಡಿ ಬಿಟ್ಟ.

ಎರಡು ದಿನ ಕಳೆದ ಮೇಲೆ ಅವರ ಮನೆಗೆ ಒಬ್ಬ ಹೆಂಗಸು ಬಂದಳು. ಸಂಜೀವನನ್ನು ನೋಡಿಕೊಳ್ಳಲು ಆತನ ತಂದೆ ಆಕೆಯನ್ನು ಗೊತ್ತು ಮಾಡಿದ್ದರು. ಆಕೆ ಬೆಳಗ್ಗೆ ಒಂಬತ್ತು ಗಂಟೆಗೆ ಬರುತ್ತಿದ್ದಳು. ಸಂಜೆ ಆರು ಗಂಟೆಗೆ ಹೋಗುತ್ತಿದ್ದಳು. ಅವಳು ಬಂದ ಮೇಲೆ ಅಮ್ಮ ಆಫೀಸಿಗೆ ಹೋಗಲು ಸುರು ಮಾಡಿದಳು.

ಕೆಲಸದವಳೇ ಆತನಿಗೆ ಸ್ನಾನ ಮಾಡಿಸುತ್ತಿದ್ದಳು. ತಿಂಡಿ ಕೊಡುತ್ತಿದ್ದಳು. ಮಧ್ಯಾಹ್ನ ಊಟಕ್ಕೆ ಹಾಕುತ್ತಿದ್ದಳು. ಅಜ್ಜಿಯನ್ನೇ ಒಲ್ಲದ ಮನಸ್ಸಿನಿಂದ ಬಿಟ್ಟು ಬಂದ ಸಂಜೂಗೆ ಅಮ್ಮನ ಸಹವಾಸವೂ ಇಲ್ಲವಾಯಿತು. ಬಾಣಲೆಯಿಂದ ಬೆಂಕಿಗೆ ಬಿದ್ದಂಥ ಸ್ಥಿತಿ ಅವನದು. ಕ್ಷಣ ಕ್ಷಣಕ್ಕೂ ಪ್ರೀತಿಯಿಂದ ಮಾತನಾಡಿಸಿ ತಿನ್ನಲು, ಉಣ್ಣಲು ನೀಡುವ ಅಜ್ಜಿಯೆಲ್ಲಿ ? ಸಂಬಳದವಳೆಲ್ಲಿ ? ಹಣ ಕೊಟ್ಟು ಪ್ರೀತಿ ಅನುಕಂಪಗಳನ್ನು ಕೊಂಡವರು ಇದ್ದಾರೆಯೇ ಈ ಜಗದಲ್ಲಿ ? ಕೇವಲ ಈ ಭಾಗ್ಯವನ್ನು ನೀಡಲಿಕ್ಕಾಗಿಯೇ ಅಮ್ಮ ಅವನನ್ನು ಕರೆತಂದಳೆ ?

ದಿನದಿನಕ್ಕೂ ಸಂಜೀವ ಸೊರಗತೊಡಗಿದ. ಕನಸಿನಲ್ಲಿ ಕನವರಿಸುತ್ತಿದ್ದ. ಕೆಲವೊಮ್ಮೆ ಅಜ್ಜಿ ಎಂದು ಕೂಗುತ್ತಿದ್ದ. ಅಪರೂಪಕ್ಕೆ ಒಮ್ಮೊಮ್ಮೆ ಮೂತ್ರವನ್ನೂ ಮಾಡಿಕೊಳ್ಳುತ್ತಿದ್ದ. ಆ ರೀತಿ ಆದಾಗ ಅಮ್ಮನಿಂದ ತಪ್ಪದೆ ಬೈಗುಳ. ಪೆಟ್ಟು ತಿನ್ನಬೇಕಿತ್ತು. ಆಗ ಆತನಿಗೆ ನಿಜಕ್ಕೂ ನಾಚಿಕೆ ಆಗುತ್ತಿತ್ತು. ಅಮ್ಮ ಹತ್ತು ಗಂಟೆಗೆ ಆಫೀಸಿಗೆ ಹೋದರೆ ಒಂದೂವರೆಗೆ ಬರುತ್ತಿದ್ದಳು. ಹಾಗೇ ಊಟ ಮಾಡಿ ಮತ್ತೆ ಓಡುತ್ತಿದ್ದಳು. ಮಗ ಉಂಡಿದ್ದಾನೋ ಇಲ್ಲವೋ ? ಎಂದು ಪ್ರಶ್ನಿಸುವ ತಾಳ್ಮೆಯೂ ಆಕೆಗೆ ಒಮ್ಮೊಮ್ಮೆ ಇರುತ್ತಿರಲಿಲ್ಲ.

ಸಂಜೀವ ನೋಡುತ್ತಲೇ ಇದ್ದ. ಇತ್ತೀಚೆಗೆ ಅಮ್ಮ ಸ್ವಲ್ಪ ಸ್ವಲ್ಪ ಗಮಂದ ಆಗುತ್ತ ಬಂದಿದ್ದಳು. ಅಪ್ಪ ಆಕೆಯನ್ನು ಹೆಚ್ಚು ಹೆಚ್ಚು ಆಸಕ್ತಿಯಿಂದ ವಿಚಾರಿಸುವಂತೆ ಅನಿಸುತ್ತಿತ್ತು. ಮೊದಲಿನಿಂದಲೂ ಅಪ್ಪ ಹಾಗೆಯೋ ? ಅಥವಾ ತನ್ನನ್ನು ನಿರ್ಲಕ್ಷಿಸುತ್ತಿದ್ದರಿಂದ ಹಾಗನಿಸಿತೋ ?

ಕೆಲಸದಾಕೆ ಹೇಳುತ್ತಿದ್ದಳು "ನಿನಗೊಬ್ಬ ತಮ್ಮ ಬರುತ್ತಾನೋ ?" ಎಂದು. ಆತನಿಗೆ ಆಶ್ಚರ್ಯ ಅನಿಸಿತು. ಆಸಕ್ತಿಯಿಂದ ಕೇಳಿಯೇ ಬಿಟ್ಟ. "ಎಲ್ಲಿಂದ್ಲೇ ?"

"ನೋಡು ಇಲ್ಲಿದ್ದಾನೆ" ಎಂದು ಅವನಮ್ಮನ ಹೊಟ್ಟೆಯ ಕಡೆ ಬೆರಳುಮಾಡಿ ತೋರಿಸಿದಳು. ಇವನಿಗೆ ಮತ್ತೂ ಆಶ್ಚರ್ಯ.

"ಅಮ್ಮನ ಹೊಟ್ಟೆಯಲ್ಲಿ ತಮ್ಮ ಇದ್ದಾನಾ ?"

"ಅಲ್ಲ, ನಿನಗೆ ತಮ್ಮ ಬೇಕೋ ? ತಂಗಿ ಬೇಕೋ ?" ಬೇಡಿದ್ದನ್ನೇ ತಕ್ಷಣ ಕೊಡುವ ರೀತಿಯಲ್ಲಿ ಕೇಳಿದಳು. ಅವನು ಉತ್ತರ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅಮ್ಮ ಅವನಿಗೆ ಒಂದು ವಿಚಿತ್ರವಾಗಿ ಕಂಡಳು.

ಸಂಜೀವ ಈಗೀಗ ನಾಲ್ಕಾರು ಹುಡುಗರ ಗೆಳೆತನ ಬೆಳೆಸಿದ್ದ. ಅವರ ಜತೆಯಲ್ಲಿ ಆಡಲು ಹೋಗುತ್ತಿದ್ದ. ಅಪ್ಪ ಮತ್ತು ಅಮ್ಮ ಸಂಜೆ ಆಫೀಸಿನಿಂದ ಬರುತ್ತಿದ್ದರು. ಆ ವೇಳೆಗೆ ಕೆಲಸದವಳು ಹೋಗಿರುತ್ತಿದ್ದಳು. ಇವರು ಬಂದವರು ತಿಂಡಿ ತಿಂದು ಹೊರಗೆ ಹೋಗುತ್ತಿದ್ದರು. ಹಾಗೆ ಹೋಗುವಾಗ ಇವನನ್ನೂ ಕರೆದುಕೊಂಡು ಹೋಗುತ್ತಿದ್ದರು. ಎಲ್ಲಾದರೂ ಹೋಗಿ ಇಬ್ಬರೂ ಕುಳಿತು ಏನೇನೋ ಹರಟುತ್ತಿದ್ದರು. ಇವನಿಗೆ ಬಲು ಬೇಸರ. ತನ್ನ ಪಾಡಿಗೆ ಒಬ್ಬನೇ ದೂರ ಹೋಗಿ ಇರುತ್ತಿದ್ದ.

ಒಂದು ದಿನ ಸಂಜೆ ಅಪ್ಪ ಹೇಳಿದ "ಸಂಜೂ, ನೀನು ಪಕ್ಕದ ಮನೆಯಲ್ಲಿ ಆಡಿಕೊಂಡಿರು. ನಾನು ಮತ್ತು ಅಮ್ಮ ಒಂದು ಪಾರ್ಟಿಗೆ ಹೋಗಿ ಬರುತ್ತೇವೆ."

'ಪಾರ್ಟಿ' ಶಬ್ದದ ಅರ್ಥ ಗೊತ್ತಾಯಿತೋ ಇಲ್ಲವೋ, ಅಂತೂ ಸಂಜೀವ ತಲೆ ಅಲ್ಲಾಡಿಸಿದ. ಅವನಿಗೆ ಅವರ ಜತೆಯಲ್ಲಿ ಹೋಗುವ ಆಸಕ್ತಿ ಮೊದಲೇ ಇರಲಿಲ್ಲ. ಅಪ್ಪ ಬೀಗ ಹಾಕಿ ಮೋಟಾರು ಬೈಕ್ ಸ್ಟಾರ್ಟ್ ಮಾಡಿದ. ಅಮ್ಮ ಬಂದು ಹಿಂದೆ ಕುಳಿತಳು. ಇಬ್ಬರೂ ಇವನಿಗೆ 'ಟಾ ಟಾ' ಮಾಡಿ ಹೊರಟುಹೋದರು. ಸಂಜೀವ ಪಕ್ಕದ ಮನೆಗೆ ಹೋದ. ಅಲ್ಲಿ ಇಬ್ಬರು ಚಿಕ್ಕ ಹುಡುಗರು ಇದ್ದರು. ಅವರ ಜತೆಯಲ್ಲಿ ಆಡತೊಡಗಿದ. ಆಟದ ಮಧ್ಯೆ ಅವರ ಟೇಬಲ್‌ಲ್ಯಾಂಪ ಉರುಳಿಸಿಬಿಟ್ಟ. ಅದರ ಬಲ್ಬು ಒಡೆದುಹೋಯಿತು. ಸಂಜೀವನಿಗೆ ಬಹಳ ಭಯ ಆಯಿತು. ಆದರೆ ಆ ಮನೆಯವರು ಏನೂ ಅನ್ನಲಿಲ್ಲ. ಮೇಲಾಗಿ ಅವರೇ ಅವನಿಗೆ ಧೈರ್ಯ ಹೇಳಿದರು. ಅವನ ಅಪ್ಪ ಅಮ್ಮ ಎಂಟು ಗಂಟೆ ಆದರೂ ಮರಳಲಿಲ್ಲ. ಆ ಮನೆಯವರು ತಮ್ಮ ಮನೆಯಲ್ಲೇ ಉಣ್ಣಲು ಆತನಿಗೆ ಹೇಳಿದರು. ಆದರೆ ಆತ ಒಪ್ಪಲಿಲ್ಲ. ಹಾಗೇ ಕುಳಿತುಕೊಂಡು ಕುಳಿತಲ್ಲೇ ತೂಕಡಿಸುತ್ತಿದ್ದ. ಸುಮಾರು ಒಂಬತ್ತುವರೆ ಗಂಟೆಗೆ ಅವರು ವಾಪಸಾದರು. "ಏನು ನಮ್ಮ ಹುಡುಗ ಸುಮ್ಮನೆ ಇದ್ದನಾ ? ಇಲ್ಲ ಏನಾದರೂ ತೊಂದರೆ ಮಾಡಿದನಾ ?" ಎಂದು ಕೇಳಿದಳು ಅವನ ಅಮ್ಮ.

"ತುಂಬಾ ಒಳ್ಳೆಯ ಹುಡುಗನ್ರಿ. ಊಟಕ್ಕೆ ಬಾ ಅಂದ್ರೂ ಬರಲಿಲ್ಲ. ಏನೋ ಆಕಸ್ಮಾತ್ತಾಗಿ ಟೇಬಲ್ ಲ್ಯಾಂಪ್ ಬೀಳಿಸಿಬಿಟ್ಟ. ಬಲ್ಬು ಹೋಯ್ತು. ನಾವೇನು ಅವನಿಗೆ ಅನ್ನಲಿಲ್ಲ. ನೀವು ಮಾತ್ರ ಅವನಿಗೆ ಹೊಡಿಯಬೇಡಿ" ಎಂದರು.

ಅಮ್ಮ ಅವನನ್ನು ಮನೆಗೆ ಕರೆದುಕೊಂಡು ಬಂದಳು. "ಏನೋ ಸುಮ್ಮನೆ ಇರೋದು ಬಿಟ್ಟು ಉದ್ಧಾರ ಮಾಡ್ದಾ ?" ಎಂದು ಕಿವಿಯನ್ನು ಹಿಂಡಿ ತಲೆಯ ಮೇಲೆ ತಟ್ಟಿದಳು. ಅಪ್ಪ ಹೊಡೆಯಬೇಡ ಎಂದು ಹೇಳಿದ. ಸಂಜೂನ ಹೊಟ್ಟೆ ಚುರ್ ಅನ್ನುತ್ತಿತ್ತು. ಅಮ್ಮ ತನ್ನನ್ನು ಇಷ್ಟೊಂದು ನಿರ್ಲಕ್ಷಿಸಿದ್ದುದನ್ನು ಕಂಡು ಅಪಮಾನವಾಯಿತು

ಅವನಿಗೆ. ಆತನ ಕಣ್ಣಲ್ಲಿ ನೀರು ಬರಲಿಲ್ಲ. ತುಟಿಯನ್ನು ಹಲ್ಲಿನಿಂದ ಕಚ್ಚಿ ದುಃಖವನ್ನು ತಡೆಹಿಡಿದನು. ಅಮ್ಮ ಊಟಕ್ಕೆ ಕರೆದಳು. 'ಬರುವದಿಲ್ಲ' ಎಂದನು. ಆಕೆಯೂ ಒತ್ತಾಯಿಸಲಿಲ್ಲ. ಏನೇನೋ ಅಂದುಕೊಳ್ಳುತ್ತಿದ್ದಳು. ಅಲ್ಲೇ ಸೋಫಾದ ಮೇಲೆ ಮಲಗಿಕೊಂಡನು. ನಿದ್ರೆ ಆವರಿಸಿತು.

ರಾತ್ರಿ ಆದಂತೆ ಸಂಜೂಗೆ ಜ್ವರ ಏರತೊಡಗಿತು. "ಅಜ್ಜಿ ಅಜ್ಜಿ" ಎಂದು ಒದರತೊಡಗಿದ. ಅಪ್ಪ ಅಮ್ಮ ಇಬ್ಬರೂ ಎದ್ದು ನೋಡಿದರು. ಹಣೆ ಸುಡುತ್ತಿತ್ತು. ಅವನಪ್ಪ ಹತ್ತಿರದಲ್ಲೇ ಇದ್ದ ಡಾಕ್ಟರನ್ನು ಕರೆತಂದ. ಅವರು ಇಂಜಕ್ಷನ್ ಮಾಡಿ ಇನ್ನೇನೋ ಔಷಧಿ ಕೊಟ್ಟು ಹೋದರು. ಅವನಿಗೆ ಈಗ ನಿದ್ರೆ ಆವರಿಸಿತು. ತಾಸಿಗೊಮ್ಮೆ ಕನವರಿಸುತ್ತಿದ್ದ. ಆಗಲೂ ಅಸ್ಪಷ್ಟವಾಗಿ 'ಅಜ್ಜಿ' ಎನ್ನುತ್ತಿದ್ದ. ಆತನ ಸ್ಥಿತಿಯನ್ನು ನೋಡಿ ಅಮ್ಮನ ಕಣ್ಣಲ್ಲಿ ನಿಜಕ್ಕೂ ನೀರು ಬಂತು. ಅಪ್ಪ ಧೈರ್ಯಗೆಟ್ಟ. ಮರುದಿನ ಮಧ್ಯಾಹ್ನದ ವರೆಗೂ ಸಂಜೂನ ಜ್ವರ ಇಳಿಯಲಿಲ್ಲ. ಅಮ್ಮ ಕೂಡಲೇ ಬರುವಂತೆ ತಾಯಿಗೆ ತಂತಿ ಬಿಟ್ಟಳು.

ಅಜ್ಜಿ ಆದರ ಮರುದಿನ ಮಧ್ಯಾಹ್ನ ಬಂದಳು. ಸಂಜೀವ ಹಾಸಿಗೆಯಲ್ಲಿ ಕೊರಡಾಗಿ ಮಲಗಿದ್ದ. ಆತನನ್ನು ನೋಡಿ ಅಜ್ಜಿಯ ಎದೆ ಒಡೆಯಿತು. ಮಗಳೆಡೆಗೆ ತೀಕ್ಷ್ಣ ನೋಟ ಬೀರಿ ಮೊಮ್ಮಗನ ಹಣೆಯನ್ನು ಸ್ಪರ್ಶಿಸಿದಳು. 'ಸಂಜೂ ಸಂಜೂ' ಎಂದು ಮೃದುವಾಗಿ ಕಿವಿಯಲ್ಲಿ ಕೂಗಿದಳು. ಸಂಜೀವ ನಿಧಾನವಾಗಿ ಕಣ್ಣು ತೆರೆದು ಅಜ್ಜಿಯನ್ನು ನೋಡಿದ. ಮತ್ತೆ ಮತ್ತೆ ನೋಡಿದ. ಒಮ್ಮೆಲೇ ಎದ್ದು ಕುಳಿತು "ಅಜ್ಜಿ ಅಜ್ಜಿ" ಎಂದು ಅಜ್ಜಿಯನ್ನು ಗಟ್ಟಿಯಾಗಿ ಬಿಗಿದಪ್ಪಿಕೊಂಡು ಅಳತೊಡಗಿದ. ಅಜ್ಜಿ ಅವನ ಬೆನ್ನಮೇಲೆ ಕೈ ನೇವರಿಸತೊಡಗಿದಳು. ಅಜ್ಜಿಯನ್ನು ಬಿಟ್ಟು ಬಂದಂದಿನಿಂದ ಇಂದಿನ ವರೆಗೆ ಆತ ಅನುಭವಿಸಿದ ಯಾತನೆ, ತಂದೆ ತಾಯಿಗಳ ಮೇಲಿನ ಕೋಪ, ತಿರಸ್ಕಾರಗಳು ಇದೀಗ ಕಣ್ಣೀರಿನ ರೂಪದಲ್ಲಿ ಹೊರಬೀಳತೊಡಗಿದವು. ಸುಮಾರು ಮುಕ್ಕಾಲು ಗಂಟೆಯ ವರೆಗೂ ಅತ್ತ. ನಂತರ ಸುಮ್ಮನಾದ. ಅಜ್ಜಿ ಆತನಿಗೆ ಸಮಾಧಾನದ ಮಾತನ್ನು ಹೇಳಿ ಊಟಕ್ಕೆ ತರಲು ಮಗಳಿಗೆ ತಿಳಿಸಿದಳು. ತಾನು ಒಂದೊಂದೇ ತುತ್ತನ್ನು ಕಲಸಿ ಅವನ ಬಾಯಲ್ಲಿ ಇಟ್ಟಳು. ಸಂಜೀವ ನಿಧಾನವಾಗಿ ನಡುನಡುವೆ ನೀರು ಕುಡಿಯುತ್ತ ನುಂಗಿದನು. ಊಟದ ನಂತರ ಅಜ್ಜಿ ಅವನಿಗೆ ಔಷಧಿ ಕುಡಿಸಿ ಮಲಗಿಸಿದಳು. ತಾನೂ ಆತನ ಪಕ್ಕದಲ್ಲಿಯೇ ಮಲಗಿದಳು. ಸಂಜೆ ವೇಳೆಗೆ ಸಂಜೀವನ ಜ್ವರದ ತಾಪ ಇಳಿಯುತ್ತ ಬಂದಿತ್ತು.

ಮೂರು ದಿನಗಳಲ್ಲಿ ಸಂಜೀವ ಮೊದಲಿನಂತಾದ. ಆತ ಅಜ್ಜಿಯನ್ನೇ ಹಚ್ಚಿಕೊಂಡಿದ್ದ. ಎಂಟು ದಿನಗಳ ನಂತರ ಅಜ್ಜಿ ಊರಿಗೆ ಹೋಗುವೆನು ಎಂದಳು. ಆತ ತಾನೂ ಬರುವೆನು ಎಂದು ಹಟಹಿಡಿದ. ಅಜ್ಜಿ ಅವನ ತಾಯಿಗೆ ಹೇಳಿದಳು

"ಹ್ಯಾಗೂ ನಿನಗೆ ಎಂಟು ತಿಂಗಳು ಆಗಿವೆ. ಇನ್ನೊಂದು ತಿಂಗಳಿಗೆ ಹಡೆಯುತ್ತಿ. ಇವನು ಇಲ್ಲಿದ್ದರೆ ನಿನಗೆ ಇನ್ನೂ ಸ್ವಲ್ಪ ಹೆಚ್ಚಿಗೆ ಕೆಲಸ ಬೀಳುತ್ತಿದೆ. ಇವನನ್ನು ನಾನು

ಒಯ್ಯುತ್ತೇನೆ. ನೀನು ಹಡೆಯುವ ಕಾಲಕ್ಕೆ ನಾನು ಬರುತ್ತೇನೆ. ಆಗ ಇವನನ್ನು ಕರೆ ತರುತ್ತೇನೆ."

ತಾಯಿಯ ಮಾತಿಗೆ ಆಕೆ ಏನೂ ಹೇಳಲಿಲ್ಲ. ಸಂಜೀವ ತನ್ನ ಹೊಟ್ಟೆಯಲ್ಲಿ ಹುಟ್ಟಿದರೂ ತಾನು ಅವನಿಗೆ ತಾಯಿ ಆಗಲಿಲ್ಲವೆಂಬ ಕಠೋರ ಸತ್ಯದ ಅರಿವು ಆಕೆಗಾಯಿತು. ಮರುದಿನ ಅಜ್ಜಿಯ ಜೊತೆಗೆ ಸಂಜೀವ ಊರಿಗೆ ಹೊರಟ.

ಒಂದು ತಿಂಗಳ ನಂತರ ಸಂಜೀವನ ಅಜ್ಜನಿಗೆ. ಅಜ್ಜಿಯನ್ನು ಕಳಿಸಲು ಟೆಲಿಗ್ರಾಂ ಬಂದಿತು. ಸಂಜೀವನ ಅಮ್ಮನಿಗೆ ಆಸ್ಪತ್ರೆಗೆ ಸೇರಿಸಿದ್ದರಂತೆ. ಕೂಡಲೆ ಅಜ್ಜಿ ಮೊಮ್ಮಗನನ್ನು ಕರೆದುಕೊಂಡು ಹೊರಟಳು.

ಇಬ್ಬರೂ ಮನೆಗೆ ಹೋದರು. ಮನೆಗೆ ಬೀಗ ಹಾಕಿತ್ತು. ಪಕ್ಕದವರ ಮನೆಯಲ್ಲಿ ವಿಚಾರಿಸಿ ಆಸ್ಪತ್ರೆಗೆ ಬಂದರು. ಬಹಳ ಹುಡುಕಾಡಿದ ಮೇಲೆ ಆಪರೇಷನ ಕೋಣೆಯ ಹೊರಗೆ ಸಂಜೀವನ ಅಪ್ಪ ಜೋಲುಮೋರೆ ಹಾಕಿಕೊಂಡು ನಿಂತದ್ದು ಕಾಣಿಸಿತು. ಅತ್ತೆಯನ್ನು ನೋಡಿದವನೆ ಹೇಳಿದ

"ನೋವು ಶುರು ಆಗಿ ಎರಡು ದಿನ ಆಗಿತ್ತು. ನಿನ್ನೇ ಕರೆದುಕೊಂಡು ಬಂದು ಸೇರಿಸ್ದೆ. ಇವತ್ತು ಪರೀಕ್ಷಿಸಿದ ಡಾಕ್ಟರರು, 'ಶಿಶು ಹೊಟ್ಟೆಯಲ್ಲಿಯೇ ಸತ್ತಿದೆ. ಆಪರೇಷನ್ ಮಾಡಿ ತೆಗೆಯಬೇಕು' ಎಂದರು. ಈಗ ಆಪರೇಷನ್ ಮಾಡುತ್ತಿದ್ದಾರೆ".

ಅಜ್ಜಿ ಮೌನವಾದಳು. ಇಬ್ಬರೂ ಆಪರೇಷನ್ ಕೋಣೆಯ ಬಾಗಿಲ ಕಡೆ ಆತಂಕದಿಂದ ನೋಡತೊಡಗಿದರು. ಬಹಳ ವೇಳೆ ಕಳೆದ ಮೇಲೆ ಡಾಕ್ಟರರು ಕೈ ಒರೆಸಿಕೊಳ್ಳುತ್ತ ಹೊರಗೆ ಬಂದರು.

"ಡಾಕ್ಟರ ಏನಾಯ್ತು ?" ಏಕಕಾಲದಲ್ಲಿ ಇಬ್ಬರೂ ಕೇಳಿದರು.

"ನಾನು ಮೊದಲು ಹೇಳಿದ ಹಾಗೆಯೇ ಆಗಿತ್ತು. ಸ್ವಲ್ಪ ವೇಳೆ ಹೋಗಿದ್ದರೆ ದೊಡ್ಡ ಜೀವಕ್ಕೇ ಅಪಾಯವಿತ್ತು. ನೋಡಿ ಮಿಸ್ಟರ್, ನೀವು ಬೇಸರ ಮಾಡಿಕೊಳ್ಳಬಾರದು. ಗರ್ಭಕೋಶಕ್ಕೆ ತೀವ್ರ ಧಕ್ಕೆ ಆಗಿದೆ. ನಿಮಗೆ ಇನ್ನು ಮಕ್ಕಳಾಗುವ ಸಾಧ್ಯತೆ ಇಲ್ಲ." ಎಂದರು. ಸಂಜೀವನ ಕಡೆ ತಿರುಗಿ "ಇವನು ನಿಮ್ಮ ಹುಡುಗ ಅಲ್ಲವಾ ?" ಎಂದರು. ಇವನನ್ನು ನೋಡಿ ಸಮಾಧಾನ ಪಟ್ಟುಕೊಳ್ಳಿ ಎನ್ನುವಂತೆ.

ಅಪ್ಪ ಸಂಜೀವನ ಕಡೆ ನೋಡಿದ. ಆತ ಇನ್ನೆಲ್ಲೋ ದೃಷ್ಟಿ ನೆಟ್ಟಿದ್ದ.

□ □

# ಹೀಗೊಂದು ಅನುಭವ

---

● ಮೋಹನ ನಾಗಮ್ಮನವರ

ಕಟ್ಟೆ ಕಟ್ಟನಿಂತ ಆಣೆಕಟ್ಟಿನ
ನೀರಾಗಿದ್ದ ನಾನಾಗ, ಒಮ್ಮೆ
ಕಟ್ಟೆಯೊಡೆದು ಬಯಲಿಗೆ ಬಿದ್ದೆ.
ಹಳ್ಳಕೊಳ್ಳಗಳ, ಉಬ್ಬು ತಗ್ಗುಗಳ
ಮಧ್ಯದಲ್ಲಿ ರಭಸದಿಂದ ಹರಿದಿದ್ದೆ.
ಕಣಿವೆಯಾಳದ ತಗ್ಗು ನನ್ನ ಕೈಬೀಸಿ ಕರೆದಿತ್ತು.
ಕೊಳ್ಳದಾ ಕೊರಳಿನಿಂದ ನಿನದಿಸುವ
ಹಕ್ಕಿಗಳಿಂಚರದ ಮಂಜುಳ ದನಿ
ನನಗಾಗಿ ಕಾದಿದೆಯೆನಿಸುತ್ತಿತ್ತು.
ನನಗೂ ನುಗ್ಗಬೇಕೆಂಬ ಆವೇಶ ತುಂಬಿತ್ತು.
ಕರೆದ ಕಣಿವೆಯೊಳಗೆ ನಾ ತುಂಬಿಕೊಂಡಿದ್ದೆ.
ಕಟ್ಟು ಬಿಚ್ಚಿದ ಹುಚ್ಚು ಕುದುರೆಯ ವೇಗ ನನ್ನದು.
ನನ್ನೊಳಗಿನದೆಲ್ಲ ಹರಿಬಿಟ್ಟು
ಕೊಚ್ಚಿಹೋಗುವ ಯತ್ನ ನಡೆಸಿದ್ದೆ.
ನಾ ಹರಿದ ರಭಸಕ್ಕೆ
ಆಳತುಂಬಿದ ಕಣಿವೆ ಸಂತೃಪ್ತಿಯ
ಉಸಿರು ಬಿಡುತಲಿತ್ತು.
ಹೊಸಮಣ್ಣಿನೊಂದಿಗೆ ನಾ ಬೆರೆತ
ಕಂಪು ಗಾಳಿಯೊಳಗೆಲ್ಲ ಹರಡಿತ್ತು.
ಕಣಿವೆ ಕರೆದ ಕೈಗಳೊಳಗೆ
ಅದ ತೆರೆದ ವಿಶಾಲತೆಗೆ
ನಾ ಸಿಲುಕಿ ನಡೆದಿದ್ದೆ:
ಹೊಸ ಬದುಕಿನಲಿ ಹೊಸತೊಂದರ
ಅನುಭವ ಪಡೆದಿದ್ದೆ.
ಮಲೆತು ನಿಂತ ನೀರಾಗುವುದಕ್ಕಿಂತ
ಸ್ವಚ್ಛಂದವಾಗಿ ಹರಿಯುತ್ತಾ ಓಡುವಲ್ಲಿ
ಎದುರುಬಂದದ್ದರ ಮೇಲೆರುಗುತ್ತ ನಡೆವ ಹುಚ್ಚು ವೇಗದಲ್ಲಿ
ಹೊಸತೇನೊ ಇದೆಯೆನ್ನಿಸುತ್ತಲಿತ್ತು.

□ □

# ಹಚ್ಚೆ : ಒಂದು ಪರಿಚಯ

● ವಸಂತಮಾಲಾ ಜವಳಿ

ಹಚ್ಚೆ, ಒಂದು ವಿಶಿಷ್ಟವಾದ ಜಾನಪದ ಕಲೆ. ಕರ್ನಾಟಕದಲ್ಲಿ ಈ ಕಲೆಯ ಪರಿವೀಕ್ಷಣೆಯಾಗಲೀ, ಅಧ್ಯಯನ, ಪ್ರಕಟಣೆಗಳಾಗಲೀ ಇಲ್ಲಿಯ ವರೆಗೆ ನಡೆಯದಿರುವುದು ಅತ್ಯಂತ ದುರದೃಷ್ಟಕರ. ಈ ಕಲೆಯನ್ನು ಬದುಕಿಸಿದ ಹಿರಿಯರು ಕಣ್ಮರೆಯಾಗುವ ಮೊದಲು ವಿದ್ವಾಂಸರು, ಸಂಶೋಧಕರು ಕ್ರಿಯಾಶೀಲರಾಗಬೇಕಾಗಿದೆ. "ಐದೆ ಅಣಚಿಯಿಪ್ಪವಳಿಗೆ ಸೌಭಾಗ್ಯದ ಹೂವಿನ ಬೊಟ್ಟಿಕ್ಕಿ" ಎಂಬ ಬಸವಣ್ಣನವರ ವಚನ ಹಾಗೂ "ಅಣಚಿಕದಿಂ ಕೈಕೊಳ್ ಬಿನ್ನಾಣಿ ಭಾಗ್ಯದ ಭದ್ರಲಕ್ಷಣದ ಪದದೊಳ್ ಸಂದೀ ಸೌಭಾಗ್ಯದಿಂ ಸ್ತ್ರೀಜನಗಳಿಂ ಪಡೆಗು" ಎಂಬ ಸೂಕ್ತಿ ಸುಧಾರ್ಣವದ (ಸು. ಕ್ರಿ.ಶ. ೧೨೦೦) ವಾಕ್ಯಗಳು ಹಚ್ಚೆಯ ಪ್ರಾಚೀನತೆಯನ್ನು ಪತ್ತೆ ಹೇಳುವ ಲಿಖಿತ ದಾಖಲೆಗಳಾಗಿರುತ್ತವೆ.


ಅಣಚಿ-ಅಣಚಿತನ ಪದಗಳು ಸುಮಂಗಲಿ, ಮುತ್ತೈದೆತನ ಎಂಬ ಅರ್ಥದಲ್ಲಿ ಬಳಕೆಯಾಗುತ್ತವೆ. ಜಾನಪದ ಗೀತಸಾಹಿತ್ಯದಲ್ಲಿ "ಗಂಗವ್ವ ಚುಚ್ಚಿಕೊಂಡ ಹಣಚಿ ಬೊಟ್ಟು ಗರತಿತನ ತಂತ" ಎಂಬ ಮಾತು ಮೇಲಿನ ಅರ್ಥವನ್ನು ದೃಢೀಕರಿಸುತ್ತದೆ. ಹೆಣ್ಣುಮಕ್ಕಳಿಗೆ ಹಚ್ಚೆ ಹಾಕಿಸದೆ ಮದುವೆ ಮಾಡುವುದಿಲ್ಲವೆಂಬ ಹೇಳಿಕೆಯೂ ಇದಕ್ಕೆ ಪೂರಕವಾಗಿ ನಿಲ್ಲುತ್ತದೆ.

ಈ ಹಚ್ಚೆ ಕಲೆ ಭಾರತದಲ್ಲಷ್ಟೇ ಅಲ್ಲ, ಅಮೇರಿಕೆ, ಇಂಗ್ಲಂಡ, ಜಪಾನ, ಚೀನಾ, ಈಜಿಪ್ತ, ಗ್ರೀಕ, ಬ್ರಿಟಾನಿಯಾ ಮುಂತಾದ ದೇಶಗಳಲ್ಲಿಯೂ ಬಳಕೆಯಲ್ಲಿದ್ದಿತು. ಹೀಗೆ ಹಚ್ಚೆಕಲೆ ವಿಶ್ವವ್ಯಾಪಿಯಾಗಿ ಬೆಳೆದುಬಂದಿದೆ.

ಅಲಂಕಾರಪ್ರಿಯನಾದ ಮಾನವ ಮೊದ ಮೊದಲು ಅಳಿಸುವಂತಹ ಅಂದರೆ ಹಿಟ್ಟಿನಿಂದಲೋ, ಕಲ್ಲಿನ ಪುಡಿಯಿಂದಲೋ, ಎಲೆಯ ರಸದಿಂದಲೋ, ತಾತ್ಪೂರ್ತಿಕವಾಗಿ ರಚಿಸಿಕೊಂಡ. ಈ ಕಲೆ ತನ್ನ ಚರ್ಮದ ಮೇಲೆ ಶಾಶ್ವತವಾಗಿ ಉಳಿಯುವಂತೆ ಮಾಡಿಕೊಳ್ಳಲು ಹಚ್ಚೆಯನ್ನು ಸೃಷ್ಟಿಸಿರಬೇಕು. ಇದಲ್ಲದೆ ಎಲ್ಲ ಗಂಡಸರೂ, ಹೆಂಗಸರೂ, ಸಾರ್ವತ್ರಿಕವಾಗಿ ಹೇಳುವಂತೆ ಮಾನವರು ಸತ್ತ ನಂತರ ದೇಹದ ಸೌಂದರ್ಯವರ್ಧಕವಾದ ಎಲ್ಲ ವಸ್ತುಗಳನ್ನು –ಬಟ್ಟೆ, ವಸ್ತ್ರ, ಒಡವೆಗಳನ್ನು– ತೆಗೆದು

---

* ಇದನ್ನು ಹಾಡುವಾಗ ಅಲ್ಲಲ್ಲಿ ಹೆಸರು ಬದಲಾಯಿಸುತ್ತಾರೆ.




ಹಚ್ಚೆಯ ಕೆಲವು ಮಾದರಿಗಳು




ಹಚ್ಚೆಯ ಕೆಲವು ಮಾದರಿಗಳು

ಕೊಳ್ಳುವರು. ಆದರೆ ಈ ಹಚ್ಚೆಯನ್ನು ತೆಗೆದುಕೊಳ್ಳಲುಬಾರದು. ಆದುದರಿಂದ ಈ ಜೀವದ ದೇಹದ ಸಂಗಾತಿಯಾಗಿ ಬರುವುದು, ಈ 'ಹಚ್ಚೆ'. ಮಾನವನಿಗೆ ಈ ಹಚ್ಚೆ ಶಾಶ್ವತ ಎನ್ನುವ ನಂಬಿಕೆಯಿಂದ ಎಲ್ಲರೂ ಇದನ್ನು ಅನುಸರಿಸುವಂತೆ ಆಯಿತು. ಭಾರತೀಯರು ದೇವರಲ್ಲಿ, ಮೂಢನಂಬಿಕೆಗಳಲ್ಲಿ ಅಪಾರವಾದ ನಂಬಿಕೆ ಇಟ್ಟವರು. ಅದರಲ್ಲಿ ಹೆಣ್ಣುಮಕ್ಕಳಿಗೆ ಈ 'ಮುತ್ತೈದೆತನ' ಭಾಗ್ಯವೇ ಒಂದು ಶೋಭೆ. ಈ ಮುತ್ತೈದೆತನವಿರದ ಹೆಣ್ಣು 'ಸುವಾಸನೆ ಇಲ್ಲದ ಹೂವಿನಂತೆ'. ಆದುದರಿಂದ ಈ ಕಲೆ ಹೆಚ್ಚಾಗಿ ಗಂಡಸರಿಗಿಂತ ಹೆಂಗಸರನ್ನು ಆಕರ್ಷಿಸುವಂತೆ ಪ್ರೇರೇಪಿಸಿತು. ಇದಲ್ಲದೆ ಹೆಣ್ಣು ಸಹನಾಮೂರ್ತಿ. ಆದುದರಿಂದ ಹೆಣ್ಣಿಗೆ ಬಂಗಾರದ ಒಡವೆಯ ಶೋಭೆಯ ಜೊತೆಗೆ ಈ ಮುತ್ತೈದೆತನ ಶೋಭೆ ಚಿನ್ನಕ್ಕೆ ಪುಟಕೊಟ್ಟಂತಾಗಿರಬೇಕು.

ಹಚ್ಚೆ ಹಾಕಿಸಿಕೊಳ್ಳಲು ಹಿನ್ನಲೆಯಾಗಿರುವ ನಂಬಿಕೆಗಳು ಹಲವಾರು. ಸುತ್ತ ಮುತ್ತಲಿನ ಕೆಟ್ಟಜನರ ದೃಷ್ಟಿ ತಾಗಬಾರದೆಂದು ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಹಿಂದಿನ ಕಾಲದಲ್ಲಿ ಗಂಡಂದಿರು ಮನೆಯಲ್ಲಿ ಇರದ ಸಮಯ ನೋಡಿಕೊಂಡು ಅನೇಕ ಪುಂಡರು ಅವರ ಮನೆ ಹೊಕ್ಕು ಹೆಂಗಸರನ್ನು ಅಪಹರಿಸಿಕೊಂಡು ಹೋಗಿ ಶೀಲ ಹೀನಳನ್ನಾಗಿಸುತ್ತಿದ್ದರು. ಹೀಗೆ ಆಗದಿರಲೆಂದು ಹೆಂಗಸರ ಮೈಮೇಲೆ ಗಂಡಂದಿರ ಹೆಸರನ್ನು ಇಲ್ಲವೆ ಯಾವುದಾದರೊಂದು ಚಿತ್ರವನ್ನು ದೇಹದ ಯಾವುದೇ ಭಾಗದಲ್ಲಿ ಬಿಡಿಸುತ್ತಿದ್ದರು. ಹೀಗೆ ಮುದ್ರಿಕೆ ಇದ್ದ ಹೆಣ್ಣನ್ನು ಯಾವ ದುಷ್ಟರೂ ಮುಟ್ಟುತ್ತಿರಲಿಲ್ಲ. ತಪ್ಪಿಸಿಕೊಂಡ ಅಪರಾಧಿಯನ್ನು ಗುರುತಿಸಲು ಈ ಹಚ್ಚೆಯನ್ನು ಹಾಕಿಸುತ್ತಿದ್ದರು. ರೋಮನ್ನರು, ಬರ್ಮಾ ದೇಶದವರು ಅಪರಾಧಿಗಳ ಕೈ, ಹಣೆ, ಎದೆಯಮೇಲೆ ಅವರ ವಿವರ ಬರೆಯುತ್ತಿದ್ದರು.

ಸೌಂದರ್ಯ ವರ್ಧನೆ ಮತ್ತು ಲೈಂಗಿಕ ಆಕರ್ಷಣೆಗಾಗಿ, ಗೌರವ ಮತ್ತು ದೊಡ್ಡಸ್ತಿಕೆ ಸಲುವಾಗಿ, ತೊನ್ನು- ಹೀನ ಸುಳಿ- ಸರ್ಪಹುಣ್ಣು ಮಚ್ಚೆಲು ಇಲ್ಲವೆ ನಿವಾರಣೆಗಾಗಿ ಹಚ್ಚೆ ಹುಯ್ಯಿಸಿಕೊಳ್ಳುತ್ತಿದ್ದರು. ಒಂದೇ ತರಹದ ಹಚ್ಚೆಯುಳ್ಳವರೊಡನೆ ಮದುವೆ ಆಗುವದಿಲ್ಲ. ಹಚ್ಚೆ ಹಾಕಿಸಿಕೊಂಡರೆ ಪಾಪ ನಿರ್ಮೂಲನ, ಸ್ವರ್ಗ ಪ್ರಾಪ್ತಿ, ವೈರಿಗಳಲ್ಲಿ ಭಯೋತ್ಪಾದನೆ. ಹಚ್ಚೆ ಇಲ್ಲದಿದ್ದರೆ ಯಮ ಅಸಂತುಷ್ಟಿ ಹೊಂದುತ್ತಾನೆ. ಶ್ರೀಮಂತಿಕೆ ಪ್ರಾಪ್ತಿ. ಮರಣದತರುವಾಯವೂ ಮುತ್ತೈದೆತನ ಬರುತ್ತದೆ. ಹಚ್ಚೆ ಇಲ್ಲದಿರುವ ಹೆಣ್ಣು ಅಶುಚಿ, ಅಶುಭ. ಕಾರಣ ರಾಶಿ ಮಾಡುವ ಸಮಯದಲ್ಲಿ ಊಟದ ಸಮಾರಂಭದಲ್ಲಿ ಭಾಗವಹಿಸಲು ಹಚ್ಚೆ ಇಲ್ಲದಿರುವಂಥ ಹೆಣ್ಣು ಮಕ್ಕಳಿಗೆ ಪ್ರವೇಶವಿಲ್ಲ.

ಗರ್ಭವತಿಗೆ ಕಿರೀಟದ ಹಚ್ಚೆ ಹಾಕಿಸಿದರೆ ಮನೆ ಬೆಳಗುವ ಸುಂದರ ಮಗಳು ಹುಟ್ಟುತ್ತಾಳೆ. ಅದಲ್ಲದೆ ಹಡೆದಾಗ ಯಾವ ಭೂತ ಪಿಶಾಚಿಗಳ ಕಾಟವೂ ತಗಲುವುದಿಲ್ಲ

ವೆಂಬ ನಂಬಿಕೆಯಿದೆ. ಹಚ್ಚೆಯಿಂದ ಮಾಟ-ಮಂತ್ರಗಳೂ ಗರ್ಭಪಾತಗಳೂ ದೂರ ವಾಗುತ್ತವೆ. ಅದಲ್ಲದೆ ಅಡಿಗೆ ಹಳಸುವದಿಲ್ಲವೆಂಬ ಬಲವಾದ ನಂಬಿಕೆಯಿದೆ.

ಹಚ್ಚೆ ಹಾಕುವುದು ಕರ್ನಾಟಕದ ಅನೇಕ ಜಾತಿಗಳ ಉಪ ಕಸಬಾಗಿ ನಿಂತಿದೆ. ಕೊರಮರು, ಕುಕ್ಕೆ ಕೊರವರು, ಬೆಸ್ತರು, ಗುಂಡೆ ಬೆಸ್ತರು, ಬುರುಡೆ ಬೆಸ್ತರು, ಕೊರವಂಜಿಗಳು, ಬೇಡರು, ಕಿಳ್ಳೆಕ್ಯಾತರು, ಮೇದಾರರು, ಗೊಂದಲಿಗರು, ಜೋಗೇರರು, ಒಡ್ಡರು, ಗೊಂಬೆಯಾಟದ ಮರಾಠಿಗರು, ಕುರುಬರು ಹಚ್ಚೆ ಹಾಕುವರು. ಹಚ್ಚೆ ಹಾಕುವ ಮೊದಲು ಚಿತ್ರವನ್ನು ತೋರಿಸಿ, ಅವರು ತೋರಿಸಿದ ಚಿತ್ರವನ್ನು ಸಣ್ಣ ಮಸಿಯಲ್ಲಿ ಅದ್ದಿದ ಮೊನಚಾದ ಕಡ್ಡಿಯಿಂದ ಚರ್ಮದ ಮೇಲೆ ಬರೆಯುತ್ತಾರೆ. ಅನಂತರ ಸೂಜಿಗಳಿಂದ ಚುಚ್ಚುತ್ತಾರೆ. ಗಾಯಕ್ಕೆ ಔಡಲೆಣ್ಣೆ, ಅರಿಷಿನ ಪುಡಿ, ಕೊಬ್ಬರಿ ಎಣ್ಣೆ ಇಲ್ಲವೆ ಎಲೆ ತಪ್ಪಲು ಹಚ್ಚುತ್ತಾರೆ. ೭-೮ ದಿವಸ ಮಾತ್ರ ನೋವು ಇರುವುದು. ಚುಚ್ಚಿದ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿ ಹಕ್ಕಳಿಯಾಗಿ ಚರ್ಮ ಸುಲಿಯುವುದು. ಪ್ರತಿದಿನ ಅದಕ್ಕೆ ಎಣ್ಣೆ ಹಚ್ಚುತ್ತಿರಬೇಕು. ದೃಷ್ಟಿ ತಾಗದಿರಲೆಂದು ಅದಕ್ಕೆ ಅರಿವೆ ಪಟ್ಟಿ ಹಾಕುವರು. ನರ ಸಡಿಲುಗೊಳಿಸುವದಕ್ಕಾಗಿ ಬೀಸುವುದು, ಕುಟ್ಟುವುದು ಮಾಡುವರು.

ಚಿತ್ರದ ಸೂಕ್ಷ್ಮತೆ ಗಾಢತೆಗನುಗುಣವಾಗಿ ಸಿದ್ಧ ಮಾಡಿಕೊಂಡ ಸೂಜಿಗಳಿಂದ ಹಚ್ಚೆ ಹಾಕುವಾಗ ನೋವಾಗದಿರಲೆಂದು, ಲಕ್ಷ್ಯ ಬೇರೆಡೆಗೆ ಹರಿಯಲೆಂದು

"ಒಕ್ಕಳಕ್ಕೆ ಹಾಕಿ ಒಂದು ಬದನೆಕಾಯಿ
ಲಕ್ಷದ ಮ್ಯಾಲೆ ತೊಂಬತ್ತಾರು ಸಾವಿರ ಜನಕೆ
ನಿತ್ಯ ಭೋಜನ ಮಾಡಿಸಿ ಕಲ್ಯಾಣ ಮಂಟಪಕ್ಕೆ ದಿನ ಮಧ್ಯಾಹ್ನ ಹೂಡಿ
ನೀಲಮ್ಮನ ಪಾದಕ್ಕೆ ಉಘೇ ಅನ್ನ ಹೆಸರು ಹಾಕುವೆ ಹೆಸರು ಹಾಕುವೆ
ಹೇಸುರಮ್ಮ ತಾಯಿ ನಿನ್ನ ಹೆಸರ್ಹೇಳಿ ಜನಗಳಿಗೆ ಹೆಸರು ಹಾಕುವೆ
ಬೇಗನೆ ನಿನ್ನತ್ತಿ ಕೈಯಲ್ಲಿ ಶೋಭಿಸು ದೇವರ ಹೆಸರೇಳಿ ರಾರಾಜಿಸು"

"ಗಂಗವ್ವ ಚುಚ್ಚಿಸಿಕೊಂಡ ಹಣಚಿಬೊಟ್ಟು
ಗರತಿತನ ತಂತ, ಕುಂಕುಮ ತಂತ
ಯಾರು ಹುಯ್ದಾರಮ್ಮಾ ಈ ಮುತ್ತಿನ ಮಣಿಯಂಥಾ ಹಚ್ಚೆ
ಹೆತ್ತಮ್ಮಾ ಬಂದು ಕೈನೋಡಿ ಏನಂದಾಳೋ
ಮುತ್ತೈದಿತನಕ ಇವು ಮೇಲು"

ಇವು ಗರತಿಯರಿಗೆ ಹಾಡುವ ಹಾಡಾದರೆ, ಚಿಕ್ಕ ಮಕ್ಕಳಿಗೆ ಹಾಕುವಾಗ ಅಳದಿರಲೆಂದು ಕೆಲವು ಹಾಸ್ಯ ಪದಗಳನ್ನು

"ಕಡ್ಲಿ ತಿಂದ ಕುರು ಕುರು
ಹೂಸು ಬಿಟ್ಟ ಪುರು ಪುರು
ಗಂಡ ಬರ್‍ತಾನೆ ಸುಮ್ಮನಿರು
ಗಂಡ ಬರ್‍ತಾನ ಸುಮ್ಮನಿರು
ಉಳಾಗಡ್ಡಿ ತಿನ್ನಬ್ಯಾಡ
ಗಂಡ ಬರ್‍ತಾನ ಅಳಬ್ಯಾಡ
ಕುಂಡಿ ಮ್ಯಾಲ ಹೊಡಿತಾನ
ಕುಣಿ ಬ್ಯಾಡ ಕುಣಿ ಬ್ಯಾಡ"

"ಮುತ್ತೈದಿತನಕ ಇವು ಮೇಲು
ಸತ್ತರೆ ಸಂಗಾತಿ ಇದ್ದರೆ ಗೆಣೆಕಾತಿ
ಸತ್ತರೆ ನಮಗುಂಟ ಬರೋದಲ್ಲ
ಕೈ ಮ್ಯಾಗಳ ಹಚ್ಚೆ ..."

ಎಂದು ಹಾಡುವರು. ಮಲ್ಲಿಗೆ ಅಂಬು, ಶೇವಂತಿಗೆ, ಬಾಳಿಗಿಡ ಇಂತಹ ಹೂಗಳಲ್ಲದೆ ಜೋಳದ ತಾಳು, ಗೋದಿಯ ಕಾಳು, ಕಡ್ಲಿ ಕಾಳು, ಚುಕ್ಕೆ, ನಂದಿಕೋಲು, ಸ್ವಸ್ತಿಕ, ಗೌರಿಗದ್ದುಗೆ, ತೋಳಚಪ್ಪರ, ಗಿಂಡಿ, ವಾಲಿಗುಳ್ಳ ಅಲಗ, ಹನುಮಂತ, ಶಿವನಮುಂಡಿ, ನೆಕಲೇಸು, ನೆಲ್ಲಿಹಚ್ಚೆ, ಪಾರಿಜಾತ, ಗೌರಿಮುಂಡಿ, ಜೋಗಿಜಡೆ, ಮುತ್ತಿನ ಆರತಿ, ಮಾವಿನ ಎಲೆ, ತೇರು, ಮಯೂರ, ಸೂಜಿ, ಒಳಕಲ್ಲು, ಬಂಟಿ, ತಕ್ಕಡಿ, ಕುದುರೆ, ಶಂಖ, ಚಕ್ರ, ಶಿಲುಬೆ, ಬಾವುಟ, ಹಡಗು ಮುಂತಾದ ಚಿತ್ರಗಳನ್ನು ಹಚ್ಚೆಯಲ್ಲಿ ಕಾಣಬಹುದು.

ಹಿಂಬದಿ ಅಥವಾ ಪಾದದ ಮೇಲ್ಭಾಗದ ಮಗ್ಗಲು ಹನುಮಂತನ ಚಿತ್ರ ಬರೆ-ಕೊಳ್ಳುವದರಿಂದ ಯಾವುದೇ ತರಹದ ರೋಗ ಅಂಟುವುದಿಲ್ಲ. ಅದರ ಜೊತೆಗೆ ಹನುಮನಷ್ಟೇ ಶಕ್ತಿ ಬರುವುದೆಂದು ಕೆಲವು ಹಿಂದೂಗಳಲ್ಲಿ ನಂಬಿಕೆ.

ಹಸ್ತದ ಮೇಲ್ಭಾಗದಲ್ಲಿ ಮತ್ತು ಮುಂಗೈ ಮೇಲೆ ಬಾಸಿಂಗ, ತೇರು, ರಾಮ-ಲಕ್ಷ್ಮಣ ಹಾಕಿಸುವದರಿಂದ ಮುತ್ತೈದಿತನದ ಸಾವು ಖಂಡಿತವೆಂತಲೂ ತಮ್ಮ ಗಂಡಂದಿರಿಗೆ ಆಯುಷ್ಯ ವೃದ್ಧಿಯಾಗುವುದೆಂದೂ ನಂಬಿಕೆ. ತಾಯಿ ತಂದೆ, ಇಲ್ಲವೆ ಗಂಡನ ಹೆಸರು ಬರೆಸಿಕೊಳ್ಳುವದರಿಂದ ಆ ವ್ಯಕ್ತಿಯ ಮೇಲೆ ಇದ್ದ ಪ್ರೀತಿಯ ಬೆಲೆಯನ್ನು ತೋರಿಸುತ್ತದೆ.

ಹಣೆಯ ಮಧ್ಯ ಭಾಗದಲ್ಲಿರುವ ಗೋದಿಕಾಳು, ಬಳೂಲ ಬಟ್ಟು, ತುಳಸಿ ಕಟ್ಟೆ, ಹಕ್ಕಿಯ ಕಾಲು, ಶಂಖ ಚಿತ್ರಗಳು ಅವರ ಮುತ್ತೈದಿತನದ ಚಿಹ್ನೆಗಳಾಗಿವೆ.

ಕಣ್ಣಿನ ಎರಡೂ ಬಾಜು ಹಾಕಿಸಿಕೊಳ್ಳುವ ಹಚ್ಚೆಗೆ ಕಣ್ಣುಶಾವಿಗೆ ಎಂದೂ ಗದ್ದದ ಮೇಲೆ, ಎಡಗಲ್ಲದ ಮೇಲಿರುವುದಕ್ಕೆ ದೃಷ್ಟಿಬೊಟ್ಟು ಎಂದೂ ಹೆಸರು. ಬಲಗೈ ನಡುವಿನ ಬೊಟ್ಟಿನ ಮೇಲೆ ಚುಕ್ಕೆ ಹಾಕಿಸುಕೊಳ್ಳುತ್ತಾರೆ.

ತೋಳಿನ ಮೇಲೆ, ತೊಡೆಯ ಮೇಲೆ ಶಿಲುಬೆಯ - ಪಕ್ಷಿಯ ಚಿತ್ರವನ್ನು ಹಾಕಿಸಿಕೊಳ್ಳುವುದು ಮಲಬಾರು ಪ್ರಾಂತದ ಕ್ರೈಸ್ತರಲ್ಲಿ ಪದ್ಧತಿ ಇದೆ. ಹಣೆಯ, ಕೆನ್ನೆಯ, ಗದ್ದದ, ಎದೆಯ ಮೇಲೆ, ಅಂಗೈ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು ಹಿಂದೂಗಳಲ್ಲಿ ಪದ್ಧತಿ.

ಮುಸ್ಲಿಮರ ಹೊರತಾಗಿ ಎಲ್ಲ ಹಿಂದೂ ಗಂಡು ಮತ್ತು ಹೆಣ್ಣು ಮಕ್ಕಳು ಹಚ್ಚೆ ಹಾಕಿಸಿಕೊಳ್ಳುತ್ತಾರೆ ಈ ಹಚ್ಚೆಯನ್ನು ಅವರಿಗವರೇ ಹಾಕಿಸಿಕೊಳ್ಳದೆ ಹೆಂಗಸರು ಗಂಡಸರಿಗೂ, ಅತ್ತೆ ಸೊಸೆಗೂ, ಭಾವ- ಮೈದುನನಿಗೂ ಅಜ್ಜಿಯು-ಮೊಮ್ಮಗನಿಗೂ ಹಾಕುವ ಪದ್ಧತಿ ಉಂಟು. ಹೀಗೆ ಸಂಬಂಧವಿದ್ದವರು ಒಬ್ಬರಿಗೊಬ್ಬರು ಪ್ರೇಮ, ಪ್ರೀತಿಗಾಗಿ ತಮ್ಮ ತಮ್ಮ ಹೆಸರನ್ನಾಗಲೀ ಚಿತ್ರವನ್ನಾಗಲೀ (ಅವರಿಗೆ ಪ್ರಿಯವಿದ್ದ) ಬರೆಯಿಸಿಕೊಳ್ಳುವದುಂಟು. ಹುಬ್ಬುಗಳ ಮಧ್ಯ ದೃಷ್ಟಿಬೊಟ್ಟು, ಹಣೆಯ ಮೇಲೆ ಅರ್ಧ ಚಂದ್ರ, ತೋಳುಗಳ ಮೇಲೆ ತೋಳಚಪ್ಪರ, 'ಕುಬುಸದ ಹಚ್ಚೆ' ಗೌರಿಗದ್ದುಗೆ, ಕಾಲುಗಳ ಮೇಲೆ ಕಮಲದ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹೀಗೆ ದೇಹದ ವಿವಿಧ ಭಾಗಗಳಲ್ಲಿ ಹಾಕಿಸಿಕೊಳ್ಳುವ ಹಚ್ಚೆಗೆ ತನ್ನದೇ ಆದ ಸ್ಥಾನವೈಶಿಷ್ಟ್ಯ ಮತ್ತು ನಂಬಿಕೆಯಿರುತ್ತದೆ.

ಹಚ್ಚೆಯಲ್ಲಿ ಕಂಡುಬರುವ ವಿವಿಧ ಚಿತ್ರಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿವೆ. ಮವೋರಿ ನಾಯಕರು ಹಾಕಿಸಿಕೊಳ್ಳುವ ರುದ್ರಭೀಕರ ಚಿತ್ರಗಳಿಗೂ ಬರ್ಮೀಗಳು ಹಾಕಿಸಿಕೊಳ್ಳುವ ಅತ್ಯಂತ ಕಲಾತ್ಮಕ ಚಿತ್ರಗಳಿಗೂ ಅಜಗಜಾಂತರ ವ್ಯತ್ಯಾಸ ಕಂಡುಬರುವುದು. ದ್ರಾವಿಡರು ಹಾಕಿಸುಕೊಳ್ಳುವ ಚಿತ್ರಗಳಲ್ಲಿ ಬಹುಪಾಲು ಅವರು ನಂಬಿಕೊಂಡು ಬಂದ ದೈವ, ಧರ್ಮ, ಸಂಪ್ರದಾಯಗಳಿಗೆ ಸಾಕ್ಷಿಯಾಗಿವೆ. ನಕ್ಷತ್ರ, ಸೂರ್ಯ, ಚಂದ್ರ, ಚೌಕ, ಅಷ್ಟದಿಕ್ಕುಗಳು, ನವಗ್ರಹ, ಪಾಂಡವರು, ಅಷ್ಟಕೊಳೆ, ಸೂಳೆ ಎಂಬ ಸಂಕೇತ ತೋರಿಸಲು ಸ್ತ್ರೀ ಸಂಕೇತವಾದ ತ್ರಿಕೋನ; ಚೇಳು, ನೊಣ, ನಾಗರಹಾವು, ಮೀನ, ಹುಲಿ ಉಗುರು, ಜೇಡ, ದುಂಬಿ, ಗಿಳಿ, ಮೊಸಳೆ ಚಿತ್ರಗಳನ್ನು ದೇಹದ ವಿವಿಧ ಭಾಗಗಳಲ್ಲಿ ಹಾಕಿಸಿಕೊಳ್ಳುವರು.

ಹೀಗೆ ಹಚ್ಚೆ ಸಾಹಿತಿಗಳಿಗೆ, ಭಾಷಾವಿಜ್ಞಾನಿಗಳಿಗೆ ಮಾನವಶಾಸ್ತ್ರಜ್ಞರಿಗೆ ಅಧ್ಯಯನದ ವಸ್ತುವಾಗಿ ಪರಿಣಮಿಸಿದೆ. ಈ ಕ್ಷೇತ್ರದಲ್ಲಿ ದುಡಿದಷ್ಟೂ ಫಲ ನಿರೀಕ್ಷೆಯಿದೆ.

□ □

# ಮುಂಜಾವು

● ಶರತ್ ಜಮಖಂಡಿ

ನೀ ಬಂದಾಗ
ಹಿಂದಿನ ಮಜಲುಗಳ
ಸಿಹಿ, ಕಹಿ ನೆನಪುಗಳ ಮೇಲೆ
ಕಪ್ಪು ತೆರೆಯೊಂದು ಬಂದು
ಪಠಾಸಿ ಹಳತಾಗಿ
ಪೂರ್ಣವಿರಾಮದ
ರಾತ್ರಿಯನ್ನು ದಾಟಿ
ಅಂಗೈ ಅರಮನೆಯಾದ
ಭವಿಷತ್ತಿನ ಮಜಲನ್ನು
ಮುಂದಿನ ಮಜಲನ್ನು
ಹೊಸಶಕ್ತಿಯಿಂದ
ಏರಲು
ಬೆಳ್ಳಿಕಿರಣಗಳಿಂದ
ಪ್ರಭಾವಿತವಾಗಿ
ಹೊಸಹಾದಿಯನ್ನು
ಕ್ರಮಿಸಲು.
ಸಿದ್ಧವಾಗುತ್ತದೆ. ಈ ಜಗತ್ತು.

□ □

# ಹಂತಗಳು

**ಮೆಹಬೂಬ ನರಗುಂದ**

ಮೊನ್ನೆ ಮೊನ್ನೆ ಊರಿಗೆ ಬಂದ ಕಿಟ್ಟಿಯ ಭೆಟ್ಟಿಯಾಯಿತು. ಮೊದಲ ನೋಟಕ್ಕೇ ಗುರುತಿಸಲು ಕೆಲವು ಕ್ಷಣಗಳು ಬೇಕಾದವು. ಮೊದಲಿನ ಆಕಾರಕ್ಕಿಂತಲೂ ಈಗ ಸ್ಥೂಲ. ಕಣ್ಣಲ್ಲಿ ನಕ್ಷತ್ರಗಳ ಹೊಳಪು. ಎಷ್ಟೋ ದಿನಗಳಿಂದ ಮಾಯವಾದ ಆ ಮುಗುಳ್ನಗೆ ಮತ್ತೆ ರಾರಾಜಿಸುತ್ತಿದೆ. ಮತ್ತೆ ಅದೇ ಚುರುಕಿನ ಚೈತನ್ಯ. ದಂಗು ಬಡಿದಿದ್ದೆ ನಾನು. ಆರೇ ತಿಂಗಳಲ್ಲಿ ಮೊದಲಿನ ಕಿಟ್ಟಿ ಹೀಗಾದದ್ದು ಹೇಗೆ? ಮರೆವಿನ ಪ್ರಭಾವವಿರಬಹುದೆ? ಮರೆವು ಎಂಬುದು ಮಾನವನಿಗೆ ಬಂದ ಮಹಾ ವರದಾನಗಳಲ್ಲೊಂದು. ಪ್ರಪಂಚದಲ್ಲಿ ಮರೆವು ಎಂಬುದೊಂದು ಇರದಿದ್ದರೆ ಕಾಲರಾ, ಪ್ಲೇಗು, ಮಲೇರಿಯಾಗಳಂಥ ಭಯಂಕರ ರೋಗಗಳ ಪಟ್ಟಿಯಲ್ಲಿ ಚಿಂತೆಗೆ ಪ್ರಥಮ ಸ್ಥಾನವಿರುತ್ತಿತ್ತೋ ಏನೋ ! ಆದರೆ ಈ ಕಿಟ್ಟಿಗೆ ಮರೆವು? ಸಾಧ್ಯವೇ ಇಲ್ಲ !

ಚಿಂತೆಯಿಂದ ಶೂನ್ಯನಾಗುತ್ತ ಹೊರಟ ಕಿಟ್ಟಿಯನ್ನು ಪುಸಲಾಯಿಸಲು ಪ್ರಯತ್ನ ಪಟ್ಟಷ್ಟೂ ಕಲ್ಲಾಗುತ್ತಿದ್ದ. ಕೆಲವೊಮ್ಮೆ ಅಂತರ್ಮುಖಿಯಾಗಿ ಕುಳಿತುಬಿಡುತ್ತಿದ್ದ. ಕೆಲವೊಮ್ಮೆ ವಿಷಾದದಿಂದ ನಕ್ಕು "ಅದೆಲ್ಲಾ ನಿನಗೆ ಅರ್ಥ ಆಗೋದಿಲ್ಲ ಪುರು ಅನುಭವಿಸಿದವರಿಗೆ ಮಾತ್ರ ಗೊತ್ತು" ಎಂದು ಚಟಕ್ಕನೇ ಎದ್ದವನೇ ಅನುದ್ದೇಶವಾಗಿ ಅಲೆಯುತ್ತಿದ್ದ. ಅವನ ತಾಯಿಯಂತೂ ಕೆಲವೊಮ್ಮೆ ಊಟವೇ ಮಾಡುತ್ತಿರಲಿಲ್ಲ. ಸದಾ ಇವನದೇ ಚಿಂತೆ. ಎಲ್ಲಿ ಹುಚ್ಚು ಹಿಡಿಯುವುದೋ ಎಂಬ ಹೆದರಿಕೆ. ಅವನನ್ನು ದಾರಿಗೆ ತರುವ ಹೊಣೆ ನನಗೇ ಬಿಟ್ಟಿದ್ದರು. ಸ್ಥಳ ಬದಲಾವಣೆಯ ಉಪಾಯ ಹೊಳೆಯಿತು. ಪ್ರವಾಸಕ್ಕೆ ಹೊರಡುವುದೆಂದು ಗೊತ್ತು ಮಾಡಿ ಕಿಟ್ಟಿಯನ್ನು ಒಪ್ಪಿಸಲು ಸಾಕು ಸಾಕಾಗಿ ಹೋಗಿತ್ತು.

ಹೊರಡುವದಕ್ಕೆ ಮೊದಲು ಅವನ ಆಕಾರ ಬದಲಿಸಬೇಕಿತ್ತು. ಆ ಆಕಾರದಲ್ಲಿ ಅವನ ಜೊತೆ ತಿರುಗಾಡುವುದಕ್ಕೆ ಸಂಕೋಚವಾಗುತ್ತಿತ್ತು. ಮುಖವೇ ಕಾಣದಂತೆ ಬೆಳೆಸಿದ ಗಡ್ಡ, ಸೊರಗಿ ಹೋದ ಆ ಹಿಡಿ ಮುಖದಲ್ಲಿ ಅಸಹ್ಯವಾಗಿ ಚಾಚಿಕೊಂಡಿರುವ ಗಿಣಿ ಮೂಗು. ಮಾಂಸವೇ ಇಲ್ಲದ ಗಲ್ಲಗಳು. ಬಹುಶಃ ಎಲುಬುಗಳೂ ಸೊರಗು

ವಂತಿದ್ದರೆ ಮುಖವೇ ಇಲ್ಲವಾಗುತ್ತಿತ್ತೋ ಏನೋ ? ! ಗುಳಿಬಿದ್ದ ಕಣ್ಣುಗಳು. ಅಂಥ ನಿರ್ಜೀವ ಕಣ್ಣುಗಳಲ್ಲೂ ಸೇಡಿನ ಕರಾಳ ಛಾಯೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಬೀದಿಯಲ್ಲಿ ಬೆನ್ನು ಹತ್ತುವ ನಾಯಿಗಳು. ನನಗಂತೂ ಝಾಡಿಸಿಕೊಳ್ಳಬೇಕೆನಿಸಿತ್ತು. ಆದರೆ ಮಾನವೀಯತೆಯೋ ಅಥವಾ ಆಪ್ತತೆಯ ಸೋಗೋ ಅದೇ ವರ್ತುಲದಲ್ಲಿ ಕಟ್ಟಿ ಹಾಕಿದ್ದವು.

ಅಂತೂ ಪ್ರವಾಸಕ್ಕೆ ಹೊರಟಾಗಿತ್ತು. ಬಿಗಿದುಕೊಂಡ ಮುಖದಲ್ಲೇ ಬಂದಿದ್ದ. ಪ್ರವಾಸದುದ್ದ ಎಲ್ಲೂ ಆ ಮುಖದ ಸ್ನಾಯುಗಳು ಸಡಿಲುಗೊಂಡಿರಲಿಲ್ಲ. ಗೋವಾದ ಬೀಚಿನಲ್ಲಿ ಅಡ್ಡಾಡಿದಷ್ಟೂ ಕುರುಡಾಗುತ್ತಿದ್ದ. ಅಲ್ಲಿಯ ಅರೆನಗ್ನ ಬಿಳಿ ಚರ್ಮದ ಸುಂದರಿಯರ ಎಷ್ಟೋ ವಿನೋದದ ಪ್ರಸಂಗಳಲ್ಲೂ ಅವನ ಮುಖ ಅಗಲವಾಗಿರಲಿಲ್ಲ. ನಗಿಸಲು ಪ್ರಯತ್ನಪಟ್ಟಾಗ ನನ್ನ ಪ್ರತಿಯಾಗೇ ಒಮ್ಮೆ ಅವನ ಕಣ್ಣುಗಳು ನಿಮಿರಿದಾಗ ಸಣ್ಣಗೇ ನಡುಗಿದ್ದೆ. ಬಹುಶಃ ಆಗ ಅವನಿಗೆ ಹಿಂಸೆಯಾಗುತ್ತಿದ್ದಿರಬಹುದು. ಆಗಲೇ ನಾನು ನಿರ್ಧರಿಸಿದ್ದು. ನನ್ನ ಪ್ರಯತ್ನ ಕೈ ಬಿಡಬೇಕು. ಈ ಜನ್ಮದಲ್ಲಿ ಇವನನ್ನು ಸುಧಾರಿಸಲು ಸಾಧ್ಯವಿಲ್ಲ. ಮುಂದೆ ಅವನ ಜೊತೆ ಯಾಂತ್ರಿಕನಾಗುತ್ತಾ ಬಂದೆ. ಬಹುಶಃ ನನ್ನ ಉದ್ದೇಶ ಅವನಿಗೆ ಅರ್ಥವಾಗಿರಬೇಕು. ಕಾರವಾರದಲ್ಲಿ ಸಡಿಲವಾಗಿದ್ದ. ಏನೇ ಆದರೂ ನಾನು ಮಾತ್ರ ನಿರ್ಧರಿಸಿ ಬಿಟ್ಟಿದ್ದೆ. ಅಷ್ಟಕ್ಕಷ್ಟೇ ವರ್ತಿಸುತ್ತಿದ್ದ. ಆದರೂ ಅವನ ಪ್ರತಿ ಚಲನ-ವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಅವನು ಯಾವ ಹೆಣ್ಣಿನ ಮುಖವನ್ನೂ ಕಣ್ಣೆತ್ತಿ ನೋಡುತ್ತಿರಲಿಲ್ಲ. ಹೆಣ್ಣಿನ ಬಗ್ಗೆ ರೋಷ ತುಂಬಿತ್ತು. ಆ ಭಾವನೆ ಶಾಮಲಾಳಿಗೆ ಮಾತ್ರ ಸೀಮಿತ ಎಂಬ ನನ್ನ ಅನುಭವತತ್ವ ಸೋಲುತ್ತಾ ನಡೆದಿತ್ತು.

ಜೀವನದಲ್ಲಿ ಯಾವುದೇ ಹೆಣ್ಣಿನಿಂದ ಮೋಸ ಹೋದಾಗ ಗಂಡು ಅವಳಿಗಾಗಿ ಕೆಲವು ದಿನ ಹಂಬಲಿಸುತ್ತಾನೆ. ಕ್ರಮೇಣ ಹೆಣ್ಣು ಜನಾಂಗವನ್ನೇ ದ್ವೇಷಿಸಲು ಪ್ರಾರಂಭಿಸುತ್ತಾನೆ. ಆದರೆ ಕೆಲವೇ ದಿನಗಳಲ್ಲಿ ಆ ದ್ವೇಷ ಮೋಸ ಮಾಡಿದ ಹೆಣ್ಣಿಗೆ ಮಾತ್ರ ಸೀಮಿತವಾಗಿ ಮತ್ತೆ ತನಗೆ ಪ್ರೀತಿ ತೋರಿಸುವ ಇನ್ನೊಂದು ಹೆಣ್ಣಿನ ಅನ್ವೇಷಣೆಯಲ್ಲಿ ತೊಡಗುತ್ತದೆ. ಇದನ್ನು ಹಿಂದೆ ಪ್ರತಿನಿಧಿಸಿದ ಕಿಟ್ಟಿಯೇ ಈಗ ಸೋಲುತ್ತಿದ್ದುದು ನನಗೆ ಕಸಿವಿಸಿ ಉಂಟು ಮಾಡಿತ್ತು. ಕಿಟ್ಟಿಯ ವಿಚಿತ್ರ ಕತೆಯನ್ನು ಮೆಲುಕು ಹಾಕುವಂತೆ ಮಾಡಿತ್ತು.

ಒಂದೇ ಕೇರಿಯಲ್ಲಿ ಹುಟ್ಟಿ ಬೆಳೆದ ನಾವಿಬ್ಬರೂ ಚಡ್ಡಿಗೆಳೆಯರು. ನಮ್ಮಿಬ್ಬರ ಮನೆಗಳು ಅಕ್ಕಪಕ್ಕದಲ್ಲೇ. ಕಿಟ್ಟಿ ನನಗಿಂತಲೂ ಎರಡು ವರ್ಷ ಚಿಕ್ಕವನಾದರೂ ಸಹಪಾಠಿ. ಹೈಸ್ಕೂಲಿನಲ್ಲಿ ಒಂದೇ ತಟ್ಟೇಲಿ ಊಟಮಾಡಿ ಒಂದೇ ಹಾಸಿಗೆಯಲ್ಲಿ ಮಲಗಿ, ಒಂದೇ ಹುಡಿಗಿಗಾಗಿ ಅಲೆದಾಡಿದ ಭೂಪರು. ಹೆಣ್ಣು ಮತ್ತು ಅವನ ಬಗ್ಗೆ

ಹೇಳಬೇಕೆಂದರೆ ವ್ಯವಸ್ಥಿತ ಹಂತಗಳನ್ನು ದಾಟುತ್ತ ಬಂದ ಅವನ ಕತೆಯನ್ನು ಎಸ್ಸೆಸ್ಸೆಲ್ಸಿಯಿಂದಲೇ ಪ್ರಾರಂಭಿಸಬೇಕು.

ಗಂಡಿಗೆ ಹೆಣ್ಣಿನಾಕರ್ಷಣೆಯ ಪಾಠ ಹೇಳಲು ಯಾವುದೇ ಗುರುವಿನ ಅವಶ್ಯಕತೆ ಇರದಿದ್ದರೂ ಕಿಟ್ಟಿಗೆ ಈ ವಿಷಯದಲ್ಲಿ ನಾನೇ ಗುರು. ಅವನು ನನಗಿಂತಲೂ ಎರಡು ವರ್ಷ ಚಿಕ್ಕವನಿದ್ದುದರಿಂದಲೋ ಏನೋ ಹುಡುಗಿಯರ ಬಗ್ಗೆ ಹೆಚ್ಚು ಅಂದರೆ ನನ್ನಷ್ಟು ಯೋಚಿಸುತ್ತಿರಲಿಲ್ಲ. ನನಗೆ ಮಾತ್ರ ಆ ವಿಷಯವಾಗಿ ಮಾತಾಡಿದರೇನೆ ಸಮಾಧಾನ. ಮಾತಾಡಲು ಒಬ್ಬರು ಬೇಕಲ್ಲ! ನಾನು ಕಿಟ್ಟಿಯನ್ನು ಆರಿಸಿದೆ. ಸುಲಭವಾಗಿ ಕೈಗೆ ಸಿಗುವನೆಂಬ ಒಂದೇ ಕಾರಣವಲ್ಲ. ಅವನಿಂದಾಗಿ ಎಷ್ಟೋ ಹುಡುಗಿಯರ ಪರಿಚಯವಾಗುತ್ತಿತ್ತು. ಕ್ಲಾಸಿನಲ್ಲೇ ಬುದ್ಧಿವಂತ, ಮುಗ್ಧ, ಹಾಗೂ ಸ್ಫುರದ್ರೂಪಿ ಎಂದರೆ ಕಿಟ್ಟಿ. ಹೀಗಾಗಿ ಎಷ್ಟೋ ಹುಡುಗಿಯರು ಇವನ ಸ್ನೇಹಕ್ಕಾಗಿ ಹಾತೊರೆಯುತ್ತಿದ್ದರು. ಆ ಸ್ನೇಹ ಈಗ ನೆನೆಸಿಕೊಂಡರೆ ನಗು ಬರುತ್ತದೆ. ಅದೇ ಅರಳುತ್ತಿರುವ ಯೌವ್ವನದ ಹುಚ್ಚು ಹುಚ್ಚು ಕಲ್ಪನೆಗಳು. ಹಾರುಗುದುರೆಯ ಬೆನ್ನೇರಿ ಎಲ್ಲೆಲ್ಲೋ ಸಂಚರಿಸಿದ, ಏನೇನೋ ಮಾಡಿದ, ಅನುಭವಿಸಿದ ಕನಸುಗಳು. ಚೆಂದ ಕಾಣುವ ಎಲ್ಲ ಹುಡುಗಿಯರ ಜೊತೆ ಚೆಲ್ಲಾಟವಾಡುವ ಬಾಲಿಶ ವಿಚಾರಗಳು. ಆದರೆ ಇವೆಲ್ಲ ಅರಿವಿಗೆ ಬರದಂತೆಯೇ ಮಂಜಿನಂತೆ ಕರಗಿ ಹೋದದ್ದೂ ನೆನಪಿಲ್ಲ. ಈ ಹಂತದಲ್ಲಿ ಕಿಟ್ಟಿಗೆ ವೀಣಾ ಎಂಬ ಸುಂದರ ಮುಗ್ಧ ಹುಡುಗಿ ತುಂಬಾ ಹಚ್ಚಿಕೊಂಡಿದ್ದಳು. ಮೊದಮೊದಲು ಹುಡುಗಿಯರ ಸ್ನೇಹಕ್ಕೆ ಅಸಹ್ಯಪಟ್ಟುಕೊಳ್ಳುವ ಈತ ಛೇಡಿಸಿಕೊಂಡಿದ್ದ. ಬೆವರುತ್ತಿದ್ದ. ಆದರೆ ಬರಬರುತ್ತ ಧೈರ್ಯ ಬಂದಿತು. ವೀಣಾಳ ಜೊತೆ ಸ್ನೇಹ ಬೆಳೆದಿತ್ತು. ಇದರಿಂದಾಗಿ ನನಗೆ ಹೊಟ್ಟೆಕಿಚ್ಚಾಗುತ್ತಿತ್ತು. ಇಲ್ಲಿ ಅದು ಅಪ್ರಸ್ತುತ. ಆದರೆ ಇಷ್ಟು ಮಾತ್ರ ನಿಜ. ನಾನು ಇವರ ಪ್ರತಿಯೊಂದು ಚಲನವಲನಗಳನ್ನೂ ಗಮನಿಸುತ್ತಿದ್ದೆ. "ಇದೆಲ್ಲಾ ವ್ಯವಹಾರ ನಿನ್ನ ಮನೆಯಲ್ಲಿ ಹೇಳುತ್ತೇನೆ" ಎಂದು ಹೆದರಿಸಿ ಸಂತೋಷಪಟ್ಟಿದ್ದೆ. ಅವರ ಸ್ನೇಹ ಮುರಿಯುವ ಒಂದುದಿನ ಬಂದಿತ್ತು. ಪರೀಕ್ಷೆ ಮುಗಿದು ಪರಿಣಾಮ ಸಾರಿಯಾಗಿತ್ತು. ಮೂವರೂ ಪ್ರಥಮ ದರ್ಜೆಯಲ್ಲೇ ಪಾಸಾಗಿದ್ದೆವು. ಅವಳು ಬೆಂಗಳೂರಿನ ತನ್ನ ಕಕ್ಕನ ಮನೆಗೆ ಹೋಗಿದ್ದಳು. ಹೋಗುವ ದಿನ ಕಿಟ್ಟಿಗೆ ಭೆಟ್ಟಿಯಾಗಿ ಅತ್ತಿದ್ದಳಂತೆ. ಪತ್ರ ಬರೆಯುವುದಾಗಿ ಹೇಳಿ ಟಾ ಟಾ ಹೇಳಿದ್ದಳಂತೆ. ಹೋದ ನಾಲ್ಕೈದು ವಾರಗಳ ವರೆಗೂ ಪತ್ರ ವ್ಯವಹಾರ ನಡೆದಿತ್ತು. ಬರಬರುತ್ತ ಅದೂ ಅರಿವಿಗೆ ಬರದಂತೆ ನಿಂತಿತ್ತು. ಆದರೆ ಇವತ್ತಿಗೂ ಕೆಲವೊಮ್ಮೆ ಆ ವೀಣಾ ಕಿಟ್ಟಿಯ ಮನಸ್ಸಿನಲ್ಲಿ ತನ್ನ ಸುಮಧುರ ನಾದತರಂಗಗಳನ್ನು ಮೀಟುತ್ತಿರುತ್ತಾಳೆ. ಅವಳ ನೆನಪಾದಾಗಲೆಲ್ಲ ಮನ ತುಂಬಿ ಮಾತಾಡುತ್ತಾನೆ. ಎಷ್ಟೇ ಆಗಲಿ ಅವಳು ಕಿಟ್ಟಿಯ ಜೀವನದಲ್ಲಿ ಪ್ರವೇಶಿಸಿದ ಪ್ರಥಮ ಹುಡುಗಿಯಲ್ಲವೆ?

ಕಾಲೇಜಿನಲ್ಲಿ ಕಿಟ್ಟಿ ತುಂಬಾ ಬದಲಾದಂತೆ ಕಂಡ. ರೂಮಿನಲ್ಲಿ ಅವನನ್ನು ಕಾಣುವುದೇ ಅಪರೂಪವಾಯ್ತು. ಯಾವಾಗಲೂ ಟ್ರಿಮ್ಮಾಗಿ ಡ್ರೆಸ್ ಮಾಡಿಕೊಂಡು

ನೀಟಾಗಿ ಬಾಚಿಕೊಂಡು ದಣಿವಾಗುವವರೆಗೂ ಹೆಣ್ಣುಗಳ ಹಿಂದೆ ಅಲೆಯುತ್ತಿದ್ದ. ಸಿಕ್ಕ ಸಿಕ್ಕವರನ್ನೆಲ್ಲಾ ಬೆನ್ನಟ್ಟುತ್ತಾ, ಮಾತಾಡುತ್ತಾ, ಚೇಷ್ಠೆ ಮಾಡುತ್ತ, ನಗಿಸುತ್ತಾ ಅಲೆಯುತ್ತಿದ್ದ. ಕಾಲೇಜಿನಲ್ಲಿ ಇಂಥದೇ ಇನ್ನೊಂದು ಗುಂಪು ಇತ್ತು. ಅವರ ಕಾಯಕ ಅತಿರೇಕಕ್ಕೆ ಹೋದಾಗ ಒಬ್ಬನಿಗೆ ಕಪಾಳ ಮೋಕ್ಷ ಸಿಕ್ಕಿತ್ತು. ಇದರಿಂದ ಹೆದರಿದ ಕಿಟ್ಟಿಯ ಮಂಗನಾಟ ಸ್ವಲ್ಪ ಕಡಿಮೆಯಾಗಿತ್ತು. ವರ್ಷ ಮುಗಿಯುತ್ತಾ ಬಂದಿತ್ತು. ಪರೀಕ್ಷೆ ಸಮೀಪಿಸಿತ್ತು. ಆಗಲೇ ಅವನಿಗೆ ನೆನಪಾದದ್ದು, ತಾನು ಓದಲಿಕ್ಕೆ ಬಂದಿದ್ದೇನೆ ಎನ್ನುವುದು. ಹಗಲು ರಾತ್ರಿ ಕಣ್ಣಿಗೆ ಎಣ್ಣೆ ಹಾಕಿ ಓದಿದ್ದೇ ಓದಿದ್ದು. ಮಧ್ಯ ಆರೋಗ್ಯ ಕೆಟ್ಟರೂ ಅವನ ಅದೃಷ್ಟ, ಪರೀಕ್ಷೆ ಹೊತ್ತಿಗೆ ಆರೋಗ್ಯವಾಗಿದ್ದ. ಊರಲ್ಲಿ ಗೌರವಕ್ಕೆ ಕುಂದುಬಾರದಂತೆ ಪಾಸಾಗಿದ್ದ. ಹೀಗೆ ಡಿಗ್ರಿ ಮುಗಿಸಿದ ಕಿಟ್ಟಿ ಉದ್ಯೋಗದ ಬೇಟೆಗೆ ತೊಡಗಿದ.

ಊರಲ್ಲಿಯ ಆಫೀಸೊಂದರಲ್ಲಿ ಕೆಲಸ ಸಿಕ್ಕಿತ್ತು. ಕೆಲಸ ಸಿಕ್ಕ ಪ್ರಥಮ ಮಾಸದಲ್ಲೇ ಆಫೀಸಿನಲ್ಲಿ ಚಂಚಲ ಎಂಬ ಹುಡುಗಿಯ ಪರಿಚಯವಾಗಿತ್ತು. ಚೆಲ್ಲುಚಲ್ಲಾದ ಹುಡಿಗಿ. ಮನೆಯಲ್ಲಿ ಗುಡ್ಡದಷ್ಟಿದ್ದರೂ ಟೈಂಪಾಸ್‌ಗಾಗಿ ಕೆಲಸಕ್ಕೆ ಸೇರಿದವಳು. ಸಂಬಳ ಬಹುಶಃ ಪಾವಡರ್ ಲಿಫ್‌ಸ್ಟಿಕ್‌ಗೂ ಸಾಲುತ್ತಿರಲಿಕ್ಕಿಲ್ಲ. ಪಾತರಗಿತ್ತಿಯಂತೆ ಇತ್ತಿಂದಿತ್ತ ಅತ್ತಿಂದಿತ್ತ ಕಿಸಿಕಿಸಿ ನಗುತ್ತಾ ಸುಳಿಯುವ ಅವಳನ್ನು ಕಂಡು ಕಿಟ್ಟಿ ಮರುಳಾದದ್ದರಲ್ಲಿ ಆಶ್ಚರ್ಯವೇನಿಲ್ಲ. ಪ್ರಾರಂಭದಲ್ಲೇ ಆ ಬಗ್ಗೆ ಕಿಟ್ಟಿಗೆ ನಾನು ಎಚ್ಚರಿಸಿದ್ದೆ. ಆದರೆ ಅವನು ಅದನ್ನು ಹಗುರಾಗಿ ಭಾವಿಸಿದ. ಹೀಗಾಗಿ ಬುದ್ಧಿವಾದ ಹೇಳುವುದನ್ನೇ ಬಿಟ್ಟೆ. ಸ್ನೇಹದ ಬೇರುಗಳು ಆಳಕ್ಕೆ ಇಳಿದಿದ್ದವು. ಅವಳ ಜೊತೆ ಆದ ಮಾತುಗಳು, ಆಡಿದ ಚೆಲ್ಲಾಟಗಳು, ಸಮಯ ಸಿಕ್ಕಾಗಲೆಲ್ಲಾ ಅಪ್ಪಿದ್ದು - ಮುತ್ತಿಕ್ಕಿದ್ದು ಹಬ್ಬದ ಸಂಭ್ರಮದಂತೆ ಕೊರೆಯುತ್ತಿದ್ದ. ಅದರಲ್ಲಿ ಎಷ್ಟು ಸುಳ್ಳು– ಎಷ್ಟು ನಿಜ ಇರಬಹುದು ಎಂದು ನಾನು ಲೆಕ್ಕ ಹಾಕುತ್ತಿದ್ದೆನೇ ಹೊರತು ಹುರಿದುಂಬಿಸಿಯೂ ಇರಲಿಲ್ಲ. ಅಸಡ್ಡೆಯನ್ನೂ ತೋರಿಸಿದ್ದಿಲ್ಲ.

ಒಂದು ದಿನ ಎಂದಿನಂತೆ ಚಂಚಲಳ ಬಗ್ಗೆ ಅದೂ ಇದೂ ಹೇಳುತ್ತಿದ್ದ. ಯಥಾ ಪ್ರಕಾರ ನಾನು ಕಿವಿಗೆ ಹಾಕಿಕೊಳ್ಳದೇ ನನ್ನ ಕೆಲಸದಲ್ಲಿದ್ದೆ. ಮಾತಿನ ಮಧ್ಯ ಚಂಚಲಳು ಮದುವೆಯಾಗುವುದಾಗಿ ಹೇಳಿದಾಗ ನನ್ನ ಕಿವಿ ನಿಮಿರಿದ್ದವು.

"ಅವಳ ಅಭಿಪ್ರಾಯ ಕೇಳಿದೆಯಾ?" ಎಂದಾಗ "ಪ್ರಯತ್ನ ಪಟ್ಟೆ. ಧೈರ್ಯ ಸಾಲುತ್ತಿಲ್ಲ. ದಯವಿಟ್ಟು ನೀನು ನನ್ನ ಪರವಾಗಿ ಕೇಳುತ್ತೀಯಾ" ಎಂದು ಯಾಚಿಸಿದ್ದ. "ಬೋಳಿ ಮಗನೇ, ಎಲ್ಲಾ ಮಜಾ ಮಾಡೋಕೆ ಬರುತ್ತೆ? ಇಂಥ ಸಣ್ಣ ಶಬ್ದ ಕೇಳೋಕೆ ಆಗುದಿಲ್ಲವಾ" ಎಂದು ಝಾಡಿಸಬೇಕೆನಿತು.

ಆದರೆ ಮದುವೆ ಸಣ್ಣ ಶಬ್ದವೆ? ಸಣ್ಣ ವಿಷಯವೆ? ಇಂಥದರಲ್ಲಿ ಸಂಕೋಚ,ಅಳುಕು ಸಹಜವೇ ಸೂಕ್ಷ್ಮವಾಗಿ ಕೇಳಬಹುದಿತ್ತು. ಆದರೆ ಇಲ್ಲಿ ನನ್ನನ್ನು ಉಪಯೋಗಿಸುವುದು

ಅವನಿಗೆ ಸುಲಭ ಹಾಗೂ ಹಿತವಾಗಿದ್ದಿರಬೇಕು. ಮಧ್ಯವರ್ತಿಗಳ ಅವಶ್ಯಕತೆ ಇಂಥಲ್ಲಿ ಬೇಕೇಬೇಕು ಎಂದೆಲ್ಲಾ ವಿಚಾರಿಸಿ ಒಪ್ಪಿಕೊಂಡು ಚಂಚಲಳನ್ನು ಭೇಟಿಯಾಗಬೇಕೆಂದು ಒಂದು ದಿನ ಗೊತ್ತುಮಾಡಿದ್ದೆ. ಆದರೆ ಅವಳು ಆಗ ರಜೆ ಪಡೆದು ಊರಿಗೆ ಹೋಗಿದ್ದಳು. ಒಂದು ತಿಂಗಳು ಕಾಯಬೇಕಾಯ್ತು.

ಅವಳು ವಾಪಸ್ಸು ಬಂದದ್ದು ಕಿಟ್ಟಿಯೇ ಹೇಳಿದ್ದ. ಆವಾಗಿನಿಂದ ಕಿಟ್ಟಿ ಏಕೋ ಸಪ್ಪಗಿದ್ದ. ಖಂಡಿತ ಏನೋ ನಡೆದಿರಬೇಕೆಂದು ಊಹಿಸಿ ಕಾರಣ ಕೇಳಿದರೆ. ಹಾರಿಕೆಯ ಉತ್ತರ ಕೊಟ್ಟು ಬೇಗನೇ ಅವಳ ಅಭಿಪ್ರಾಯ ಕೇಳುವಂತೆ ಒತ್ತಾಯಿಸಿದ್ದ.

ಚಂಚಲಳನ್ನು ಭೆಟ್ಟಿಯಾಗಿ ವಿಷಯ ಪ್ರಸ್ತಾಪಿಸಿದೆ. ಚಂಚಲ ಜೋರಾಗಿ ನಕ್ಕುಬಿಟ್ಟಳು. "ನಮ್ಮ ಮದುವೆ ಯಾವಾಗಲೋ ಆಗಿ ಹೋಗಿದೆ" ಎಂದು ಎನ್ನಬಹುದು ಅಂದುಕೊಂಡಿದ್ದೆ. ಆದರೆ ಅದು ವ್ಯಂಗನಗೆ ಆಗಿತ್ತು. "ಮಿಸ್ಟರ್, ಅದು ಬರಿ ಆಕರ್ಷಣೆ, ಪ್ರೇಮ ಅಲ್ಲ. ನನಗೆ ಕಿಟ್ಟಿಯಲ್ಲಿ ಆಕರ್ಷಣೆ ಇತ್ತು, ಕಿಟ್ಟಿಗೆ ನನ್ನಲ್ಲಿ ಇತ್ತು. ಜಾಲಿಯಾಗಿ ಕಾಲ ಕಳೆಯಬೇಕಾಗಿತ್ತು, ಕಳೆದಾಯ್ತು. ಇನ್ನು ಮದುವೆ ವಿಷಯ. ನನ್ನ ಮದುವೆಯಾಗುವ ಯೋಗ್ಯತೆ ಇದೆಯೇ ಅವನಿಗೆ? ಅವನು ಪಡೆಯುವಷ್ಟು ಸಂಬಳ ನಮ್ಮ ಮನೆ ಕಾಯುವ ಆಳಿಗೆ ಸಿಗುತ್ತದೆ. ಅವನ ಜಾತಿಯನ್ನು ನಾನು ವಿಚಾರಿಸಿಲ್ಲ..." ನಡುವೆ ಬಾಯಿ ಹಾಕಿ ನಾನು ಏನೋ ಹೇಳಲು ಹೋದೆ. ಅವಕಾಶ ಕೊಡದೆ ಅವಳೇ ಮುಂದುವರೆಸಿದ್ದಳು "ನೀವು ಹೇಳುವುದು ಗೊತ್ತು, ಮಿಸ್ಟರ್, ನನಗೆ ಹೆಚ್ಚಿನ ಸಮಯ ಇಲ್ಲ. ನಾನು ಮೊನ್ನೆ ಊರಿಗೆ ಹೋದಾಗ ನನ್ನ ಎಂಗೇಜ್‌ಮೆಂಟ್ ಆಗಿದೆ. ಒಬ್ಬ ಐ.ಎ.ಎಸ್. ಆಫೀಸರನೊಂದಿಗೆ. ಹೋಗಿ ಹೇಳಿ ನಿಮ್ಮ ಫ್ರೆಂಡ್‌ಗೆ".

ಸುದ್ದಿ ಕೇಳಿದ ಕಿಟ್ಟಿ ನಾಲ್ಕೈದು ದಿನ ಸರಿಯಾಗಿ ಊಟವನ್ನೂ ಮಾಡಿರಲಿಲ್ಲ. ಶೂನ್ಯದಲ್ಲಿ ದಿಟ್ಟಿಸುತ್ತಾ ಕುಳಿತಿರುತ್ತಿದ್ದ. ಕೆಲವೇ ದಿನದಲ್ಲಿ ಈ ಭೂತ ಬಿಡುತ್ತದೆಂದು ಬರಿ ಸಾಂತ್ವನದ ನಾಟಕ ಆಡಿದ್ದೆ. ಕೆಲವೇ ದಿನಗಳಲ್ಲಿ ಏನೋ ನಿರ್ಧರಿಸಿದವನಂತೆ ಚೇತರಿಸಿಕೊಳ್ಳುತ್ತಾ ಬಂದ. ಕಣ್ಣುಗಳಲ್ಲಿ ಯಾವುದೋ ದೃಢ ನಿಲುವು ಕಾಣುತ್ತಿತ್ತು. ಆರೇಳು ತಿಂಗಳಲ್ಲಿ ಸಂಪೂರ್ಣ ಬದಲಾದಂತೆ ಅನಿಸಿತ್ತು. ಸಾಹಿತ್ಯ ಕೃತಿಗಳನ್ನು ಓದುತ್ತಾ ತತ್ವಜ್ಞಾನಿಯಂತೆ ಅದೂ ಇದೂ ಕೊರೆಯುತ್ತಾ ಆದರ್ಶವೇ ಮೂರ್ತಿವೆತ್ತಂತೆ ವರ್ತಿಸುತ್ತಿದ್ದ. ಹೆಣ್ಣಿನ ವಿಷಯ ಬಂದಾಗ ಅಸಡ್ಡೆಯಿಂದ ಮುಖ ತಿರುವುತ್ತಿದ್ದ. ಅವನ ಈ ಬದಲಾವಣೆಯಿಂದ ಎಲ್ಲರಿಗೂ ಅಚ್ಚರಿಯಾಗಿತ್ತು. ಆದರೆ ಅದು ಬಹು ದಿನ ಉಳಿಯಲಿಲ್ಲ. ಮತ್ತೊಂದು ಹೆಣ್ಣು ಅವನ ಜೀವನದಲ್ಲಿ ಪ್ರವೇಶಿಸಿತ್ತು. ಹೆಸರು ಶಾಮಲಾ.

ಈಗ ಅವನು ಮೊದಲಿನಂತೆ ಭಾವುಕನಾಗಿ ಒದರುತ್ತಿರಲಿಲ್ಲ. ಎಲ್ಲಾ ಗುಟ್ಟು ಗುಟ್ಟಾಗೇ ಮುಗಿಸಿಬಿಡುತ್ತಿದ್ದ. ನಾನೇ ಕುತೂಹಲ ತಡೆಯಲಾಗದೇ ಕೆಣಕಿದಾಗ ಹಾರಿಕೆಯ ಉತ್ತರ ಕೊಟ್ಟು ಪರಾರಿಯಾಗಿ ಬಿಡುತ್ತಿದ್ದ. ಹೀಗಾಗಿ ಒಂದೂ